ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೦

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೨

೩೮

ಫೆಬ್ರವರಿ ೧೯೮೦

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೦

MANAVIKA KARNATAKA, Kannada quarterly of the University of Mysore. Volume 10, Number 2, February 1980. Edited by Dr. B. R. Gopal and Dr. B. S. Srikantaradhya.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಎಚ್. ನರಸಣ್ಣ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮೈಸೂರು ೫೭೦೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ಸಿ. ಎನ್. ವೇಣುಗೋಪಾಲ್	ಉಪಪ್ರಾಧ್ಯಾಪಕರು, ಸಾಮಾಜಿಕ ವಿಜ್ಞಾನ ವಿಭಾಗ, ಜವಹರಲಾಲ್ ನೆಹ್ರೂ ವಿಶ್ವವಿದ್ಯಾನಿಲಯ, ನವದೆಹಲಿ ೧೧೦೦೬೭
೨. ಪಿ. ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜಾನಪದ ವಸ್ತುಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬.
೩. ಮಾವಿನಕುಳಿ ಶ್ರೀನಿವಾಸ	ಅಧ್ಯಾಪಕ, ಸಮಾಜಶಾಸ್ತ್ರ ವಿಭಾಗ, ಅಂಚೆ ಮತ್ತು ತೆರಪಿನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦೦೦೬.
೪. ಬಿ. ಆರ್. ಕೃಷ್ಣ	ಸಮಾಜಶಾಸ್ತ್ರ ಅಧ್ಯಾಪಕ. ಎಸ್. ಜೆ. ಎಮ್. ಕಾಲೇಜು ಚಿತ್ರದುರ್ಗ.
೫. ಬಿ. ಎನ್. ಸೋಮೇಗೌಡ	ಸಮಾಜಶಾಸ್ತ್ರ ಅಧ್ಯಾಪಕ, ಎಸ್. ಎ. ಸಿ. ಮೊದಲನೆಯ ದರ್ಜೆ ಕಾಲೇಜು, ಚನ್ನರಾಯಪಟ್ಟಣ–೫೭೩೧೧೬.
೬. ಎಚ್. ಎಸ್. ಸುಜಾತ	ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೫೭೦೦೦೬.
೭. ಎನ್. ಎಸ್. ಶಾರದಾಪ್ರಸಾದ್	ಭಾಷಾಂತರ ಸಹಾಯಕರು, ಪಠ್ಯಪುಸ್ತಕ ಮತ್ತು ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೫೭೦೦೦೬.
೮. ಪ್ರಧಾನ್ ಗುರುದತ್ತ	ರೀಡರ್, ಪಠ್ಯಪುಸ್ತಕ ಮತ್ತು ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು–೫೭೦೦೦೬.

ಸಿ. ಎನ್. ವೇಣುಗೋಪಾಲ್

ಆನಂದ ಕುಮಾರಸ್ವಾಮಿ ಮತ್ತು ಸಾಮಾಜಿಕ ಮೌಲ್ಯಗಳು*

ಆನಂದ ಕೆಂಟಿಶ್ ಕುಮಾರಸ್ವಾಮಿ (೧೮೭೭–೧೯೪೭) ಅವರ ಜೀವನ ಪ್ರತಿಭಾಪೂರ್ಣವಾದುದು. ಅವರು ಭಾರತೀಯ ಕಲೆಯ ಇತಿಹಾಸಕಾರರಲ್ಲಿ ಅಗ್ರಗಣ್ಯರು. ಅವರು ಏಶಿಯದ ಮತ್ತು ಭಾರತೀಯ ಕಲೆಯನ್ನು ಪಾಶ್ಚಾತ್ಯರಿಗೆ ಸುಗಮರೀತಿಯಲ್ಲಿ ಬೋಧಿಸಿದರು. ಕುಮಾರಸ್ವಾಮಿಯವರಿಗೆ ಮುಂಚೆ ಇ.ಬಿ.ಹ್ಯಾವೆಲ್, ಪರ್ಸಿ ಬ್ರೌನ್, ಫರ್ಗುಸನ್ ಮುಂತಾದ ಶ್ರೇಷ್ಠಕಲಾವಿಮರ್ಶಕರು ಭಾರತೀಯ ಕಲೆಗೆ ಸಂಬಂಧಿಸಿದಂತೆ ಉತ್ತಮ ಕೃತಿಗಳನ್ನು ಬರೆದಿದ್ದರು. ಆದರೆ ಕಲೆಯದರ್ಶನವನ್ನು ನೀಡಲಿಲ್ಲ. ಕುಮಾರ ಸ್ವಾಮಿ ದಾರ್ಶನಿಕರು ಮತ್ತು ಸಮಾಜಶಾಸ್ತ್ರಜ್ಞರು ಆಗಿದ್ದರು. ಅವರು ಆಧುನಿಕ ಭಾರತದ ಸಮಾಜ ಶಾಸ್ತ್ರಕ್ಕೆ ಅವರ ಕೃತಿಗಳ ಮೂಲಕ ಸೇವೆಮಾಡಿದರು.

ಈ ಲೇಖನದ ಉದ್ದೇಶ ಕುಮಾರಸ್ವಾಮಿಯವರ ಸಾಮಾಜಿಕಪ್ರಜ್ಞೆ ಮತ್ತು ಸಾಮಾಜಿಕ ವಿಶ್ಲೇಷಣೆಗಳನ್ನು ಕುರಿತು ಒಂದು ಕಿರುಪರಿಚಯವನ್ನು ಕೊಡುವುದೇ ಆಗಿದೆ. ನನಗೆ ಅವರ ಕಲೆಗೆ ಸಂಬಂಧಿಸಿದ ಪಾರಿಭಾಷಿಕ ಗ್ರಂಥಗಳ ಮೇಲೆ ಒಂದು ವಿಸ್ತಾರವಾದ ಲೇಖನ ಬರೆಯುವ ಉದ್ದೇಶವಿದೆ. ಸದ್ಯಕ್ಕೆ ಅವರ ಕೆಲವು ಲೇಖನಗಳ ಆಧಾರದ ಮೇಲೆ ಅವರ ಸಾಮಾಜಿಕ ನೋಟವನ್ನು ವಿವರಿಸುತ್ತೇನೆ. ಇಲ್ಲಿ ನಾನು ಆಯ್ದ ಮೂರು ವಿಷಯಗಳೆಂದರೆ (೧) ಭಾರತೀಯ ಸಂಪ್ರದಾಯದ ಶ್ರೇಷ್ಠತೆ; (೨) ಅಭಿಜಾತ ಕಲೆ ಮತ್ತು ನಾಡಿಗರ ಕಲೆಗಳಿಗಿರುವ ಸಂಬಂಧ; ಮತ್ತು (೩) ಭಾರತೀಯ ಕಲೆಯಲ್ಲಿ ಪ್ರತೀಕ ಗಳಸ್ಥಾನ. ಕುಮಾರಸ್ವಾಮಿಯವರ ತತ್ವಗಳನ್ನು ಇಲ್ಲಿ ನಾನು ಪದಶಃ ವಿವರಿಸಿಲ್ಲ.

೧. ಕುಮಾರಸ್ವಾಮಿಯವರು ೧೯೧೮ರಲ್ಲಿ ಬರೆದ ಗ್ರಂಥ Dance of Shiva[1] ಹದಿನಾಲ್ಕು ಲೇಖನಗಳನ್ನು ಒಳಗೊಂಡಿದೆ. ಇವುಗಳಲ್ಲಿ ಹೆಚ್ಚಾಗಿ ಸಾಮಾಜಿಕ ಮೌಲ್ಯಗಳನ್ನು ಕುಮಾರಸ್ವಾಮಿ ವಿಶ್ಲೇಷಿಸಿದ್ದಾರೆ. ವರ್ಣವ್ಯವಸ್ಥೆ, ಭಾರತೀಯ ಕಲೆಯ ವಿಕಾಸ, ಭಾರತೀಯ ಕಲಾ ತತ್ವಗಳು, ಆಧುನಿಕ ಭಾರತದ ಯುವ ಸಮಾಜ, ಇತ್ಯಾದಿ ವಿಷಯಗಳು ಈ ಕೃತಿಯಲ್ಲಿವೆ. ಇವರು ಪಾಶ್ಚಾತ್ಯರ ಬೋಧನೆ ಗೆಂದು ಬರೆದ ಈ ಲೇಖನಗಳಲ್ಲಿ ಸಮರ್ಥನೆ ಹೆಚ್ಚು, ವಿಮರ್ಶೆ ಕಡಿಮೆ. ಆದರೆ ಇವರು ಹೇಳಿದ ಮಾತುಗಳಲ್ಲಿ ಆಳವಾದ ಯೋಚನೆಯಿದೆ; ವಿದ್ವತ್ತಿದೆ; ಎಲ್ಲದಕ್ಕಿಂತ ಮೇಲಾಗಿ ಅವರ ಮುಖ್ಯ ದೃಷ್ಟಿ—ತುಲನೆ—ಇಲ್ಲಿ ಕಾಣಿಸಿದೆ.

ಭಾರತೀಯ ವರ್ಣವ್ಯವಸ್ಥೆಯಲ್ಲಿ ಚತುರ್ವರ್ಣಗಳ ನಡುವೆ ಉಚ್ಚ-ನೀಚ ಭೇದಗಳಿದ್ದರೂ ಅವುಗಳನ್ನು ಒಂದಾಗಿಸಿದ ಮೂಲತತ್ವವೊಂದಿತ್ತು. ಅದು ಎಲ್ಲರೂ ಸಮಾಜದ ಏಳ್ಗೆಯಲ್ಲಿ ಸಮ ಭಾಗಿಗಳು ಎಂಬುದು. ವೈದಿಕ ಸಂಪ್ರದಾಯದ ಯಜ್ಞಯಾಗಾದಿಗಳಲ್ಲಿ, ದೇವತಾ ಪೂಜೆಯಲ್ಲಿ, ನಾಲ್ಕು ವರ್ಣಗಳಿಗೂ ಸಮಾನಾಧಿಕಾರವಿತ್ತು. ಶೂದ್ರನು ಕಡಿಮೆಯಾದರೂ ಅವನಿಗೆ ವಿಶೇಷವಾದ ವ್ಯಕ್ತಿ ಸ್ವಾತಂತ್ರ್ಯವಿತ್ತು. ಬ್ರಾಹ್ಮಣನು ಅಥವಾ ಕ್ಷತ್ರಿಯನು ಮಾಡಿದ ತಪ್ಪಿಗೆ ಹೆಚ್ಚಿನ ದಂಡಕೊಡ ಬೇಕೆಂದು ಮನುವಿನ ಕಟ್ಟಳೆಯಿತ್ತು. ಅಲ್ಲದೆ ಉನ್ನತ ವರ್ಣಕ್ಕೆ ಬಂಧ ನಿರ್ಬಂಧಗಳು ಹೆಚ್ಚು.[2]

ವರ್ಣ ವ್ಯವಸ್ಥೆ ವರ್ಗಗಳ ನಡುವೆ ಇಂದು ಆಧುನಿಕ ಸಮಾಜದಲ್ಲಿ ಕಂಡುಬರುವ ವೈಷಮ್ಯ, ಈರ್ಷ್ಯೆಗಳನ್ನು ತಡೆದಿಟ್ಟಿತು. ವಂಶಾನುಗತವಾಗಿ ಬಂದ ಕಸಬುಗಳಿಂದ ಪರಸ್ಪರ ವರ್ಣಗಳಲ್ಲಿ ಅಸೂಯೆ ಕಡಿಮೆಯಾಯಿತು. ತಾತ್ವಿಕ ದೃಷ್ಟಿಯಿಂದ ಬ್ರಾಹ್ಮಣನ ಅಥವಾ ಕ್ಷತ್ರಿಯನ ಬಾಳಿನ ಪರಿಪೂರ್ಣತೆ ಈ ಕಡಿಮೆಯು ವರ್ಣಗಳಿಂದ ಆಯಿತು. ಒಟ್ಟಿನಲ್ಲಿ ಭಾರತದಲ್ಲಿ ಪ್ರಜಾಸ್ವಾಮ್ಯವಿಲ್ಲದಿದ್ದರೂ, ಪರಸ್ಪರರ ಸಹಜೀವನದಿಂದ, ಪ್ರಜಾತತ್ವ ವರ್ಣವ್ಯವಸ್ಥೆಯಲ್ಲಿ ಅಳವಡಿಸಲ್ಪಟ್ಟಿತು.[3] ಪಾಶ್ಚಾತ್ಯರ ಪ್ರಜಾಪ್ರಭುತ್ವದಲ್ಲಿ ತಾತ್ವಿಕವಾಗಿ ವರ್ಣಭೇದಗಳಿಲ್ಲ. ಆದರೆ ಅವರಲ್ಲಿ ಅಭಿಜಾತರು (aristocrates), ಮಧ್ಯಮ ವರ್ಗದವರು, ಮತ್ತು ಕಾರ್ಮಿಕವರ್ಗಗಳ ನಡುವೆ ಅಳಿಯಲಾಗದ ಅಂತರವಿದೆ . ಕೆಲಸದ ಗಳಿಗೆಗಳನ್ನು ಬಿಟ್ಟು ಇಂದಿಗೂ ಈ ವರ್ಗಗಳು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಎಂದಿಗೂ ಒಂದಾಗಿಲ್ಲ. ಅಲ್ಲದೆ ಸ್ವಾಮಿವರ್ಗ (Bourgeoisie) ಮತ್ತು ಕಾರ್ಮಿಕವರ್ಗ (Proletariat) ಇವುಗಳ ನಡುವೆ ಇರುವ ವ್ಯಕ್ತಿ ವೈಷಮ್ಯವೆಷ್ಟು!

ಭಾರತೀಯ ವರ್ಣಗಳಲ್ಲಿ ಜ್ಞಾನಾರ್ಜನೆಯ ಮಾರ್ಗದಲ್ಲಿ ಕೆಲವು ಅಧಿಕಾರ ಭೇದಗಳಿದ್ದರೂ, ಭಾರತೀಯ ಸಮಗ್ರ ಸಂಸ್ಕೃತಿಯ ಪ್ರಭಾವ (ethos of Indian culture) ಎಲ್ಲ ವರ್ಣಗಳ ಮೇಲೆಯೂ ಹರಡಿತ್ತು. ಇದು ಕೇವಲ ಭಾವುಕರ ಮಾತಲ್ಲ; ಇದು ನಿತ್ಯ ಸತ್ಯ. ಆದ್ದರಿಂದ, ಕೆಲವು ಸಾಂದರ್ಭಿಕ ಭೇದಗಳಿದ್ದರೂ, ಸಮಾನಸಂಸ್ಕೃತಿಯಿತ್ತು. ಈ ಅಂಶವನ್ನು ಮತ್ತೆ ನೋಡೋಣ.

ಭಾರತೀಯ ಕಲೆಗೂ ವೈದಿಕ ಮತ್ತು ಔಪನಿಷದಿಕ ಸಂಪ್ರದಾಯಗಳಿಗೂ ಸಾಮರಸ್ಯವಿತ್ತು. ವೇದಗಳ ಕಾಲದ ಯೂಪಸ್ತಂಭ ಮತ್ತು ಯಾಗ ವೇದಿಕೆಗಳ ರಚನೆಯಲ್ಲಿ ಶಿಲ್ಪಿಗಳು ಅಥವಾ ಬಡಗಿಗಳು ಮುಖ್ಯಪಾತ್ರವನ್ನು ಹೊಂದಿದ್ದರು. ಶಿಲ್ಪಕಾರ ಮೂವತ್ತೆರಡು ಶಾಸ್ತ್ರಗಳನ್ನು ಅರಿತವನಾಗ ಬೇಕು; ಅವನ ವೈಯಕ್ತಿಕ ಜೀವನ ಶ್ರದ್ಧಾಯುಕ್ತವೂ, ಸರಳವೂ, ನೈತಿಕವೂ ಆಗಿರಬೇಕು; ಅವನು ಯಾಗದ ಪುರೋಹಿತನಂತೆ ಕೈಗೆ ಕುಶೆಯನ್ನು ಧರಿಸಿ ಏಕಾಗ್ರತೆಯಿಂದ ತನ್ನ ಕಸುಬನ್ನು ಪೂರೈಸಬೇಕು ಮುಂತಾದ ನಿಯಮಗಳಿದ್ದವು. ಕಲೆ ಯೋಗದ ಒಂದು ರೂಪವಾಯಿತು.

ವೇದಗಳ ಕಾಲದ ಯಾಗಕ್ಕೂ ಕಲಾಕಾರನಿಗೂ ಇದ್ದ ನೆಂಟು ಕೆಲವು ಮೂಲಭೌತಿಕ ಅಂಶಗಳನ್ನು ಸಾರಿತು. ಭಾರತದ ಎಲ್ಲಾ ಹಂತದ ಧರ್ಮಗಳಲ್ಲೂ ವೈದಿಕ, ಔಪನಿಷದಿಕ, ಭಕ್ತಿ ಇತ್ಯಾದಿ—ಇರುವ ಮುಖ್ಯ ಅಂಶ ಸೃಷ್ಟಿ-ಸ್ಥಿತಿ-ಲಯಗಳ ಅಭಿನಯ. ಹವಿಸ್ಸಿನಿಂದ, ಧ್ಯಾನದಿಂದ, ಭಕ್ತಿಯಿಂದ ಜಗತ್ತು (cosmos) ಪುನರುಚ್ಚರಿಸಲ್ಪಡುತ್ತದೆ. ಅಭಿನಯಕ್ಕೂ (mimesis) ಭಾರತೀಯ ಸಂಸ್ಕೃತಿಗೂ ಅಚ್ಚಳಿಯದ ನೆಂಟು. "ಭಾರತ"ವೆಂದರೆ ಮುಖವಾಡಗಳನ್ನು ಧರಿಸಿದ ನಟರ ನಾಡು ಎಂದೊಬ್ಬರು ಹೇಳಿದ್ದಾರೆ.[4] ಭರತಮುನಿಯ ನಾಟ್ಯಶಾಸ್ತ್ರದಲ್ಲಿನ ಮುಖ್ಯದೃಷ್ಟಿ ಮನೋರಂಜನೆಯ ಅಭಿನಯ. "ನೃತ್ಯ" ಅಭಿನಯದ ಒಂದು ಸ್ವರೂಪ; "ನೃತ್ಯ" ದಿಂದ ಕೇವಲ ಮನೋರಂಜನೆ ಸಾಧ್ಯವಾಗುತ್ತದೆ. ಭರತಮುನಿಯ ಪ್ರಕಾರ ಹವಿಸ್ಸನ್ನು ಸ್ವೀಕರಿಸುವ ಇಂದ್ರ, ವರುಣ, ಅಗ್ನಿಗಳೂ ನಟರೆ. ಆದ್ದರಿಂದ ಕಲಾಕಾರರು ವಿಶ್ವಕರ್ಮನ ಸಂಗಾತಿಗಳು. ಅಂತೆಯೆ ನಾಲ್ಕು ವರ್ಣಗಳು ಈ ಮಹಾಯಜ್ಞ (mimesis of cosmos) ದಲ್ಲಿ ಸಮಭಾಗಿಗಳು. ಇದೇ "ಬ್ರಹ್ಮನಿಂದ ನಾಲ್ಕು ವರ್ಣಗಳು ಹುಟ್ಟಿದವು" ಎನ್ನುವದರ ಅರ್ಥ. ಬ್ರಹ್ಮ ಅಥವಾ ಪುರುಷನ (cosmic spirit) ನಾಲ್ಕು ಭಾಗಗಳು ಈ ವರ್ಣಗಳು.[5] ಅಭಿನಯದ ಆನಂದದಲ್ಲಿ ಉಚ್ಚ ನೀಚ ಭಾವನೆಯೆಲ್ಲಿದೆ? ಅದಕ್ಕಾಗಿಯೇ ವರ್ಣವ್ಯವಸ್ಥೆಯಿಂದ ಮಾತ್ರ ಭಾರತೀಯ ಸಂಸ್ಕೃತಿಯು ಉಳಿಯಲು ಸಾಧ್ಯ.

ಬೌದ್ಧ,[6] ಜೈನ ಮತಗಳು ಮತ್ತು ಉಪನಿಷತ್ತುಗಳು ಕಲಾಕಾರನನ್ನು ನೋಡಿದ ದೃಷ್ಟಿ ಬೇರೆ. ಕಲೆ ಸಾಮಾನ್ಯರ, ಗೃಹಸ್ಥರ ಜೀವನಕ್ಕೆ ಬೇಕಾದ ಸಲಕರಣೆ. ಸಾಮಾನ್ಯರ ದೃಷ್ಟಿ ಕಾಮ, ಕಾಂಚನಗಳಿಂದ ಕೂಡಿದೆ; ಅವರು ಐಂದ್ರಿಕ ಸುಖಕ್ಕೆ (sensuous pleasure) ಕಾತರಪಡುತ್ತಾರೆ. ಕಲಾಕಾರ ಈ ಬಗೆಯ ಜನರಿಗೆ ಸಹಾಯಮಾಡುತ್ತಾನೆ. ಕಲೆ ಐಂದ್ರಿಕಮಾರ್ಗದಲ್ಲಿ ನಡೆಯುತ್ತದೆ. (Art is hedonistic) ಆದರೆ ಭಿಕ್ಷುಗಳಿಗೆ, ಮುನಿಗಳಿಗೆ, ಅರ್ಹಂತರಾಗಲು ಬಯಸುವವರಿಗೆ ಕಲೆ ಸಲ್ಲದು. ಈ ದೃಷ್ಟಿ ಮೊದಲ ಹಂತದಲ್ಲಿದ್ದು ಮುಂದೆ ಮಾಯವಾಯಿತು. ಉದಾಹರಣೆಗೆ

ಮಹಾಯಾನ ಬೌದ್ಧಧರ್ಮ ಮತ್ತು ಮಧ್ಯಕಾಲದ ಜೈನಧರ್ಮಗಳಲ್ಲಿ ಕಲಾಸೃಷ್ಟಿಗೆ ವರ್ಚಸ್ಸುಬಂತು. ಕಲೆಯಿಂದ ಕರ್ಮದ ಬಿಡುಗಡೆ, ಕರ್ಮ ಸಂವರ ಎಂಬ ಹೊಸ ವಿವೇಚನೆಯಾಯಿತು. ಕಲೆಗಾರ ಪುನಃ ಪರಮಪದವನ್ನು ಏರಿದನು.

ಶಿವ-ನಟರಾಜನ ತಾಂಡವನೃತ್ಯದಲ್ಲಿ ಭಾರತೀಯ ಧರ್ಮ ಅಭಿವ್ಯಕ್ತವಾಗಿದೆ. ಇಲ್ಲಿ ಮೂರು ಅಂಶಗಳನ್ನು ಕಾಣಬಹುದು. ಒಂದು, ಶಿವ-ನಟರಾಜ ತನ್ನ ನೃತ್ಯದಿಂದ ಜಗತ್ತಿನ ಚಲನವಲನಗಳನ್ನು (ಸೃಷ್ಟಿ-ಸ್ಥಿತಿ-ಲಯ) ನಟಿಸುತ್ತಾನೆ. ಎರಡು, ನಟರಾಜನು ಮಾಯೆಯ ಪಾಶದಿಂದ ಜನಗಳನ್ನುಳಿಸಿ ಅವರನ್ನು ಮೋಕ್ಷಕ್ಕೆ ಕೊಂಡೊಯ್ಯುತ್ತಾನೆ. ಮೂರು, ನಟರಾಜನ ನೃತ್ಯರಂಗ ಮಾನವ ಹೃದಯದಲ್ಲಿಯೇ ಅಡಗಿದೆ.[7] ಶಿವ-ನಟರಾಜನ ಶಿಲಾ ಅಥವಾ ಲೋಹದ ಮೂರ್ತಿಗಳು ತಮಿಳು ನಾಡಿನ ಕಲಾಪ್ರಜ್ಞತೆಗೆ ಅಮೋಘವಾದ ಸಾಕ್ಷಿಗಳಾಗಿವೆ.

ಕುಮಾರಸ್ವಾಮಿಯವರ ಇನ್ನೊಂದು ಕೃತಿ: The Christian and Oriental Philosophy of Art.[8] ಇಲ್ಲಿ ಕುಮಾರಸ್ವಾಮಿಯವರು ಗಮನಾರ್ಹವಾದ ತುಲನೆಗಳನ್ನು ಮಾಡಿದ್ದಾರೆ. ಕುಮಾರಸ್ವಾಮಿಯವರ ಪ್ರಕಾರ ಸಂಪ್ರದಾಯವೆಂದರೆ ಕಾಲ ಅಥವಾ ದೇಶಗಳಿಗೆ ಬದ್ಧವಾದ ಕಟ್ಟಳೆ. ಅನೂಚಾನವಾಗಿ ಬಂದ ವ್ಯವಸ್ಥೆಯಲ್ಲಿ ಅವರು ಎರಡು ಹಂತಗಳಲ್ಲಿ ಮಾನವ ಕಲಾ ವಿಕಾಸವನ್ನು ನೋಡಿದ್ದಾರೆ. ಒಂದು: ಗ್ರೀಕ್, ರೋಮನ್, ಗೋಥಿಕ್ ಮತ್ತು ಏಶಿಯಾಟಿಕ್ ಕಲೆಗಳನ್ನು ಒಳಗೊಂಡ ಸಂಪ್ರದಾಯ; ಇದರ ಪರಿಪೂರ್ಣತೆ ಮಧ್ಯಯುಗದಲ್ಲಾಯಿತು. ಎರಡು: ರೆನೈಸಾನ್ಸ್ (Renaissance)ನಡೆದ ನಂತರ ಬಂದ ಆಧುನಿಕ ಕಲೆ. ಪಾಶ್ಚಾತ್ಯ ಪೌರ್ವಾತ್ಯ ದೇಶಗಳೆಂಬ ವ್ಯತ್ಯಾಸ ಇಲ್ಲಿಲ್ಲ.

ಈ ಸಂಪ್ರದಾಯ ಬಹು ಹಿಂದೆಯೆ ಮೂಡಿದ್ದರೂ, ಮಧ್ಯಯುಗದಲ್ಲಿ ಹೆಚ್ಚು ಚೈತನ್ಯದಿಂದ ಕೂಡಿತ್ತು. ಆಧುನಿಕ ಜಗತ್ತಿನ ಸಂಪರ್ಕಸಾಧನೆಗಳ ಮೂಲಕ ಪರಸ್ಪರ ದೇಶಗಳಲ್ಲಿ ಬೇರೂರಿದ ಈ ಸಂಪ್ರದಾಯವನ್ನು ಅರಿಯಲು ಸಾಧ್ಯವಾಗಿದೆ. ಈ ದೇಶಗಳು ಕಾಲಗಳು ಬೇರೆಯಾದರೂ ಮೂಲತತ್ವಗಳು ಒಂದೇ. ಅದಕ್ಕೆ ಇದನ್ನು Perennial Philosophy ಎಂದು ಕರೆಯಬಹುದು.[9] ಒಂದು : ಸಂಪ್ರದಾಯದಲ್ಲಿ ಕಲೆಗೂ ಜಗತ್ತಿನ ಚಟುವಟಿಕೆಗಳಿಗೂ ಮೇಲೆ ಹೇಳಿದಂತೆ ಅಭಿನಯಪೂರ್ವಕ ಸಂಬಂಧವಿದೆ (mimetic relationship). ಎರಡು, ಸಂಪ್ರದಾಯದಲ್ಲಿ ಕಲೆ ಜೀವಿಗಳ ಪಡಿಯಚ್ಚಲ್ಲ. ಅದು ಪ್ರತೀಕಗಳಿಂದ (symbols) ಜೀವಿಗಳ ಭಾವಗಳನ್ನು ರೂಪಿಸುತ್ತದೆ. ಇಲ್ಲಿ ಸಮ್ಯಗ್ ದೃಷ್ಟಿ ಮುಖ್ಯವಾಗಿ ಕಲೆ ಮತ್ತು ರಸಿಕರ ನಡುವಣ ಭೇದಗಳು ಮಾಯವಾಗುತ್ತವೆ. ಮೂರು: ಕಲೆ ಮತ್ತು ಸಾಮಾನ್ಯಜೀವನಕ್ಕೆ ಭೇದವಿಲ್ಲ. ಮೂರ್ತಿಗಳನ್ನು ಕಡೆದ ಕಲಾಕಾರ ನಾಡಿನ ಸಾಮಾನ್ಯ ಬಡಗಿ ಅಥವಾ ಕುಂಬಾರನಿಂದ ಬೇರೆಯಲ್ಲ. ಅವರ ಪ್ರಕಾರ In our traditional view of art, in folk-art, Christian and Oriental art, there is no essential distinction of a fine and useless art from a utilitarian craftmanships.[10] ಕಲೆಗೋಸ್ಕರ ಕಲೆ ಎಂಬ ಉದ್ದೇಶ ಇಲ್ಲಿ ಕಿಂಚಿತ್ತೂ ಇಲ್ಲ. ಕಲೆಯ ಉದ್ದೇಶ ಒಂದೆ; ಅದು ಮುಕ್ತಿಯ ಪರಮ ಸೋಪಾನಕ್ಕೆ ರಸಿಕರನ್ನು ಕೊಂಡೊಯ್ಯುತ್ತದೆ. ಇದನ್ನು ಮತ್ತೆ ವಿಚಾರಿಸೋಣ.

ಹೀಗೆ ಸಂಪ್ರದಾಯ ಆಧುನಿಕ ಅಥವಾ ಪೋಸ್ಟ್-ರಿನೈಸಾನ್ಸ್ ಕಲೆಯಿಂದ ಸ್ಪಷ್ಟವಾಗಿ ಬೇರೆಯಾಗಿದೆ. ಸಂಪ್ರದಾಯ ರಸವಂತವಾದುದು. ಅದರಲ್ಲಿ ಜೀವದ ಓಜಸ್ಸಿದೆ. ವೃಕ್ಷದಲ್ಲಿ ಬಳ್ಳಿಯಲ್ಲಿ ಹರಿದ ಜೀವರಸ ಸಂಪ್ರದಾಯದ ಕಲೆಯಲ್ಲಿಯೂ ಹರಿಯುತ್ತದೆ. ಈ ರಸದ ಅನುಭಾವ ಕಲಾಕೃತಿ ಮತ್ತು ರಸಿಕರ ಸಂಪರ್ಕದಿಂದ ಸ್ಫುರಿಸಿ ಅನುಭವಕ್ಕೆ ಆನಂದಕ್ಕೆ ಕಾರಣವಾಗುತ್ತದೆ. ಆಧುನಿಕ ಕಲೆಯಲ್ಲಿ ಕಲಾಕಾರನ ವೈಯಕ್ತಿಕ ತುಮುಲಗಳು ಕಲಾರೂಪದಲ್ಲಿ ಪರಿಣಮಿಸಿ, ರಸಿಕನಿಗೂ ಕಲಾಕೃತಿಗೂ ಇದ್ದ ಸಹಜಸಂಪರ್ಕ ನಾಶವಾಗುತ್ತದೆ. ರಸಭಂಗವಾಗುತ್ತದೆ. ಅಲ್ಲದೆ ಆಧುನಿಕ ಕಲೆ ಜೀವಿಗಳ ಪಡಿಯಚ್ಚಾಗಿದ್ದು ಭೌತಿಕ ಸೌಂದರ್ಯಕ್ಕೆ ಹೆಚ್ಚು ಗಮನಕೊಡುತ್ತದೆ. ಸಂಪ್ರದಾಯದ ಕಲೆಯಲ್ಲಿ ಸೌಂದರ್ಯ

ವೆಂದರೆ, ನೋಡುವುದಕ್ಕೆ ಚೆನ್ನಾಗಿದೆ, ಅಥವಾ (ಸಂಗೀತವಾದರೆ) ಕೇಳುವುದಕ್ಕೆ ಇಂಪಾಗಿದೆ ಎಂದಲ್ಲ. ರಸಿಕ ಅಥವಾ ಸಹೃದಯ ತನ್ನ ಸಂಚಾರಿ ಭಾವಗಳಿಂದ ನೋಟ ಅಥವಾ ಇಂಪುಗಳನ್ನು ಕಲಾಕೃತಿ ಅಥವಾ ಸಂಗೀತಕ್ಕೆ ನೀಡಿ ರಸಾಸ್ವಾದನೆಮಾಡುತ್ತಾನೆ. ಒಟ್ಟಿನಲ್ಲಿ ಕಲೆ ಅಥವಾ ಕಾವ್ಯ ಹುಚ್ಚು ಮನಸ್ಸಿನ ಹತ್ತು ಮುಖಗಳು ಎಂಬ ನುಡಿಗೂ ಸಂಪ್ರದಾಯಕ್ಕೂ ಬಹುದೂರ! ಸಮಷ್ಟಿಯ ದೃಷ್ಟಿ ಸಂಪ್ರದಾಯದ ತಳಹದಿಯಾಗಿ, ವೈಯಕ್ತಿಕ ವೈಚಿತ್ರಗಳಿಗೆ ಅಣೆಕಟ್ಟಾಗಿದೆ.

ಗ್ರೀಕ್. ರೋಮನ್, ಗೋಥಿಕ್ (ರೋಮನ್ ಕ್ಯಾಥೋಲಿಕ್) ಕಲೆಗೂ ಏಶಿಯದ ಕಲೆಗೂ ಸಾಮ್ಯವಿದೆ. ನಿಜ. ಆದರೆ ಇಸ್ಲಾಂನಲ್ಲಿ ಶಿಲ್ಪಕಲೆ ಇತ್ಯಾದಿಗಳಿಗೆ ವಿರೋಧವಿದೆಯಲ್ಲ? ಇದಕ್ಕೆ ಕುಮಾರಸ್ವಾಮಿಯವರು ಗಮನಾರ್ಹವಾದ ಉತ್ತರ ಹೇಳಿದ್ದಾರೆ. ಇಸ್ಲಾಮಿನ ಪ್ರವಾದಿಗಳು ಪ್ರತೀಕ ಕಲೆಗೆ ಅಡ್ಡಿ ಬರಲಿಲ್ಲ; ಅವರು ಜೀವಿಗಳ ಪಡಿಯಚ್ಚನ್ನು ತಡೆಗಟ್ಟಿದ್ದರು. ಅದು ಸೃಷ್ಟಿಕರ್ತನ ಕೆಲಸವನ್ನು ಅನುಕರಿಸಿ ಅವನಿಗೆ ಅಪಮಾನಮಾಡುತ್ತದೆಂದು. ಮೇಲೆ ಹೇಳಿದಂತೆ ಜೀವಿಗಳನ್ನು ರೋಮನ್ ಕ್ಯಾಥೋಲಿಕ್ ಅಥವಾ ಭಾರತೀಯ ಕಲೆ ಪ್ರತಿನಿಧಿಸುವುದಿಲ್ಲ. ಅಭಿನಯಕ್ಕೂ (mimesis) ಮತ್ತು ಅನುಕರಣೆಗೂ (imitation)ತಾತ್ವಿಕ ವ್ಯತ್ಯಾಸ ಇದೆ. ಅದ್ದರಿಂದ ಇಸ್ಲಾಮಿನ ನೋಟ ಸಂಪ್ರದಾಯಕ್ಕೆ ವಿರೋಧವಾಗಿಲ್ಲ.

೨. ಕುಮಾರಸ್ವಾಮಿಯವರ ಇನ್ನೊಂದು ವಿಶಿಷ್ಟ ಕೊಡುಗೆ ಅಭಿಜಾತ (classical or aristocratic)) ಕಲೆ ಮತ್ತು ನಾಡಿಗರ ಕಲೆ (folk art) ಗಳ ನಡುವೆ ಇರುವ ಸಾಮ್ಯವನ್ನು ತೋರಿಸಿದ್ದು.[10] ಕವಿಯ ಕಾವ್ಯಕ್ಕೂ ನಾಡಿಗರ ಲಾವಣಿ, ಇತ್ಯಾದಿ ಕೃತಿಗಳಿಗೂ ವ್ಯತ್ಯಾಸವೇನಿಲ್ಲ. ಮಾರ್ಗೀಯ ಅಥವಾ ಅಭಿಜಾತ ಕಲೆಗೂ ಮತ್ತು ದೇಶಿ ಅಥವಾ ನಾಡಿಗರ ಕಲೆಗೂ ಅಂತಿಮ ಉದ್ದೇಶ ಒಂದೇ—ಅದು ಜನತೆಯ ಆಧ್ಯಾತ್ಮಿಕ ಸಾಧನೆ. ಅವರು ಹೀಗೆ ಬರೆಯುತ್ತಾರೆ: " The attempt to distinguish aristocratic from popular motifs in traditional literature is fallacious ; all traditional art is a folk art in the sense that it is the art of a unanimous people (*jana*)"[11]

ಭಾರತೀಯ ಸಂಸ್ಕೃತಿಯಲ್ಲಿ ಎಲ್ಲಾ ವರ್ಗಗಳ ಜನರೂ ಒಂದೇ ಸಾಂಸ್ಕೃತಿಕ ಪ್ರವಾಹದಲ್ಲಿ ಮಿಂದಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ, ೧೮ ಪುರಾಣಗಳು ಎಲ್ಲಾ ಜನಗಳಿಗೂ ಆತ್ಮೀಯವಾಗಿ ಪರಿಚಯವಾಗಿದೆ. ಭಾರತದಲ್ಲಿ ಎಂದಿಗೂ ಅಸಕ್ಷರಸ್ಥರು ಅಜ್ಞಾನಿಗಳಾಗಿರಲಿಲ್ಲ. ಈ ಮಾತು ಇಂದಿಗೂ ನಿಜ. ಅನಕ್ಷರಸ್ಥ ಜನತೆ ಈ ಕಾವ್ಯಗಳನ್ನು ನಾಟಕರೂಪದಲ್ಲಿ ಅಥವಾ ಹರಿಕಥೆ ಇತ್ಯಾದಿ ರೂಪಗಳಲ್ಲಿ ಅನುಭವಿಸುತ್ತಾರೆ. ಮೇಲಾಗಿ, ಜನತೆಯ ವಿಮರ್ಶಾಶಕ್ತಿಯು ಪಂಡಿತನ ವಿಮರ್ಶಾಶಕ್ತಿಗೆ ಕಡಿಮೆಯಾದದ್ದಲ್ಲ (ಇನ್ನೊಂದೆಡೆ ಕುಮಾರಸ್ವಾಮಿ ಹೇಳಿದ್ದಾರೆ. " ಪಂಡಿತರು ಪಾಮರರು ಭಾರತದಲ್ಲಿ ಒಂದೇ " ಎಂದು). ಈ ಸಂದರ್ಭದಲ್ಲಿ ಕವಿರಾಜಮಾರ್ಗದ ಮಾತು ನನಗೆ ನೆನಪಿಗೆ ಬರುತ್ತದೆ. " ಕಾವ್ಯಮಂ ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ನಾಡವರ್ಗಳ್ ॥ "

ಜನತೆಯೆಂದರೆ ದುಡಿಮೆಯ ವರ್ಗದವರಲ್ಲ ಎಂಬದು ಈ ವಿವೇಚನೆಯಲ್ಲಿ ಇರುವ ಗಮನಾರ್ಹವಾದ ಅಂಶ. ಆಧುನಿಕ ಕಾಲದ ಪ್ರಗತಿ ಶೀಲ ಕವಿಗಳು ಕಾವ್ಯಗಳು ಕಲೆಗಳು ಸ್ವಾಮಿವರ್ಗದ ಭೋಗಕ್ಕೆ ಸೃಷ್ಟಿಯಾದವು; ದುಡಿಮೆಯ ವರ್ಗದ ಶೋಷಣೆಯನ್ನು ಈ ಕಾವ್ಯ ಅಥವಾ ಕಲಾಸಾಧನೆ ಮರೆಮಾಚಿತ್ತು, ಇತ್ಯಾದಿಯಾಗಿ ಹೇಳುತ್ತಾರೆ. ಭಾರತೀಯ ದೃಷ್ಟಿಯಿಂದ ಇದು ಹುರುಳಿಲ್ಲದ ವಾದ. "ಜನಪದ ", " ಜನತೆ " ಎಂಬ ಪದಗಳು ಸಮಾಜದ ಸಮಸ್ತರನ್ನೂ ಪಡೆದುಕೊಂಡಿದ್ದವು.

ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಬಹುದು. ರಿನೈಸಾನ್ಸ್ ನಂತರ ಅನೇಕ ಆಧುನಿಕ ದೇಶಗಳಲ್ಲಿ ಕವಿ ಅಥವಾ ಕಲಾಕಾರ ವಿಭೂತಿ ಪುರುಷ, ಅವನಿಗೆ ಅನುಪಮ ವಿಚಾರಶಕ್ತಿಯಿದೆ ಎಂಬ ನಂಬುಗೆ ಹರಡಿತು. ಆಧುನಿಕ ಭಾರತದಲ್ಲೂ ಈ ಮಾತುಗಳನ್ನು ಕೇಳಬಹುದು. ಈ

ನಂಬುಗೆ ಮಾನವ ವಿಕಾಸದ ಒಂದು ವೈಚಿತ್ರ್ಯ. ಹಿಂದೆ ಹೇಳಿದಂತೆ ಕಲಾವಂತಿಕೆಗೂ ಜೀವನದ ಇತರ ಕಸುಬುಗಳಲ್ಲಿರುವ ಪ್ರತಿಭೆಗೂ ವ್ಯತ್ಯಾಸವಿಲ್ಲ. ಕವಿ ಅಥವಾ ಕಲೆಗಾರ ಸಮಾಜ ಜೀವನದ ಕಟ್ಟುಕಟ್ಟಳೆಗಳಿಗೆ ಹೊರತಲ್ಲ. "ಕಲೆಗೋಸ್ಕರ ಕಲೆ" ಎಂಬ ಮಾತು ಜನರ ವೈಚಾರಿಕ ಸ್ವಾತಂತ್ರ್ಯದ ಗುರುತಲ್ಲ. ಆದರಿಂದ ಮಾನವ ಸಮಾಜದ ಪ್ರಗತಿ ಸಾಧ್ಯವಿಲ್ಲ.

೩. ಭಾರತೀಯ ಕಲೆಯಲ್ಲಿ ಪ್ರತ್ಯಕ್ಷ–ಪರೋಕ್ಷ, ನಾಮ-ರೂಪ, ಮುಂತಾದ ವಿಷಯಗಳ ಪ್ರಸ್ತಾಪವಿದೆ. ಇವುಗಳನ್ನು ಕುಮಾರಸ್ವಾಮಿ ತಮ್ಮ The Transformation of Indian-Art [12] ಎಂಬ ಪುಸ್ತಕದಲ್ಲಿ ವಿಮರ್ಶಿಸಿದ್ದಾರೆ. ಇದು ಪಾರಿಭಾಷಿಕವಾಗಿ ಕಠಿಣವಾದ ಗ್ರಂಥ. ಸದ್ಯಕ್ಕೆ ಕೆಲವು ಅಂಶಗಳನ್ನು ಮಾತ್ರ ನಾನು ಪ್ರಸ್ತಾಪಮಾಡುತ್ತೇನೆ. ಪ್ರತ್ಯಕ್ಷವೆಂದರೆ ಪ್ರತಿನಿಧಿಸುವ ಕಲೆ; ಪರೋಕ್ಷವೆಂದರೆ, ಪ್ರತೀಕಗಳಿಂದ ಮಾನಸಿಕ ಭಾವನೆಗಳನ್ನು ಸೂಚಿಸುವುದು. ಅವರು ವಿಗ್ರಹ ಅಥವಾ ಮೂರ್ತಿಯ ವಿಚಾರದಲ್ಲಿ ಹೇಳಿದ್ದಾರೆ: "The Indian or Far Eastern icon, carved or printed, is neither a memory image nor an idealiza-ation but a visual symbolization, ideal in the mathematical sense. The 'anthropomorphic' icon is of the same kind as *yantra,* that is, a geometrical representation of a deity ; or a *mantra,* that is an auditory representation of a deity.[13] ಮೂರ್ತಿ ಶಿಲ್ಪದ ವಿಕಾಸ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಸಂಪರ್ಕದಿಂದಾಯಿತು. ಯಜ್ಞ ಯಾಗಾದಿಗಳ ಬದಲು ಪೂಜೆಯನ್ನು ಜನರು ನಡೆಸಿದರು. ಮೂರ್ತಿಪೂಜೆ ಭಾರತೀಯ ಸಂಸ್ಕೃತಿಯ ಹೆಗ್ಗುರುತು. ಮೂರ್ತಿ ಅಥವಾ ವಿಗ್ರಹ ದೇವತೆಗಳ ಪ್ರತೀಕವಾದ್ದರಿಂದ. ಭಾರತೀಯರಲ್ಲಿ ಎಲ್ಲಾ ವರ್ಗದವರೂ ಪೂಜೆಮಾಡುತ್ತಾರೆ. ಅದ್ವೈತಿಗಳಾದ ಆಚಾರ್ಯ ಶಂಕರರು ಸ್ವತಃ ಅನೇಕ ದೇವಸ್ಥಾನಗಳಿಗೆ ಹೋಗಿ ಪೂಜೆಮಾಡಿದರು. ಅವರು ಬರೆದಿದ್ದೆಂದು ಹೇಳಲಾದ ಕೆಲವು ಸಂಸ್ಕೃತ ಸ್ತೋತ್ರಗಳು ಬ್ರಾಹ್ಮಣರನೇಕರ ಮನೆಯಲ್ಲಿ ಪೂಜೆಗೆ ನೆರವಾಗಿವೆ. ಶಂಕರರು ಪಂಚಾಯತನ ಮಾರ್ಗವನ್ನು ಬೋಧಿಸಿದರು. ಇತ್ತೀಚೆಗೆ ಬಂಗಾಳದ ರಾಮಕೃಷ್ಣ ಪರಮಹಂಸ ಮತ್ತು ಅವರ ಆಪ್ತ ಶಿಷ್ಯ ತುರೀಯಾನಂದರು ಅದ್ವೈತಿಗಳಾದರೂ ತುಂಬು ಶ್ರದ್ಧೆಯಿಂದ ಮೂರ್ತಿ ಪೂಜೆ ಮಾಡುತ್ತಿದ್ದರು. ಸಾಮಾನ್ಯರು ಮಾಡುವ ಮೃತ್ತಿಕೆಯ ಮೂರ್ತಿಗಳಲ್ಲಿ ಅಭಿನಯ ತತ್ವ ಸ್ಪಷ್ಟವಾಗಿದೆ. ಗಣೇಶ ಅಥವಾ ದೇವಿಯನ್ನು ಮಣ್ಣಿನಲ್ಲಿ ಮಾಡಿ, ಪೂಜೆಯಾದನಂತರ ನೀರಿನಲ್ಲಿ ಬಿಡುತ್ತಾರೆ. ಇದು ಹಿಂದೆ ಹೇಳಿದಂತೆ ಜಗತ್ತಿನ ಕ್ರಿಯೆ ಅಥವಾ ಲೀಲೆಯನ್ನು ಸೂಚಿಸುತ್ತದೆ.

ಮೂರ್ತಿಗಳಿಗೆ ಬೀಡಾದ ದೇವಸ್ಥಾನಗಳ ಒಳ ರಚನೆಯಲ್ಲಿ ಜಗತ್ತಿನ ರೂಪಗಳನ್ನು ಭಿತ್ತಿಗಳ ಮೇಲೆ ಕಾಣುತ್ತೇವೆ. ದೇವಸ್ಥಾನದ "ನವರಂಗ", "ಗರ್ಭಗುಡಿ", "ವಿಮಾನ" ಇತ್ಯಾದಿ ಪದಗಳು ಪರೋಕ್ಷತೆಯನ್ನು ಸೂಚಿಸುತ್ತವೆ. ದೇವಸ್ಥಾನದ ಮುಂಭಾಗದಲ್ಲಿ ರಂಗೋಲಿಯಲ್ಲಿ ಬರೆದ ಯಂತ್ರ, ಗುಡಿಯಲ್ಲಿ ಹೇಳಿದ ಮಂತ್ರ ಮತ್ತು ದೇವತಾಮೂರ್ತಿಗಳು ರಸಾಸ್ವಾದನೆಯ ದೃಷ್ಟಿಯಿಂದ ಒಂದೇ ಆದರ್ಶ—ಆತ್ಮಸಾಕ್ಷಾತ್ಕಾರ-ದ ಪ್ರತೀಕಗಳು. ಮೂರ್ತಿಪೂಜೆಗೆ ಹೊರತಾದ ಯಾವ ಧರ್ಮವೂ ನಮಗೆ ಕಾಣಬರುವುದಿಲ್ಲ. ಇಸ್ಲಾಮಿನಲ್ಲೂ ಯಂತ್ರರೂಪದ ಪ್ರತೀಕಗಳು ಅನೇಕವಿವೆ. ಆದ್ದರಿಂದ ಮೂರ್ತಿಪೂಜೆ ಸಂಪ್ರದಾಯದ ದಾರಿಯಲ್ಲಿನ ಒಂದು ಮೈಲಿಗಲ್ಲು.

ಕಡೆಯದಾಗಿ ಭಾರತೀಯ ಕಲೆಯಲ್ಲಿ ರಸಾಸ್ವಾದನೆಯೆಂದರೆ ಕಲೆ ಮತ್ತು ರಸಿಕರ ನಡುವಿನ ಅವಿಚ್ಛಿನ್ನ ಆನಂದಾನುಭವ. ಕಾವ್ಯಗಳಲ್ಲಿ ನವರಸಗಳ ಜೋಡಣೆ ಅಥವಾ ಪ್ರಬೇಧಗಳಿವೆ. ಕಲೆಯಲ್ಲಿ ಈ ಭೇದಗಳಿಲ್ಲ; ಯಾವುದೇ ವಿಷಯವಾದರೂ ರಸವಾಹಕವಾಗಬಹುದು. ಅವರು ಬರೆದಿದ್ದಾರೆ: It is indeed explicitly pointed out that any theme whatever, 'lovely or unlovely', noble or vulgar, gracious or frightful, etc. may become the vehicle of *rasa.*[14]

ನಮ್ಮ ಶಿಲ್ಪಕಲೆಯಲ್ಲಿ ಪ್ರಖ್ಯಾತವಾದ ಮೂರ್ತಿಗಳು ಇನ್ನೊಂದು ರೀತಿಯಲ್ಲಿ ಮೇಲ್ಕಂಡ ಅಂಶವನ್ನು ಸ್ಪಷ್ಟೀಕರಿಸುತ್ತವೆ. ಕೈಲಾಸಪರ್ವತವನ್ನು ಅಳ್ಳಾಡಿಸಿದ ರಾವಣ, ಉಗ್ರನಖಗಳನ್ನು ಮುಂದೆ ಚಾಚಿದ ನರಸಿಂಹ. ಮಹಿಷನನ್ನು ಮೆಟ್ಟಿನಿಂತ ದುರ್ಗಾ, ವಕ್ರದಂತದ ಗಣೇಶ, ಶಾಂತರೂಪಿ ಪದ್ಮಪಾಣಿ ಬೋಧಿಸತ್ವ. ಧ್ಯಾನಿ ಬುದ್ಧ ಮುಂತಾದ ಈ ಮೂರ್ತಿಗಳು ಪ್ರತ್ಯೇಕವಾಗಿ ನಾನಾರಸಗಳನ್ನು ವ್ಯಕ್ತಪಡಿಸಿದರೂ, ಸಮಗ್ರ ದೃಷ್ಟಿಯಿಂದ ಒಂದೇ ವಿಧದ ರಸಾಸ್ವಾದನೆಯನ್ನುಂಟುಮಾಡುತ್ತವೆ. ಅವರು ಬೇರೊಂದು ಕಡೆ ಹೇಳಿದಂತೆ: Art is informed by *ideal* beauty.

ವಿಮರ್ಶೆ: ಈ ಲೇಖನದ ಪ್ರಸ್ತಾವನೆಯಲ್ಲಿ ಹೇಳಿದಂತೆ, ಕುಮಾರಸ್ವಾಮಿ, ಪ್ರಥಮತಃ ಸಮರ್ಥಕರು. ವಿಮರ್ಶಕರಲ್ಲ. ಅವರೇ ಹೇಳಿದಂತೆ ಅವರು ಹೊಸದನ್ನೇನೂ ಸೃಜಿಸಲಿಲ್ಲ. ಅವರ ಬರಹಗಳು ಕಾವ್ಯ ಪ್ರಕಾಶ, ಅಭಿನಯ ದರ್ಪಣ, ನಾಟ್ಯಶಾಸ್ತ್ರ ಮುಂತಾದ ಸಂಸ್ಕೃತ ಗ್ರಂಥಗಳ ಆಧಾರದ ಮೇಲೆ ನಿಂತಿವೆ. ಅವರ ಅನೇಕ ವಚನಗಳು ಅವರು ಪ್ರಗತಿ ವಿರೋಧಿ (reactionary) ಎಂಬ ಸಂದೇಹವನ್ನು ಸಹಜವಾಗಿ ತರುತ್ತವೆ. ಆದರೆ, ಪ್ರಗತಿ ಸಂಪ್ರದಾಯದ ಕಟ್ಟಿನಲ್ಲಿ ಮಾತ್ರ ಸಾಧ್ಯ ಎನ್ನುವ ತತ್ವವನ್ನು ಅವರು ಪ್ರತಿಪಾದಿಸಿದ್ದಾರೆ. ಅವರು ಕೊಟ್ಟ ಕೆಲವು ವಿವರಣೆಗಳು ವಿವಾದಕ್ಕೆ ಎಡೆಕೊಟ್ಟಿವೆ. ಅಜಂತಾದ ಭಿತ್ತಿಚಿತ್ರಗಳಿಗೂ ರಾಜಾಸ್ಥಾನದ ಚಿತ್ರಕಲೆಗೂ ವಂಶಾನುಗತ ಸಂಬಂಧವಿದೆಯೆಂದು ಅವರು ಹೇಳಿದ್ದನ್ನು ಈಚಿನ ಕಲೆಯ ಇತಿಹಾಸಕರು ಒಪ್ಪಿಲ್ಲ. ಅವರು ಸಂಪ್ರದಾಯದಲ್ಲಿ ವೈಯಕ್ತಿಕ ಪ್ರಜ್ಞೆ ಇರಲಿಲ್ಲ ಎಂದು ಹೇಳಿದಮಾತನ್ನು ಒಪ್ಪಿಲ್ಲ. ಅವರು ಪೋಸ್ಟ್‌ರಿನೆಸಾನ್ಸ್ ಕಲೆಯನ್ನು ಸಾಕಷ್ಟು ಸಹಾನುಭೂತಿಯಿಂದ ನೋಡಲಿಲ್ಲ ಮತ್ತು ಆಧುನಿಕ ಕಲೆಯಲ್ಲಿನ ಒಳಬೇಧಗಳನ್ನು ಅವರು ಗುರುತಿಸಲಿಲ್ಲವೆಂದು ನನಗೆ ಅನ್ನಿಸುತ್ತದೆ. ಇವರ ಜೀವನ ಮತ್ತು ಸಾಧನೆಗಳನ್ನು ಹೆಚ್ಚಾಗಿ ತಿಳಿಯಬಯಸುವವರು (Roger Lipsey)[15] ಇವರ ಸಂಪುಟಗಳನ್ನು ನೋಡಬಹುದು. ಕುಮಾರಸ್ವಾಮಿಯವರಲ್ಲಿ ಕುಂದುಕೊರತೆಗಳಿರಬಹುದಾದರೂ, ಅವರ ಗ್ರಂಥಗಳು ಇಂದಿಗೂ ರಸಿಕರಿಗೆ, ಸಹೃದಯರಿಗೆ ಅಪ್ಯಾಯಮಾನವಾಗಿವೆ.

---

* ಈ ಲೇಖನವನ್ನು ಬರೆಯಲು ನನ್ನನ್ನು ಪ್ರೋತ್ಸಾಹಿಸಿ, ನೆರವಾದ ನನ್ನ ಗೆಳೆಯ ಶ್ರೀ ಬಾಲಕೃಷ್ಣ ಸಾಮಗರಿಗೆ ನನ್ನ ಕೃತಜ್ಞತೆಗಳು.

ಅಡಿಟಿಪ್ಪಣಿಗಳು :

1. See Ananda Coomaraswamy : *The Dance of Shiva*, Munishiram Manoharlal Publishers Pvt., Limited New Delhi, 1974.
2. *Ibid* p. 34.
3. *Ibid* p. 36.
4. Richard Lannoy : *The Speaking Tree : A study of Indian Culture and Society*, Oxford University Press Bombay, 1971 *p*. 284.
5. S. P. Nagendra : "The Traditional Theory of Caste" in T. K. N. Unnithan etal (*ed*) *Towards a India* Prentice Hall of India Pvt. Ltd., New Delhi, pp. 261-77,

6. Coomaraswamy *op. cit*, p. 71.
7. *Ibid* p : 93.
8. Coomaraswamy : *Christian and Oriental Philosophy of Art*, Munshiram Manoharlal Publishers Pvt. Ltd, New Delhi 1974.
9. *Ibid p.* 23
10. *Ibid p.* 27.
11. *Ibid p.* 136.
12. Coomaraswamy : *The Transformation of Nature in Indian Art*, Munshiram Manoharlal Publishers Pvt Ltd. New Delhi, 1974.
13. *Ibid* p. 28
14. *Ibid* p. 48
15. Roger Lipsey : *Coomaraswamy His Life and Work* (3 volumes), Princetion University Press, Princeton 1977.

"ಆನಂದಕುಮಾರಸ್ವಾಮಿ : (೧೮೭೭–೧೯೪೭) ಲೋಕಪ್ರಸಿದ್ಧ ಕಲಾವಿಮರ್ಶಕರು, ಭಾರತದ ಹಾಗೂ ವಿಶ್ವದ ಕಲೆಯ ಹಿರಿಮೆಯನ್ನು ಜಗತ್ತಿಗೆ ಸಾರಿ ಹೇಳಲು ನಿರಂತರವಾಗಿ ಶ್ರಮಿಸಿದವರು. ತಂದೆ ಸಿಂಹಳೀಯ ಹಿಂದೂ, ತಾಯಿ ಸ್ಕಾಟ್ಲೆಂಡಿನವಳು. ಭೂಗರ್ಭಶಾಸ್ತ್ರವನ್ನು ಕಲಿತು ೧೯೦೬ರಲ್ಲಿ ಸಿಂಹಳದ ಖನಿಜ ಪರಿವೀಕ್ಷಣೆಯ ನಿರ್ದೇಶಕರಾಗಿ ನೇಮಕಗೊಂಡರು. ಒಮ್ಮೆ ಸಿಂಹಳದ ಹಾಳುಬಿದ್ದ ಗುಹೆಗಳ ಕಲಾವೈಭವವನ್ನು ಕಂಡ ಮೇಲೆ ಅವರ ಬದುಕಿನ ದಾರಿಯೇ ಬೇರೆಯಾಯಿತು. ಕಲಾರಾಧಕರಾದರು. ಮೊದಲು ಸಿಂಹಳದ ಕಲೆಯನ್ನು ಅನಂತರ ಭಾರತದ ಕಲೆಯನ್ನು ಕಡೆಗೆ ಇಡೀ ವಿಶ್ವದ ಕಲೆಯನ್ನು ಅಭ್ಯಸಿಸಿದರು. ಅನಂತರ ಅಮೆರಿಕಕ್ಕೆ ಹೋಗಿ ಬಾಸ್ಟನ್ನಿನ ವಸ್ತು ಸಂಗ್ರಹಾಲಯದ ಏಷ್ಯನ್ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡರು. ಭಾರತದ ಕಲೆಯನ್ನು ಮಾತ್ರವಲ್ಲದೆ ಪುರಾಣ, ದರ್ಶನ, ಸಾಹಿತ್ಯ, ಶಿಲ್ಪ, ಧರ್ಮ, ಮುಂತಾದುವನ್ನೆಲ್ಲ ಕೂಲಂಕಷವಾಗಿ ಅಧ್ಯಯನ ಮಾಡಿದರು. ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಕಲೆಗಳ ಹಿನ್ನೆಲೆ ಬೇರೆ ಬೇರೆಯೆಂಬುದನ್ನು ಸಿದ್ಧಾಂತ ಮಾಡಿದರು. ಪಾಶ್ಚಾತ್ಯ ಕಲೆಗೆ ಕೇವಲ ವೈಯಕ್ತಿಕ ಪ್ರೇರಣೆಯಿದ್ದರೆ ಪೌರ್ವಾತ್ಯ ಕಲೆಗೆ ಸಮಷ್ಟಿಪ್ರೇರಣೆಯುಂಟೆಂದೂ ಅದು ಧಾರ್ಮಿಕ ಸ್ಫೂರ್ತಿಯನ್ನುಳ್ಳದ್ದೆಂದೂ ಅವರ ಪ್ರತಿಪಾದನೆ. ಅವರ ಪ್ರಯತ್ನಗಳ ಫಲವಾಗಿ ಪೌರ್ವಾತ್ಯ ಕಲೆಯನ್ನು ಕುರಿತ ಅನೇಕ ಪಾಶ್ಚಾತ್ಯ ವಿದ್ವಾಂಸರ ತಪ್ಪು ತಿಳಿವಳಿಕೆ ದೂರವಾಯಿತು."

(ಕನ್ನಡ ವಿಶ್ವಕೋಶ, ಮೊದಲನೆಯ ಸಂಪುಟದಲ್ಲಿ ಶ್ರೀ ಸಿ.ಪಿ.ಕೆ. ಯವರ ಲೇಖನ (ಪು.೭೮೯) ದಿಂದ ಉದ್ಧೃತ)

ಪಿ. ಆರ್. ತಿಪ್ಪೇಸ್ವಾಮಿ

ಕರ್ನಾಟಕದ ವಿಖ್ಯಾತ ಶಿಲ್ಪಿ ಎಸ್. ನರಸಿಂಹಾಚಾರ್ಯ

ಚಿತ್ತಾಕರ್ಷಕವಾದ ನಾನಾ ಬಗೆಯ ಕಲಾಸಮೂಹದಲ್ಲಿ ರತ್ನಪ್ರಾಯವಾದ ಶಿಲ್ಪಕಲೆಯ ಕಡೆ ತಮ್ಮ ದೃಷ್ಟಿಯನ್ನು ಹರಿಸಿದವರು ನಮ್ಮವರಲ್ಲಿ ಕೇವಲ ಕೆಲವೇ ಮಂದಿ ಇದ್ದಾರೆ. ಜಡವಸ್ತುಗಳಾದ ಶಿಲೆ, ಲೋಹ ಮುಂತಾದುವುಗಳಲ್ಲಿ ತಮ್ಮ ಕಲಾಕೌಶಲ್ಯವನ್ನು ಮೆರೆದು 'ಮೂಕಂ ಕರೋತಿ ವಾಚಾಲಂ' ಎಂಬಂತೆ ಮಾಡುವ ಅಮೋಘ ಶಿಲ್ಪಕೃತಿಗಳನ್ನು ಸೃಜಿಸುವ ಶಿಲ್ಪವಿದ್ಯೆ ಸಾಮಾನ್ಯವಾದುದೇನೂ ಅಲ್ಲ. ನಿರಂತರ ಸಾಧನೆ, ತಪಸ್ಸಿನಿಂದ ಈ ಶಕ್ತಿಯನ್ನು ಕೈವಶಮಾಡಿಕೊಂಡು ಚತುರ ಶಿಲ್ಪಿಗಳೆನಿಕೊಂಡಿರುವ ಆಧುನಿಕರಲ್ಲಿ ಶ್ರೀ ನರಸಿಂಹಾಚಾರ್ಯರು ಒಬ್ಬರು. ನಮ್ಮ ನಾಡಿನ ಇತರ ಶಿಲ್ಪನಿಪುಣರಾದ ಶ್ರೀ ಸ್ಥಪತಿ ಬಸವಣ್ಣ ಮುಂತಾದವರಂತೆಯೇ ಶ್ರೀಯುತರೂ ದಿ. ಶಿಲ್ಪಗುರು ಸಿದ್ಧಲಿಂಗಸ್ವಾಮಿಗಳ ಶಿಷ್ಯ ವೃಂದದಲ್ಲಿ ಒಬ್ಬರಾಗಿದ್ದಾರೆ. ಬಾಲ್ಯದಲ್ಲಿಯೇ ಇವರಲ್ಲಿ ಮೊಳಕೆಗೊಂಡ ಈ ಕಲೆ ಕ್ರಮೇಣ ಗಿಡವಾಗಿ ಮೊಗ್ಗಾಗಿ ಈಗ ಹೂವಾಗುತ್ತಿದೆ. ಇವರಿಗೆ ಮುಂದೆ ಕಾದಿರುವ ಉಜ್ವಲ ಭವಿಷ್ಯವನ್ನು ಇವರ ಇತ್ತೀಚಿನ ಶಿಲ್ಪ ಕೃತಿಗಳೇ ಸಾರುತ್ತಿವೆ.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಎಲಕಪ್ಪಾಚಾರ್ಯರ ಧರ್ಮಶಾಲೆಯ ಎಡಪಾರ್ಶ್ವದ ಬೀದಿಯಲ್ಲಿ ಹೋಗಿ ಮತ್ತೆ ಎಡಪಕ್ಕದ ಮೊದಲ ಓಣಿಗೆ ತಿರುಗಿ ಒಂದೆರಡು ಮನೆಗಳನ್ನು ದಾಟಿ ಮತ್ತೆ ಮುಂದೆ ಹೋದರೆ ಎಡಭಾಗದ ಮನೆಯೊಂದರಿಂದ ವೀಣೆಯ ಮಧುರ ನಿನಾದದಂತೆ ಯಾವುದೋ ಮೃದುಮಧುರ ನಾದ ನಮ್ಮ ಚಿತ್ತವನ್ನಾಕರ್ಷಿಸಿ ಸೆರೆಹಿಡಿದು ಅಲ್ಲಿ ನಿಲ್ಲಿಸುತ್ತದೆ. ಆಗಾಗ ಕೇಳಿಬರುವ ಚಾಣದ ಚಣ ಚಣ ನಿನಾದ ಯಾರದೋ ಶಿಲ್ಪಿಗಳ ಗೃಹ ಇದೆಂದು ಸಾರಿ ಹೇಳುತ್ತದೆ. ಅದೇ ಶ್ರೀ ನರಸಿಂಹಾಚಾರ್ಯರ ಗೃಹ.

ಶಿಲ್ಪಕೃತಿಯನ್ನು ಕಡೆಯುವುದರಲ್ಲಿ ಕಾರ್ಯೋನ್ಮುಖವಾಗಿರುವ ಚಾಣಗಳ ನಿನಾದ ಎಂದರಿವಾಗುತ್ತದೆ. 'ಶಿಲ್ಪಿಗಳು ಮನೆಯಲ್ಲಿ ಇದ್ದಾರೆಯೆ?' ಎಂದು ಒಮ್ಮೆ ಕೂಗಿದರೆ ಸಾಕು, ಮನೆಯ ಪಡಸಾಲೆಯಲ್ಲಿ ಆಟವಾಡುತ್ತಿರುವ ಮಕ್ಕಳು ಓಡಿಬಂದು ಬಾಗಿಲು ತೆರೆದು 'ಅಪ್ಪಾ...ಯಾರೊ ಬಂದಿದ್ದಾರೆ' ಎಂದು ಕೂಗಿ ಮತ್ತೆ ಬಾಗಿಲ ಸಂದಿಗೆ ಮುಖ ಒಡ್ಡಿ ನಿಂತು ಬಂದವರ ಕಡೆ ಹುಸಿನಕ್ಕು ಓರೆನೋಟ ಬೀರುತ್ತವೆ, ಏಕಾಗ್ರತೆಯಿಂದ ಮರದಲ್ಲಿ ಇಲ್ಲವೆ ಕಲ್ಲಿನಲ್ಲಿ ಮೂರ್ತಿಗಳನ್ನು ಬಿಡಿಸುವುದನ್ನು ಅಲ್ಲಿಗೇ ಬಿಟ್ಟು ಬಾಗಿಲ ಪಕ್ಕದ ಮೆಟ್ಟಿಲುಗಳನ್ನು ತುಳಿದು ಪುಟ್ಟ ಅಟ್ಟದಿಂದಿಳಿದು ಕೆಳಗೆ ಬರುತ್ತಾರೆ. ಶಿಲ್ಪಿಗಳನ್ನು ನೋಡಲು ಬಂದವರು ಕಲಾವಿದರಾದರೆ, ಕಲಾರಾಧಕರಾದರೆ ಕಲಾವಿಚಾರವಿದ್ದರೆ ಅವರನ್ನು ಮಹಡಿಗೆ ಕರೆದೊಯ್ಯುತ್ತಾರೆ. ಇಲ್ಲವಾದರೆ ಬಾಗಿಲಲ್ಲೇ ವ್ಯವಹರಿಸಿ ನಗುಮುಖದಿಂದ ಬೀಳ್ಕೊಡುತ್ತಾರೆ. ಮಹಡಿಯ ಕಿರುಕೋಣೆಯಾದರೋ ಬರೀ ಶಿಲ್ಪ ಕೃತಿಗಳಿಂದ ತುಂಬಿರುತ್ತದೆ. ಅರೆಮುಗಿದ, ಪೂರ್ಣಗೊಂಡ ಮೂರ್ತಿಗಳು ಎಲ್ಲಂದರಲ್ಲಿ ಅಸ್ತವ್ಯಸ್ತವಾಗಿ ಬಿದ್ದಿರುತ್ತವೆ. ಇವರು ಕೆಲಸ ಮಾಡಲು ಕುಳಿತಿರುವ ಸ್ಥಳದ ಸುತ್ತಲೂ ಸುತ್ತಿಗೆ ಚಾಣ ಮುಂತಾದ ಶಿಲ್ಪ ರಚನಾ ಸಾಮಗ್ರಿಗಳು ಚೆಲ್ಲಾಡಿ

ರುತ್ತವೆ. ಯಾವ ಗಲಾಟೆ ಗದ್ದಲವೂ ಇಲ್ಲದ ಕೋಣೆಗೆ ಸಾಕಷ್ಟು ಬೆಳಕು ಗಾಳಿ ಕೊಡುವ ಕಿಟಕಿಯೂ ಇವರ ಬೆನ್ನಿನ ಹಿಂಭಾಗದಲ್ಲೆ ಇದೆ. ಇಲ್ಲಿನ ಪ್ರಶಾಂತ ವಾತಾವರಣವು ಇವರ ಹೃದಯವನ್ನು ಪ್ರಫುಲ್ಲ ಗೊಳಿಸುತ್ತದೆ. ನೋಡಲು ಬಂದವರೊಂದಿಗೆ ಮಾತು ಮುಗಿಸಿ ಮತ್ತೆ ತಾವು ಕಡೆಯುವುದನ್ನು ನಿಲ್ಲಿಸಿದ್ದ ಮೂರ್ತಿಯನ್ನು ಕೈಗೆತ್ತಿಕೊಂಡು ಯಾವುದೋ ಲೋಕದಲ್ಲಿ ತಲ್ಲೀನರಾಗುತ್ತಾರೆ. ಮಿತಭಾಷಿಗಳಾದ ಕಟ್ಟುಪಾಡಿನ ಜೀವನದ, ವಿನಯಶೀಲ ನರಸಿಂಹಾಚಾರ್ಯರಂಥ ಶಿಲ್ಪಿಗಳು ನಮ್ಮಲ್ಲಿ ಅತಿ ವಿರಳ.

ಶ್ರೀ ನರಸಿಂಹಾಚಾರ್ಯರು ೧೯೧೫ರಲ್ಲಿ ಜನಿಸಿದರು. ಇವರ ತಂದೆ ಶ್ರೀ ಸೋಮಾಚಾರ್ಯರು. ಇವರೂ ಕಲಾವಿದರೇ. ಚಿನ್ನ ಬೆಳ್ಳಿಯ ಕೆಲಸದಲ್ಲಿ ಕಲಾನಿಪುಣರಾಗಿದ್ದರು. ಆಗಿನ ಕಾಲದಲ್ಲಿ ಇವರು ಸಾಕಷ್ಟು ಅನುಭವಿಸಿ ಹಣ್ಣಾಗಿದ್ದರು. ಆದರಿಂದಾಗಿ ತಮ್ಮ ಮಗನ ಗಮನವನ್ನು ಅಷ್ಟಾಗಿ ವಿದ್ಯಾಭ್ಯಾಸದ ಕಡೆಗೆ ಹರಿಯಗೊಡಲಾಗಲಿಲ್ಲ. ತಂದೆ ಸೋಮಾಚಾರ್ಯರು ಶ್ರಮಸಾಧ್ಯವಾದ ಸಂಸಾರವನ್ನು ಸಾಗಿಸಬೇಕಿತ್ತು. ಇದನ್ನು ಹಗುರಗೊಳಿಸಲು ಮಗನ ನೆರವು ಅಗತ್ಯವಿತ್ತು. ಎಂಟೊಂಬತ್ತನೆಯ ವಯಸ್ಸಿನ ಎಳೆಯ ಮಗನನ್ನು ಕಷ್ಟಸಾಧ್ಯವಾದ ಕೆಲಸಕ್ಕೆ ತಳ್ಳಬೇಕಾಯಿತು. ಆಗ್ಗೆ ಮೈಸೂರಿನ ಸುಪ್ರಸಿದ್ಧ ಕಂಟ್ರಾಕ್ಟರ್‌ರಾಗಿದ್ದ ಎಲಕಪ್ಪಾಚಾರ್ಯರು ಅರಮನೆಯ ಕಟ್ಟಡದ ಕಾಮಗಾರಿಕೆಯ ವೃತ್ತಿ ವಹಿಸಿಕೊಂಡಿದ್ದರು. ಬಾಲಕ ನರಸಿಂಹಾಚಾರ್ಯರ ತಂದೆಯವರು ಮಗನನ್ನು ಎಲಕಪ್ಪಾಚಾರ್ಯರ ಬಳಿ ಬಿಟ್ಟರು. ನೂರಾರು ಕಾರ್ಮಿಕರಲ್ಲಿ ಈ ಬಾಲಕನೂ ಒಬ್ಬನಾದನು. ವಯಸ್ಸಿಗೆ ತಕ್ಕ ಕೆಲಸವಾದರೂ ಈ ಎಳೆಯ ಯುವಕನಿಗೆ ಕಷ್ಟವೇ ಆಗಿತ್ತು. ಗಾರೆಯನ್ನೋ ಇಟ್ಟಿಗೆಗಳನ್ನೋ ತಲೆಯ ಮೇಲೆ ಹೊತ್ತು ಸಾಗಿಸುತ್ತಿದ್ದರು. ಮಾಹೆಯಾನ ಎರಡು ರೂಪಾಯಿಗಳನ್ನು ಸಂಪಾದಿಸುವುದೊಂದು ಶ್ರಮವೇ ಆಗಿತ್ತು. ಎರಡು ವರ್ಷಗಳ ತನಕ ತಂದೆಯವರ ಕಟ್ಟಾಜ್ಞೆಗೆ ತಲೆಬಾಗಲೇಬೇಕಾಯ್ತು. ಜೀವನದಲ್ಲಿ ಏರುಪೇರು ಏನು? ಎಂತು? ಎಂಬುದನ್ನು ಬಾಲ್ಯದಲ್ಲೆ ಮಗನಿಗೆ ತೋರಿಸಿಕೊಟ್ಟರೆ ಮುಂದಿನ ಜೀವಮಾನ ಸುಗಮವಾದೀತೆಂಬ ಆಸೆ ಸೋಮಾಚಾರ್ಯರಿಗಿತ್ತು. ಉತ್ತಮ ಶಿಲ್ಪಿಯಾಗುವ ಯೋಗ ಉಳ್ಳ ತನ್ನ ಮಗನು ಬೆಳಗಿನಿಂದ ಸಂಜೆಯ ತನಕ ದುಡಿದು ಎರಡಾಣೆ ಸಂಪಾದಿಸಿ ತಂದುಕೊಡುತ್ತಿದ್ದ ಮಗನ ಕಂಗೆಟ್ಟ ಮುಖವನ್ನು ನೋಡಿದ ತಂದೆಯವರು ಮಮ್ಮಲ ಮರುಗುತ್ತಿದ್ದರು.

ಎರಡು ವರ್ಷಗಳ ಕಾಲ ಈ ಯಾಂತ್ರಿಕ ಜೀವನದ ಕಹಿಸಿಹಿ ಅನುಭವಗಳಾದವು. ಪ್ರತಿನಿತ್ಯ ಸಂಜೆಯ ವೇಳೆಯ ಬಿಡುವಿನಲ್ಲಿ ಇತರೆ ಹುಡುಗರಂತೆ ಕಾಡುಹರಟೆಯಲ್ಲಿ ಕಾಲ ಕಳೆಯದೆ ವಿರಾಮ ದೊರೆತಾಗಲೆಲ್ಲಾ ಅರಮನೆಯ ಒಳಾಂಗಣದಲ್ಲಿ ಸುತ್ತಾಡಿ ಅಲ್ಲಿನ ವೈಭವಯುತ ಕೆತ್ತನೆಯ ಬಳ್ಳಿ ವರಸೆ, ವಿಗ್ರಹಗಳನ್ನು ಈಕ್ಷಿಸುತ್ತಾ ನಿಂತುಬಿಡುತ್ತಿದ್ದರು. ಆ ಸಂದರ್ಭದಲ್ಲಿ ಇವರನ್ನು ಹುಡುಕುವು ದೆಂದರೆ ಎಲ್ಲರಿಗೂ ಸುಲಭ. ಅಲ್ಲಿಯ ಯಾವುದಾದರೂ ಸುಂದರ ಕೆತ್ತನೆಯ ಕೆಲಸವನ್ನುಳ್ಳ ಒಂದು ಕಂಬದ ಮುಂದೋ ಇಲ್ಲವೆ ಬಾಗಿಲುವಾಡದ ಮುಂದೋ ಅಥವಾ ಇನ್ನಾವುದಾದರೂ ಸುಂದರ ಶಿಲ್ಪ ಮೂರ್ತಿಯ ಮುಂದೋ ಹೋಗಿ ನೋಡಿದರೆ ಮಂತ್ರಮುಗ್ಧರಾಗಿ ನಿಂತಿರುವ ಇವರನ್ನು ಕಾಣಬಹುದಿತ್ತು. ಕೆಲವು ಬಾರಿ ಕೆಲಸದಿಂದ ಕಾಣೆಯಾಗಿ ಮೇಸ್ತ್ರಿಯಿಂದ ಏಟು ತಿಂದ ನೆನಪೂ ಇವರಿಗುಂಟು. ಕೆಲಸದಿಂದ ತೆಗೆದುಹಾಕುವ ಬೆದರಿಕೆಯೂ ಬಂದಿತು. ಇವರ ಕಲಾಮಯ ಹೃದಯ ಅದಾವುದಕ್ಕೂ ಜಗ್ಗಲಿಲ್ಲ. ಇವರ ಕೈಚಳಕವನ್ನು ಅರಿತ ಇವರ ಸಹೋದ್ಯೋಗಿ ಕೂಲಿ ಯುವಕರು ಮೇಸ್ತ್ರಿಯಿಂದ ಬೀಳುವ ಪೆಟ್ಟನ್ನು ತಪ್ಪಿಸಲು ನೆರವಾಗಿದ್ದರು. ನವುರಾದ ರೇಖೆಗಳಿಂದ ಅಲ್ಲಿ ತೋರಿದ ಬಳ್ಳಿವರಸೆಯನ್ನು ನಕಲುಮಾಡಿಕೊಳ್ಳುತ್ತಿದ್ದ ಇವರು ಅದನ್ನು ಮೇಸ್ತ್ರಿಗೆ ತೋರಿಸಲು ಅಂಜಿಕೆಯಾಗಿ ತಾವೂ ತಪ್ಪಿಸಿಕೊಳ್ಳುತ್ತಿದ್ದ ಬಗ್ಗೆ ಕುಂಟು ನೆಪ ಹೇಳುತ್ತಿದ್ದರು. ಹೀಗೆ ಬಹುದಿನ ತಳ್ಳಲು ಆಗಲಿಲ್ಲ. ಕೊನೆಗೊಂದು ದಿನ ಬಾಲಕನನ್ನು ಕೆಲಸದಿಂದ ತೆಗೆದು ಮನೆಗೆ ಕಳಿಸಲಾಯಿತು. 'ರೋಗಿ ಬಯಸಿದ್ದೂ ಹಾಲು ಅನ್ನ' ಎನ್ನುವ ರೀತಿ ಇವರಿಗಾಯಿತು. ತಂದೆಯು ಬಾಲಕನ ಮನೋಪ್ರವೃತ್ತಿ ಕಲೆಯ ಕಡೆ ಹರಿದಿರುವುದನ್ನು ನೋಡಿ ಮನದೊಳಗೇ ಆನಂದಪಡುತ್ತಿದ್ದುದರಿಂದ ಮಗನ ಮೇಲೆ ಕೋಪಿಸಲಿಲ್ಲ.

ಬಾಲಕ ನರಸಿಂಹಾಚಾರ್ಯರು ತಮ್ಮ ಅಭಿಲಾಷೆಯನ್ನು ತಾಯಿಯವರಲ್ಲಿ ಹೇಳಿಕೊಂಡರು

ಕಲೆಯಲ್ಲಿ ಪರಿಶ್ರಮ ಅಭ್ಯಾಸ ಮಾಡಬೇಕೆಂಬ ಮಗನ ಹಟಮಾರಿತನ ಒಂದು ಕಡೆ, ತಂದೆತಾಯಿಗಳಲ್ಲಿ ಪ್ರೀತಿವಾತ್ಸಲ್ಯ ಮತ್ತೊಂದು ಕಡೆ—ಹೀಗೆ ಅವುಗಳಿಂದಾಗಿ ಮಗನನ್ನು ರಾಜಧಾನಿಯಲ್ಲಿರುವ ಶ್ರೀ ಚಾಮರಾಜೇಂದ್ರ ಕಲಾಶಾಲೆಗೆ ಸೇರಿಸಿಬಿಟ್ಟರು. ಇವರ ಅದೃಷ್ಟಕ್ಕೆ ಸರಿಯಾಗಿ ಮರದ ಕೆತ್ತನೆಯ ವಿಭಾಗಕ್ಕೆ ನಿಪುಣ ಶ್ರೀ ಜವರಾಯಾಚಾರ್ಯರೇ ಉಪಧ್ಯಾಯರು. ಅವರಿಗೆ ಅಚ್ಚುಮೆಚ್ಚಿನ ಶಿಷ್ಯರಲ್ಲಿ ನರಸಿಂಹಾಚಾರ್ಯರೂ ಒಬ್ಬರಾದರು. ವ್ಯರ್ಥವಾಗಿ ಕಾಲ ತಳ್ಳಲು ಬರುವ ವಿದ್ಯಾರ್ಥಿಗಳೇ ಹೆಚ್ಚಾಗಿದ್ದ ಆ ಗುಂಪಿನಲ್ಲಿ ಇವರ ಶ್ರದ್ಧೆ ಆಸಕ್ತಿಯನ್ನು ಕಂಡ ಉಪಾಧ್ಯಾಯರು ಹಿರಿಹಿರಿ ಹಿಗ್ಗಿದರು.

ಆಗ ನರಸಿಂಹಾಚಾರ್ಯರು ಹನ್ನೊಂದು ವರ್ಷಗಳ ಗಡಿಯಲ್ಲಿದ್ದರು. ಮರದಲ್ಲಿ ಮೋಹಕ ಮೂರ್ತಿಗಳನ್ನು ಕಡೆಯಲು ಮುಖ್ಯವಾಗಿ ರೇಖಾಭ್ಯಾಸವಾಗಬೇಕಿತ್ತು. ಜವರಾಯಾಚಾರ್ಯರಿಗೆ ಬಿಡುವೇ ಆಗುತ್ತಿರಲಿಲ್ಲವಾದ ಕಾರಣ ವಿರಾಮ ವೇಳೆಯಲ್ಲಿ ಚಿತ್ರಾಭ್ಯಾಸವನ್ನು ಕಲಿತುಕೊಳ್ಳಲು ತಮ್ಮ ಮಿತ್ರರಾದ ಕಲಾವಿದ ಶ್ರೀ ಲಕ್ಷ್ಮಣ ಕೃಷ್ಣರಾವ್ ಅವರಲ್ಲಿ ತಮ್ಮ ಶಿಷ್ಯರನ್ನು ಬಿಟ್ಟರು. ಧಾರವಾಡದ ಕಡೆಯವರಾದ ಲಕ್ಷ್ಮಣಕೃಷ್ಣರು ಆಗ ಅರಮನೆಯ ಸುಪ್ರಸಿದ್ಧ ಕಲಾವಿದರಲ್ಲಿ ಒಬ್ಬರಾಗಿದ್ದರು. ಇವರು ಚಿತ್ರಕಲೆಯಲ್ಲೂ ಶಿಲ್ಪಕಲೆಯಲ್ಲೂ ನಿಪುಣರೆನ್ನಿಸಿಕೊಂಡಿದ್ದರು. ಚಿತ್ರಬ್ರಹ್ಮ ರಾಜಾ ರವಿ ವರ್ಮನ ಕುಂಚದಲ್ಲಿ ತೋರಿಬರುವ ಮೋಹಕತೆ ಶ್ರೀ ಲಕ್ಷ್ಮಣಕೃಷ್ಣರ ಕುಂಚದಲ್ಲೂ ಕಾಣಬರುತ್ತಿತ್ತು. ಅಷ್ಟೇ ಪಾಂಡಿತ್ಯ ಶಿಲ್ಪದಲ್ಲೂ ಇವರಿಗಿದ್ದಿತೆಂಬುದಕ್ಕೆ ರಾಜಧಾನಿಯ ಕಾರಂಜಿಕೆರೆಯ ಬಳಿಯ ದೇವಾಲಯದ ಸುಂದರ ಮೂರ್ತಿಗಳೇ ಇಂದಿಗೂ ನಿದರ್ಶನವಾಗಿ ನಿಂತಿವೆ.

ಇಂಥ ಪಾಂಡಿತ್ಯವುಳ್ಳ ಲಕ್ಷ್ಮಣರು ನರಸಿಂಹಾಚಾರ್ಯರಿಗೆ ಗುರುವಾಗಿ ದೊರೆತುದದು ಅವರ ಪುಣ್ಯವೆನ್ನಬೇಕು. ನರಸಿಂಹಾಚಾರ್ಯರು ಹಗಲಿನ ವೇಳೆ ಶಾಲೆಯ ಅಭ್ಯಾಸದಿಂದ ತೃಪ್ತರಾಗದೆ ರಾತ್ರಿಯ ವೇಳೆಯಲ್ಲಿ ಲಕ್ಷ್ಮಣಕೃಷ್ಣರ ಮನೆಯಲ್ಲೂ ಅಭ್ಯಾಸ ಮಾಡತೊಡಗಿದರು. ಅಲ್ಲೇ ಮಲಗಿ ಮರುದಿನ ಶಾಲೆಗೆ ಹೋಗುವ ಏರ್ಪಾಟು ಮಾಡಿಕೊಂಡಿದ್ದರು. ಲಕ್ಷ್ಮಣಕೃಷ್ಣರು ತಾವು ಕಡೆಯು ತ್ತಿದ್ದ ಮೂರ್ತಿಯ ಮುಂದೆ ನರಸಿಂಹಾಚಾರ್ಯರನ್ನು ಕೂರಿಸಿಕೊಳ್ಳುತ್ತಿದ್ದರು. ಗುರುಗಳ ಕೈಚಳಕ ವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ಕೂತುಬಿಡುತ್ತಿದ್ದರು. ಆ ಆಕೃತಿಯ ರೇಖಾವಿನ್ಯಾಸಗಳೂ, ಭಾವ ಭಂಗಿಗಳೂ ಮುಗಿಲಿನಲ್ಲಿ ಚಲಿಸುವ ಮೋಡದೋಪಾದಿಯಲ್ಲಿ ಒಂದೊಂದಾಗಿ ಇವರ ಮನೋ ಗಗನದಲ್ಲಿ ಮೂಡತೊಡಗಿದವು. ಇವರಲ್ಲಿ ಯಾವುದೋ ಒಂದು ಸುಪ್ತ ಚೇತನ ಕೆರಳಿದಂತಾಗಿ ಎಂದಿಗೆ ಇಂಥ ಸುಂದರ ಕೃತಿ ರಚಿಸುವೆನೋ ಎಂದು ತವಕಪಡುತ್ತಿದ್ದರು. ನಿತ್ಯದ ಅಭ್ಯಾಸ ಮುಗಿ ದಿದ್ದರೂ ಗುರುಗಳು ಮಲಗುವುದನ್ನೇ ಕಾದು ಮಲಗಿದ ತಕ್ಷಣ ತಮ್ಮ ಕೊಟಡಿಗೆ ಬಂದು ಸೇರಿ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಹಣತೆಯ ಎದುರಿನಲ್ಲಿ ಕೂತು ಗುರುಗಳು ಬರೆಯಲು ಕೊಟ್ಟ ವಿಗ್ರಹಗಳ ರೇಖೆಗಳನ್ನು ನಕಲು ಮಾಡುವುದು, ಇಲ್ಲವೆ ತಾವು ಮುಂಚೆ ಈಕ್ಷಿಸಿದ ಮೂರ್ತಿಗಳ ಆಕೃತಿಗಳನ್ನು ನೆನೆದು ನಿದ್ದೆಗೆಟ್ಟು ಅಭ್ಯಾಸ ಮಾಡುವುದು ಮುಂತಾಗಿ ಕಲಾವಾಹಿನಿ ಇವರಲ್ಲಿ ಅಂದಿ ನಿಂದಲೇ ಪ್ರವಹಿಸತೊಡಗಿತು.

ಈ ರೀತಿ ಐದು ವರ್ಷಗಳ ಕಾಲ ಅವಿಶ್ರಾಂತವಾಗಿ ಕಲಾಶಾಲೆಯಲ್ಲೂ ಲಕ್ಷ್ಮಣಕೃಷ್ಣರಲ್ಲೂ ಶ್ರಮವಹಿಸಿ ಕಲಾಸಾಧನೆಯನ್ನು ಮಾಡಿ ಪವಿತ್ರ ಕಲಾಮಯ ಬಾಳಿಗೆ ಕಾಲಿಟ್ಟರು. ಹಾಗೆ ಅಭ್ಯಸಿಸಿ ಮೆಚ್ಚಿನ ಶಿಷ್ಯರಾಗಿ ನುರಿತು ಮರದ ಕೆತ್ತನೆಯ ಕಲಾವಿದ್ಯಾರ್ಥಿಯಾಗಿ ಶಾಲೆಯಲ್ಲೂ ಹೊರಗೂ ಹೆಸರುಗಳಿಸಿದ್ದರು. ಆಗ್ಗೆ ಇವರ ಆತ್ಮೀಯ ಕಲಾಸಾಧಕರ ಮಿತ್ರರಲ್ಲಿ ಕೆ. ಈಶ್ವರಾಚಾರ್ಯರು ಮತ್ತು ಭೈರಾಚಾರ್ಯರು ಮುಖ್ಯರು.

ಕಲಾ ಶಾಲೆಯಲ್ಲಿ ಅಭ್ಯಾಸ ಮಾಡಿ ಹೊರಬಂದ ಮೇಲೆ ನರಸಿಂಹಾಚಾರ್ಯರ ತಂದೆಯವರು ಮಗನ ಶ್ರಮದಿಂದಲೇ ಜೀವನ ನೌಕೆಯನ್ನು ಸಾಗಿಸಬೇಕಾಗಿ ಬಂದಿತು. ಚಾಮರಾಜೇಂದ್ರ ಕಲಾಶಾಲೆ ಯಲ್ಲಿ ಹಂಗಾಮಿ ಕೆಲಸಗಾರರಾಗಿ ಸೇರಿಕೊಂಡರು. ಬಾಳ ನೌಕೆ ಬಿರುಗಾಳಿಗೆ ತಲ್ಲಣಿಸದೆ ಪಾರಾಯಿತು. ಇವರ ಎಳೆತನದಿಂದ ಇದ್ದ ಕನಸೆಂದರೆ ತಾನೊಬ್ಬ ಶಿಲ್ಪಿ ಆಗಬೇಕೆಂಬುದು. ಇದನ್ನು ನನಸಾಗಿ ಮಾಡಲು ಹಗಲಿರುಳೂ ದುಡಿಯತೊಡಗಿದರು, ಅಭ್ಯಸಿಸತೊಡಗಿದರು. ಹೀಗೆ ಹದಿನೈದು ವರ್ಷಗಳ ಕಾಲ

ಅದೇ ಶಾಲೆಯಲ್ಲಿ ಸೇವೆ ಸಲ್ಲಿಸಿದರು. ಆ ವೇಳೆಯಲ್ಲಿ ಆ ಕಲಾಶಾಲೆಯ ಮುಖ್ಯಾಧಿಕಾರಿಯಾಗಿದ್ದ ಹೆರಾಲ್ಡ್ ಜಿ. ಆಲ್‌ಡರ್‌ಟನ್‌ರವರು ನರಸಿಂಹಾಚಾರ್ಯರು ರಚಿಸಿದ ಮರದ ವಿಗ್ರಹಗಳಲ್ಲಿನ ಸೊಗಸನ್ನು ಮೋಹಕತೆಯನ್ನು ಮೆಚ್ಚಿಕೊಂಡು ಇವರಲ್ಲಿ ಆದರ ಮಮತೆಗಳನ್ನು ತೋರುತ್ತಿದ್ದರು. ಒಮ್ಮೆ ಆಲ್‌ಡರ್‌ಟನ್‌ರು ಇವರನ್ನು ಕರೆಸಿ ಇವರ ಹಸ್ತರೇಖೆಗಳನ್ನು ಪರೀಕ್ಷಿಸಿ ದಂಗುಬಡಿದಿದ್ದರಂತೆ.

ನಂತರ ಅದೇ ಶಾಲೆಯ ಮುಖ್ಯಾಧಿಕಾರಿಗಳಾಗಿದ್ದ ರಾಮಸ್ವಾಮಿ ಅಯ್ಯಂಗಾರ್ಯರ ಮತ್ತು ಕಲಾವಿದ ಪಾವಂಜೆಯವರ ಒಲವನ್ನು ಇವರ ಕೃತಿಗಳು ಗಳಿಸಿದವು. ಇವರ ಗುರು ಜವರಾಯಾ ಚಾರ್ಯರು ಕೆಲಸದಿಂದ ನಿವೃತ್ತರಾಗಿದ್ದರು. ಅವರ ಸ್ಥಾನ ಇವರಿಗೆ ದೊರೆಯಿತು. ನರಸಿಂಹಾ ಚಾರ್ಯರ ಮಾತಾಪಿತೃಗಳ ಆನಂದಕ್ಕೆ ಮೇರೆಯೇ ಇಲ್ಲವಾಯಿತು. ಮಗನ ಬಾಳಪಥದಲ್ಲಿ ಚೆಲುವೆ ಯನ್ನು ತಂದುಬಿಟ್ಟರು. ರಸಿಕ ಜೀವನದಲ್ಲೇ ಲೀನರಾಗದೆ ಆ ರಸಮಯ ಅಮೃತವನ್ನು ತಾವು ರಚಿಸುವ ಮೂರ್ತಿಗಳಲ್ಲಿ ತುಂಬತೊಡಗಿದರು. ಮರದ ಮೂರ್ತಿಗಳನ್ನು ಕಡೆಯುವ ಅತ್ಯುತ್ತಮ ಶಿಲ್ಪಿ ಎನಿಸಿಕೊಂಡರು. ಎಲ್ಲೆಡೆಯಲ್ಲೂ ಇವರದೇ ಮೇಲುಗೈ ಆಯಿತು.


ಶ್ರೀ ನರಸಿಂಹಾಚಾರ್ಯರು ಪ್ರಶಾಂತ ಪ್ರದೇಶವನ್ನೇ ಸದಾ ಬಯಸುವ ವ್ಯಕ್ತಿಗಳು. ಕಲಾಹೀನ ಜನವೆಂದರೆ ಸತ್ವಹೀನ ಮಾತೆಂದರೆ ಇವರಿಗಾಗದು. ಯಾರ ಬಳಿಯೂ ತಾವಾಗಿ ಹೋಗುವವರಲ್ಲ. ಬೆರೆಯುವವರಲ್ಲ. ಜನಜಂಗುಳಿಯಲ್ಲಿ ನುಸುಳುವವರಲ್ಲ. ಶುಭ್ರವಾದ ಸಾಮಾನ್ಯ ನಿರಾಡಂಬರ ಉಡುಗೆ ತೊಡುಗೆ. ನಡುವಲ್ಲಿ ಅರೆತೋಳಿನ ಅಂಗಿಯನ್ನು ನುಂಗಿಕೊಂಡಿರುವ ಲುಂಗಿ. ಕುಳ್ಳನೆಯ ಶರೀರ ದುಂಡುಮುಖ. ಅಚ್ಚಗಪ್ಪಿನ ಗಂಭೀರ ಮುಖದಲ್ಲಿ ಹೊಳೆಯುವ ಸುಲೋಚನದಿಂದ ತಮ್ಮ ಕಾರ್ಯದಲ್ಲಿ ತನ್ಮಯರಾಗಿರುತ್ತಾರೆ. ಈ ಸರಳ ಜೀವನ ಯಾತ್ರೆಗೆ ಇವರ ತಂದೆಯವರೇ ಬಹುಮಟ್ಟಿಗೆ ಕಾರಣರು.

ಇವರು ದುಃಖಮಯ ಸನ್ನಿವೇಶಗಳಲ್ಲೇ ಬೆಳೆದು ಬಂದವರು. ಮೇಲಿಂದ ಮೇಲೆ ಮಾನಸಿಕ ಪೆಟ್ಟುಗಳು ಬೀಳುತ್ತಾ ಬಂದುವು. ಅದ್ಯಾವುದಕ್ಕೂ ಎದೆಗುಂದಲಿಲ್ಲ. ಆದರೆ ತಮ್ಮ ಮೂವತ್ತಾರರ ವಯಸ್ಸಿನಲ್ಲಿ ತಂದೆಯವರು ಇಹಲೋಕವನ್ನು ತ್ಯಜಿಸಿದ ದುಃಖವನ್ನು ನುಂಗುವುದರೊಳಗೆ ಮಮತೆಯ ಮಾತೆಯೂ ಕಣ್ಮರೆಯಾದರು. ಕಲಾರಾಧನೆಯಲ್ಲಿ ಗಾಢವಾಗಿ ಮುಂದುವರಿಯಬೇಕೆಂದಿದ್ದ ಆಚಾರ್ಯ ರಿಗೆ ಈ ಲೌಕಿಕ ವ್ಯಾಪಾರಗಳು ಮನಸ್ಸನ್ನು ಕುಂದಿಸಿದವು. ಜೀವನದಲ್ಲಿ ಜಿಗುಪ್ಸೆ ಬಂದು ಅಂಧ ಕಾರತೆಯ ಮುಸುಕು ಹೊದೆಯುವ ವೇಳೆಗೆ ಸರಿಯಾಗಿ ಬೆಳಕನ್ನು ತುಂಬುವ ಸಲುವಾಗಿಯೋ ಏನೋ ಕಲಾಜ್ಯೋತಿಯಂತೆ ಓರ್ವ ಬಾಲಕನನ್ನು ಪಡೆದರು. ಇದು ತಂದೆತಾಯಿಗಳಿಗೆ ನವಚೇತನವನ್ನಿತ್ತಿತ್ತು. ಕಲಾರಾಧನೆಯಲ್ಲಿ ಸ್ಫೂರ್ತಿಯನ್ನಿತ್ತಿತು.


ನರಸಿಂಹಾಚಾರ್ಯರು ಸಾಮಾನ್ಯ ಒರಟು ಮರದ ತುಂಡುಗಳಲ್ಲಿ ನಯವಾದ ನವುರಾದ ಮೋಹಕವಾದ ವಿಗ್ರಹಗಳನ್ನು ಕಡೆಯುವುದರಲ್ಲಿ ಕೀರ್ತಿಗಳಿಸಿದವರು. ಒಮ್ಮೆ ಬೇಲೂರು ಹಳೇ ಬೀಡು ದೇವಾಲಯಗಳ ಶಿಲ್ಪಕಲೆಯನ್ನು ನೋಡಿಬಂದ ಮೇಲೆ ಕಲ್ಲಿನಲ್ಲೂ ಮೂರ್ತಿಗಳನ್ನು ರಚಿಸ ಬೇಕೆಂಬ ಆಸೆ ಮೂಡಿತು. ಅದರಿಂದಾಗಿ ಮೈಸೂರಿನ ಅನೇಕರುವಟ್ಟಿಯ ಬೀದಿಯಲ್ಲಿ ಕಲಾತಪಸ್ವಿ ಯಂತೆ ಶಿಲ್ಪಚತುರರಾಗಿ ಕಲಾರಾಧನೆ ನಡೆಸುತ್ತಿದ್ದ ಶ್ರೀ ಶ್ರೀ ಶಿಲ್ಪಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ಪರಿಚಯವು ಆಯಿತು. ಶಿಲ್ಪಚಿತ್ರದ ಮೂಲ ಗುಟ್ಟನ್ನು ಅರಿತು ಬರಲು ಸದವಕಾಶವಾಯಿತು. ಹೆಚ್ಚಿನ ಕಾರ್ಯ ಭಾರವುಳ್ಳ ಶ್ರೀ ಶ್ರೀಯವರು ಇವರಿಗಾಗಿ ಒಂದು ಗೊತ್ತಾದ ವೇಳೆಯನ್ನಿತ್ತಿದ್ದರು— ಬಂದುಹೋಗಲು. ಶ್ರೀ ಶ್ರೀಯವರು ರಾತ್ರಿ ಹತ್ತು ಗಂಟೆಯಲ್ಲಿ ನರಸಿಂಹಾಚಾರ್ಯರನ್ನು ತಮ್ಮ ಕೋಣೆಯಲ್ಲಿ ಕೂರಿಸಿಕೊಂಡು ತಾವು ಕಲಿತ ಶಿಲ್ಪಪಾಂಡಿತ್ಯ ಭಂಡಾರದಲ್ಲಿ ಅಮೂಲ್ಯವಾದುದನ್ನು ಹೃದಯಂಗಮವಾಗಿ ವಿವರಿಸಿ ಮನದಟ್ಟಾಗುವಂತೆ ಮಾಡುತ್ತಾ ಬಂದರು. ಇವರು ಮನೆಯಿಂದ ಮಠಕ್ಕೆ ಅಲೆದಲೆದು ಹಾದಿಯೇ ಸವೆದಿರಬೇಕು! ಇದು ಸಾರ್ಥಕಗೊಂಡಿತು. ಶ್ರೀ ಶ್ರೀ ಅವರ ಕೃಪಾದೃಷ್ಟಿಯಿಂದಲೂ ಉದಾರ ಹೃದಯದಿಂದಲೂ ಉತ್ತಮ ಶಿಲ್ಪಿಗಳಾದವರಲ್ಲಿ ನರಸಿಂಹಾ ಚಾರ್ಯರೂ ಪ್ರಮುಖರು.




೧ ಶಿಲ್ಪಿ ನರಸಿಂಹಾಚಾರ್



೨ ಶಿಲ್ಪಿ ನರಸಿಂಹಾಚಾರ್ ಅವರ ಶಿಲ್ಪಕೃತಿ : ಈಶ್ವರ



೩. ವಿಷ್ಣು: ಕಲ್ಲಿನ ವಿಗ್ರಹ, ಶಿಲ್ಪಿ, ನರಸಿಂಹಾಚಾರ್



೪ ಕೇಶವ: ಮರದ ಕೆತ್ತನೆ, ಶಿಲ್ಪಿ, ನರಸಿಂಹಾಚಾರ್

ಇವರ ಶಿಲ್ಪಕಲೆಗೆ ಮೆರಗು ಕೊಟ್ಟವರಲ್ಲಿ ಲೋಹದ ಶಿಲ್ಪ ಪಿತಾಮಹ ದಿ: ಎನ್. ವಿ. ಚಿನ್ನಾಚಾರ್ಯರೆಂದರೆ ತಪ್ಪಾಗದು. ಚಿನ್ನಾಚಾರ್ಯರು ತಾವು ಕಲಿತುದನ್ನು ಬಚ್ಚಿಟ್ಟುಕೊಳ್ಳದೆ ಉದಾರವಾಗಿ ನರಸಿಂಹಾಚಾರ್ಯರು ರಚಿಸಿದ ಮೂರ್ತಿಗಳಲ್ಲಿ ಕಂಡು ಬರುವ ದೋಷಗಳನ್ನು ತಿದ್ದುತ್ತಾ ಮನೋಹರವಾದ ಭಾಗಗಳನ್ನು ಮೆಚ್ಚುತ್ತಾ ಇವರ ಶಿಲ್ಪಕಲೆಗೆ ಅಮೃತವನ್ನೆರೆದರು.

ನರಸಿಂಹಾಚಾರ್ಯರಿಂದ ಕಡೆದುಬಂದ ಮನಮೋಹಕ ಮೂರ್ತಿಗಳು ಹಲವಾರು ಕಡೆ ಸರ್ವರ ಪ್ರೀತ್ಯಾದರ ಗಳಿಸಿಕೊಟ್ಟಿವೆ. ಮೈಸೂರಿನ ಚಾಮುಂಡಿಪುರಂ ಬಡಾವಣೆಯ ಶ್ರೀ ರಾಮಮಂದಿರದಲ್ಲಿ ಕೋದಂಡರಾಮ, ಗಣಪತಿ, ಶಿವ, ನವಗ್ರಹ ಕಲ್ಲಿನ ಮೂರ್ತಿಗಳನ್ನು; ನಜರ್‌ಬಾದ್ ಬಡಾವಣೆಯಲ್ಲಿ ಶಂಕರಾಚಾರ್ಯರ ಭಾವಪೂರ್ಣ ವಿಗ್ರಹಗಳನ್ನು ಹುಣಸೂರಿನ ದೇವಾಲಯ ಒಂದರಲ್ಲಿ ನವಗ್ರಹ ಮೂರ್ತಿಗಳನ್ನು ಕಾಣಬಹುದಾಗಿದೆ.

ಮೂರಡಿ ಎತ್ತರದ ಶಂಕರಾಚಾರ್ಯರ ವಿಗ್ರಹದಲ್ಲಿ ಜೀವಕಳೆ ತುಂಬಿ ನೋಟಕರನ್ನು ಮೂಕರನ್ನಾಗಿ ಮಾಡುತ್ತದೆ. ಮತ್ತೊಂದು ಇವರು ಕಡೆದ ಒಂದೂವರೆ ಅಡಿ ಎತ್ತರದ ಸುಬ್ರಹ್ಮಣ್ಯೇಶ್ವರ ಸ್ವಾಮಿ ಎಂಬ ಮೂರ್ತಿ ದೆಹಲಿಯ ಉನ್ನತಾಧಿಕಾರಿಗಳೊಬ್ಬರ ಮನೆಯ ಒಳಾಂಗಣದಲ್ಲಿ ಶೋಭಿಸುತ್ತಿದೆ. ಈ ವಿಗ್ರಹದಲ್ಲಿ ನೋಡಬೇಕಾದ ಮೆಚ್ಚಬೇಕಾದ ಕಲಾಕೌಶಲ್ಯವೆಂದರೆ ಹಂಚಿಕಡ್ಡಿಯ ಗಾತ್ರದಲ್ಲಿ ಕಡೆದು ಸಿಲ್ಲಿಸಿದ ದಂಡವು ಸ್ವಾಮಿಯ ಬಲತೋಳಿನಲ್ಲಿ ನಿಂತಿದೆ. ಸ್ವಾಮಿಯ ಎಡಭಾಗದಲ್ಲಿ ನವಿಲೊಂದು ತನ್ನ ನೀಳವಾದ ಕೊರಳನ್ನು ಸ್ವಾಮಿಯ ಕೈಕೆಳಗೆ ತೋಳಿಗೆ ಸ್ಪರ್ಶಿಸಿ ಕೊಕ್ಕನ್ನು ಮೇಲೆ ಮಾಡಿ ಪ್ರೇಮಪೂರ್ಣ ನೋಟವನ್ನು ಬೀರಿದೆ. ಸ್ವಾಮಿಯ ಮೈ, ನಡು, ಕಂಠ, ಪಾದ, ಎದೆ—ಈ ಅಂಗಾಂಗಗಳನ್ನು ಅಲಂಕರಿಸಿರುವ ಆಭರಣಗಳಾದರೋ ಅತಿ ಸೂಕ್ಷ್ಮವಾಗಿ ಬಿಡಿಸಲ್ಪಟ್ಟಿವೆ. ಬಿಗಿದು ಗಂಟುಹಾಕಿದಂತಿರುವ ಮುಡಿ—ಮುಖದಲ್ಲಿ ಗಂಭೀರ ಭಂಗಿಯನ್ನು ತಾಳಿ ಶರೀರದ ನಿಲುವು ಒಲವುಗಳನ್ನು ಜೀವಪೂರ್ಣವಾಗಿ ಕಡೆದಿದ್ದಾರೆ. ಇವರ ಶಿಲ್ಪಕಲೆಯ ಬೆಲೆಯನ್ನಳೆಯಲು ಇದೊಂದು ಕೃತಿಯೇ ಸಾಲದೆ?

ಈಚೆಗೆ ಅಮೆರಿಕ ಕಲಾಭಿಮಾನಿಗಳಿಗೆ ಅನೇಕ ಸುಂದರ ಮೂರ್ತಿಗಳನ್ನು ಕೆತ್ತಿಕೊಡುವ ಅವಕಾಶವನ್ನು ಚಾಮರಾಜೇಂದ್ರ ಕಲಾಶಾಲೆ ಇವರಿಗೆ ಒದಗಿಸಿಕೊಟ್ಟಿತು. ಈ ಮೂರ್ತಿಗಳ ಸೌಂದರ್ಯಕ್ಕೆ ಅಸಂಖ್ಯಾತ ಕಲಾರಸಿಕರು ತಮ್ಮ ಮೆಚ್ಚಿಗೆಯನ್ನು ಸೂಚಿಸಿದ್ದಾರೆ. ನರಸಿಂಹಾಚಾರ್ಯರು ಈಗ ತಮ್ಮ ವೃತ್ತಿಯಿಂದ ನಿವೃತ್ತರಾಗಿದ್ದರೂ ಶಿಲ್ಪರಚನೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇವರ ಪುತ್ರರಿಗೆ ಶಿಲ್ಪ ಅಧ್ಯಾಪಕ ವೃತ್ತಿಯೂ ದೊರೆತಿದೆ.

ಇಂಥ ಅಪಾರ ಕಲಾಕೃತಿಗಳನ್ನು ನರಸಿಂಹಾಚಾರ್ಯರು ರಚಿಸಿದ್ದಾರೆಂದರೆ ಆಶ್ಚರ್ಯವೇ ಸರಿ. ಇವರ ಕೃತಿಗಳಲ್ಲಿ ಪ್ರಮಾಣ ಸೌಂದರ್ಯ ಪರಿಪೂರ್ಣವಾಗಿರುತ್ತದೆ. ಇವರ ಕಲಾಕೌಶಲ್ಯವನ್ನು ಸಾರುವ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ಮೂರ್ತಿಯನ್ನು ಕಂಡವರಿಗೆ ಈ ಮಾತಿನ ಅನುಭವವಾದೀತು.

ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರು ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದಾಗ ಅವರಿಗೆ ಸವಿನೆನಪಿಗಾಗಿ ನರಸಿಂಹಾಚಾರ್ಯರು ದಂತದಲ್ಲಿ ಸುಂದರವಾಗಿ ರಚಿಸಿದ ಹೈದರ್ ಟಿಪ್ಪು ಸಮಾಧಿ 'ಗುಂಬಜ್' ಗೋರಿಯನ್ನು ನೀಡಲಾಯಿತು. ಇದೊಂದು ಅಪರೂಪದ ಕೃತಿಯಾಗಿದೆ.

ನರಸಿಂಹಾಚಾರ್ಯರ ಕೃತಿಗಳಿಗೆ ದಸರಾ ವಸ್ತು ಪ್ರದರ್ಶನದ ಕಲಾವಿಭಾಗದಲ್ಲಿ ಹಲವಾರು ಬಹುಮಾನಗಳು ಬಂದಿವೆ. ೧೯೫೧ರಲ್ಲಿ ಶಿಲ್ಪದಲ್ಲಿ ಕಡೆದ ಕೋದಂಡರಾಮ ಮೂರ್ತಿಗೂ, ೧೯೫೪ರಲ್ಲಿ ಬೇಲೂರು ದೇವಾಲಯದ ಕಂಬದ ಮಾದರಿಯಲ್ಲಿ ಕೆತ್ತಿದ ವಿದ್ಯುತ್‌ದೀಪದ ನಿಲುವಿಗೂ, ೧೯೫೪ರಲ್ಲಿ ಬಾಲಸುಬ್ರಹ್ಮಣ್ಯಸ್ವಾಮಿ ಶಿಲಾಮೂರ್ತಿಗೂ, ೧೯೫೭ರಲ್ಲಿ ಕರಿಮರದಲ್ಲಿ ಕಡೆದ ಮದನಿಕೆಮೂರ್ತಿಗೂ ಪ್ರಥಮ ಬಹುಮಾನಗಳು ದೊರೆತಿವೆ. ಅಲ್ಲಿಂದ ಈಚೆಗೆ ಇವರ ಅನೇಕ ಶಿಲ್ಪಕೃತಿಗಳು ಪ್ರದರ್ಶಿತವಾಗಿವೆ. ಆದರೆ ಯುವಕರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸ್ಪರ್ಧೆಗೆ ನೀಡುತ್ತಿರಲಿಲ್ಲ. ಇವರ ಹಿರಿಯ ಗುಣಕ್ಕೆ ಇದೊಂದು ಸಾಕೆನಿಸುತ್ತದೆ.

ಹೀಗೆ ಬರಡು ಮರ, ಕಲ್ಲು, ಲೋಹಗಳಿಂದ ಉತ್ಕೃಷ್ಟ ಕಲಾಮೂರ್ತಿಗಳನ್ನು ಕಡೆಯುತ್ತಿರುವ ನರಸಿಂಹಾಚಾರ್ಯರ ಕಲಾ ಪ್ರೌಢಿಮೆ ಹಲವು ಮುಖಗಳಲ್ಲಿ ಹರಿದಿದೆ. ಹಿಂದೊಮ್ಮೆ ಶಿಲ್ಪಕಲೆಗೆ ತೌರುಮನೆಯೆನಿಸಿದ್ದ ನಮ್ಮ ನಾಡಿನಲ್ಲಿ ಜಕಣ ಡಂಕಣರಂಥ ಶಿಲ್ಪಕೋವಿದರು ಜನ್ಮವೆತ್ತಿದ ಈ ನೆಲದಲ್ಲಿ ಇನ್ನೂ ಅಲ್ಲಲ್ಲಿ ಶಿಲ್ಪಿಗಳಿದ್ದಾರೆ. ಶಿಲ್ಪಕಲೆ ನಮ್ಮ ನಾಡಿನಲ್ಲಿ ಇನ್ನೂ ಸಜೀವವಾಗಿ ಉಳಿದಿದೆ ಎಂದು ಸಾರುವಂತೆ ಇಂಥ ಶಿಲ್ಪಾರಾಧಕರು ಕಲಾಸೇವೆಯನ್ನು ಸಲ್ಲಿಸುತ್ತಾ ಬಂದಿರುವುದು ಒಂದು ಹೆಮ್ಮೆಯ ವಿಷಯ! ಹಿಂದೆ ಶಿಲ್ಪಕಲೆಗಿದ್ದ ಪ್ರೋತ್ಸಾಹ ಉತ್ತೇಜನ ರಾಜಾಶ್ರಯಗಳು ಈಗಿಲ್ಲದಿದ್ದರೂ ಈ ಕಲೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ನರಸಿಂಹಾಚಾರ್ಯರಂಥ ಆಧುನಿಕ ಶಿಲ್ಪಿಗಳಿಗೆ ಕನ್ನಡಿಗರು ಋಣಿಯಾಗಿರಬೇಕು. ಇಂಥ ನಿಷ್ಣಾತ ಕಲಾಭ್ಯಾಸಿಗಳಿಗೆ ಪ್ರೋತ್ಸಾಹ ಎಂಬಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಪ್ರಶಸ್ತಿ ನೀಡಿ ಗೌರವಿಸಿದ್ದು ಹೆಮ್ಮೆ ಪಡುವ ಸಂಗತಿ.

ಮಾವಿನಕುಳಿ ಶ್ರೀನಿವಾಸ

ರಾಜಕೀಯ ವಾಸನೆ ಇಲ್ಲದ ಜನಾಂಗ ಕೃಷ್ಣಗೊಲ್ಲರು

ಶಿವಮೊಗ್ಗಾ ಜಿಲ್ಲೆಯ ಸಾಗರದಿಂದ ಮೂರು ಮೈಲಿ ಹಾದು ಬಂದರೆ ಕರ್ಕಿಕೊಪ್ಪ ಊರು ಕಾಣಸಿಗುತ್ತದೆ. ಈ ನನ್ನ ಊರಿಗೆ ಒಂದು ಕೂಗಳತೆ ದೂರದಲ್ಲೆ ಇರುವ ಶಾರದಾಪುರ. ಇಲ್ಲಿ ಪ್ರೌಢ ಶಾಲೆಯ ತನಕ ವಿದ್ಯಾಸಂಸ್ಥೆಗಳು, ಅಂಚೆ ಕಛೇರಿ, ಕುಟುಂಬ ಕಲ್ಯಾಣ ಕೇಂದ್ರದ ಜೊತೆಗೇ ಹೆರಿಗೆ ಕೇಂದ್ರ, ಸಣ್ಣ ಪುಟ್ಟ ಅಂಗಡಿಗಳು, ಹೋಟೆಲು, ಯುವಕಸಂಘ, ಮಹಿಳಾ ಸಮಾಜದ ಕಛೇರಿಗಳು, ಜನತಾ ಗೃಹಗಳು, ಕಾರ್ಮಿಕರ ಮನೆಗಳು ಎಲ್ಲ ಇರುವಂತೆಯೇ ಒಂದು ದೊಡ್ಡ ಮೈದಾನವೂ ಇದೆ. ಈ ವಿಶಾಲ ಮೈದಾನದ ಬಟ್ಟಾನುಬಯಲಿನಲ್ಲಿ ಹಾವಾಡಿಗರು ಬಂದು ಬೀಡುಬಿಟ್ಟಿದ್ದನ್ನು ಒಂದು ದಿನ ನೋಡಿದೆ. ಅವರ ಬದುಕಿನ ರೀತಿನೀತಿಗಳನ್ನು ಪರಾಮರ್ಶಿಸಬೇಕೆಂಬ ನನ್ನ ಒಳಕುತೂಹಲವನ್ನು ಅದುಮಲಾಗದೆ ಒಂದು ಮುಂಜಾನೆ ಏಳು ಗಂಟೆಯ ಮೊಳಗಿನಲ್ಲಿಯೇ ಅಲ್ಲಿಗೆ ಹೋದೆ. ಅಕ್ಕ ಪಕ್ಕಗಳಲ್ಲಿ ಕಟ್ಟಿಕೊಂಡಿದ್ದ ಒಂದೇ ಕುಟುಂಬದ ಬಿಡಿಬಿಡಿಯಾದ ಪುಟ್ಟ ಪುಟ್ಟ ಗುಡಿಸಲುಗಳು. ಬರಿಯ ಅರಿವೆ ಮತ್ತು ತಟ್ಟಿಗಳಿಂದ ಕಟ್ಟಿದ ಗುಡಿಸಲುಗಳು ಅವಾದ್ದರಿಂದ ಆಂಗ್ಲ ಭಾಷೆಯಲ್ಲಿ ಹೇಳುವುದಾದರೆ ಅವು easily portable.

ಪ್ರತಿಯೊಂದು ಗುಡಿಸಲಿನ ಬಳಿಯೂ ಕಾವಲುಗಾರನಂತೆ ಅರಚುತ್ತಿದ್ದ ಒಂದೊಂದು ನಾಯಿ, ಅಡ್ಡಾಡುವ ಕೋಳಿ, ಅಳುವ ಮಗು, ಅವರ ಸಂಸಾರವನ್ನೇ ಸ್ಥಳಾಂತರಿಸುವ ಅತ್ತಿಂದಿತ್ತ ಗಸ್ತು ತಿರುಗುತ್ತಿದ್ದ ಅವರದೇ ಕತ್ತೆಗಳು. ಮತ್ತೊಂದು ಕಡೆ ಬೇಯುತ್ತಿರುವ ಗಂಜಿ—ಇವಿಷ್ಟು ನನ್ನ ಮೊದಲ ನೋಟಕ್ಕೆ ಡಿಕ್ಕಿ ಹೊಡೆದ ದೃಶ್ಯಗಳು.

ಬದುಕಿಗೆ ಇಂಥದೇ ಎಂಬ ನಿರ್ದಿಷ್ಟ ಊರಿಲ್ಲದ, ನೆಲೆಯಿಲ್ಲದ 'ಶೆಟ್ಟಿ ಬಿಟ್ಟಲ್ಲೇ ಪಟ್ಟಣ' ಎಂಬಂತೆ ಯಾವ ಗೊತ್ತು ಗುರಿಗಳಿಲ್ಲದೆ ಎಲ್ಲೆಂದರಲ್ಲಿ ಓಡಾಡಿ ಬೇಡಿ ಜೀವನ ಸಾಗಿಸುವ ಈ ಸಂಚಾರಿ ಜನಾಂಗವೇ 'ಕೃಷ್ಣಗೊಲ್ಲ'ರು.

ಸುಮಾರು ಐದು ದಶಕಗಳ ಹಿಂದೆ ತಮ್ಮ ವಂಶಜರು ಎತ್ತಿನ ವ್ಯಾಪಾರ ಮಾಡುತ್ತಿದ್ದರೆಂದೂ ಅದರಿಂದಾಗಿ ಶೇಖರಿಸಿಟ್ಟಿದ್ದ ಬೆಳ್ಳಿ ರೂಪಾಯಿಗಳು ಇಂದಿಗೂ ತಮ್ಮ ಬಳಿ ಇವೆ ಎಂಬ ಒಂದು ಹೆಮ್ಮೆ ಈ ಗೊಲ್ಲರ ಮುಖದಲ್ಲಿ ತೇಲಾಡುತ್ತದೆ.

ಸಂಚಾರಿ ಜನಾಂಗವಾದ್ದರಿಂದ ಕೃಷ್ಣಗೊಲ್ಲರ ಜನಸಂಖ್ಯೆಯನ್ನು ಕರಾರುವಾಕ್ಕಾಗಿ ಲೆಕ್ಕ ಹಾಕುವುದು ಕಷ್ಟಸಾಧ್ಯವಾದ ಮತ್ತು ಬಲು ಪೇಚಿನ ಕೆಲಸವೇ ಸರಿ. ಆದರೂ ವರುಷದಲ್ಲಿ ಮಳೆಗಾಲದ ಮೂರು ತಿಂಗಳ ಕಾಲವಾದರೂ ಬೆಂಗಳೂರು, ಶಿವಮೊಗ್ಗಾ, ಚಿಕ್ಕಮಗಳೂರು ಹೀಗೆ ಕೆಲವು ಕಡೆಗಳಲ್ಲಿ ಖಾಯಂ ಆಗಿ ವಾಸಮಾಡಲು ಪ್ರಯತ್ನಿಸುತ್ತಾರೆ. ಹೀಗಾಗಿ ಶಿವಮೊಗ್ಗಾ ಒಂದರಲ್ಲೇ ಸುಮಾರು ೪೦೦ ಜನ ಕೃಷ್ಣಗೊಲ್ಲರು ಇರಬಹುದೆಂದು ಅಂದಾಜು ಮಾಡಲಾಗಿದೆ.

ಮದ್ರಾಸಿನ ಹಾವುಗೊಲ್ಲರಿಗೆ ಹೋಲಿಸಿದರೆ ಅವರಿಗೂ ಕೃಷ್ಣಗೊಲ್ಲರಿಗೂ ನಡುವೆ ಯಾವ ಸಂಬಂಧವೂ ಇರುವಂತೆ ಕಂಡುಬರುವುದಿಲ್ಲ. ಹಾಗೆ ನೋಡಿದರೆ, ಒಬ್ಬರಿಗೊಬ್ಬರು ಪರಸ್ಪರ ಶತ್ರುಗಳಾದ ಇವರುಗಳ ಉದ್ಯೋಗವಾದರೂ ವಿರುದ್ಧವಾಗಿಯೇ ಇದೆ. ಕೃಷ್ಣಗೊಲ್ಲರು ಹಾವನ್ನು ಹಿಡಿದು ಕೃಷ್ಣನು ಕೊಳಲನೂದಿದಂತೆ ಪುಂಗಿ ಊದಿ ಹಾವಾಡಿಸುವುದು, ಅಷ್ಟೆ. ಆದರೆ ಹಾವುಗೊಲ್ಲರು ಹಾವನ್ನು ಹಿಡಿದು ಅದರ ಚರ್ಮ, ಚಕ್ಕಳಿಕೆ ತೆಗೆದು ಅದರ ಮಾರಾಟದಿಂದಲೇ ಬದುಕುವ ಹಿಂಸಾಚಾರಿಗಳು. ಹೀಗೆ ವೃತ್ತಿಯಲ್ಲೂ ವಿರೋಧಾಭಾಸ ಕಂಡುಬರುವ ಇವರ ನಡುವೆ ಕ್ರೂರ ವೈರ ಇರುವುದು ಕೇಳಿಬರುತ್ತದೆ.

ದಿನವಿಡೀ ಊರೂರಿನ ಮನೆಮನೆಗೆ ಅಲೆದಾಡಿ ಹಾವಾಡಿಸಿ ಬೇಡಿ ತಂದಾಗ ಮಾತ್ರ ಇವರ ಉದರಂಭರಣ. ಅಲ್ಲಲ್ಲಿ ಕೂಡಿಹಾಕಿದ ಪೈಸೆಗಳನ್ನು ಸೇರಿಸಿದರೆ ಮಾಸಿಕ ವರಮಾನ ಹೆಚ್ಚು ಎಂದರೆ ಮೂವತ್ತು ರೂಪಾಯಿ ಆಗಬಹುದು. ಹಾಗೆಂದಕೂಡಲೆ ಎಂದಿಗೂ ಸಾಲ ಮಾಡುವ ಜನ ಮಾತ್ರ ಇವರಲ್ಲ. ಬದಲಾಗಿ, ಉತ್ತರ ಕನ್ನಡ ಜಿಲ್ಲೆಯ ಸಿರ್ಸಿಯಲ್ಲಿ ನಾಲ್ಕೈದು ಸಾವಿರ ರೂಪಾಯಿಗಳವರೆಗೂ ಸಾಲ ಕೊಟ್ಟಿದ್ದೇವೆ ಎಂದು ಇವರೆನ್ನುವಾಗ ಬೆಳ್ಳಿರೂಪಾಯಿಗಳು ನೆನಪಿನಲ್ಲಿ ಕುಣಿದವು. ನಂಬಿಕೆ ಗಳಿಸಿದ ಜನರಿಗೆ ಆರೇಳು ಸಾವಿರದವರೆಗೂ ಕರಾರು ಬರೆಸಿಕೊಂಡು ಐದು ವಾರ್ಷಿಕ ಕಂತುಗಳ ಮೇಲೆ ಸಾಲ ಕೊಡಲು ತಯಾರಿದ್ದೇವೆನ್ನುವ ಇವರು ಒಂದು ಪೈಸೆಯನ್ನೂ ಬಡ್ಡಿಯಾಗಿ ಪಡೆಯುವುದಿಲ್ಲವಂತೆ. ಸೋಜಿಗದ ಸಂಗತಿಯೇ ಸರಿ. ತಮ್ಮ ಎಲ್ಲಾ ಹಣವನ್ನೂ ಶಿವಮೊಗ್ಗಾದ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳ ಬಳಿ ಭದ್ರವಾಗಿಟ್ಟಿದ್ದೇವೆ, ಬೇಕಾದರೆ ತರಿಸಿಕೊಡುತ್ತೇವೆ ಎನ್ನುತ್ತಾರೆ. ಪ್ರಾಯಶಃ ಎತ್ತಿನ ವ್ಯಾಪಾರದಿಂದ ಹಿರಿಯರು ಕೂಡಿಟ್ಟ ಹಣ ಇರಬಹುದು.

ಬೇಟೆನಾಯಿಗಳನ್ನು ಸಾಕಿಕೊಂಡಿರುವ ಕೃಷ್ಣಗೊಲ್ಲರು 'ಶಿಕಾರಿ' ಮಾಡುವುದನ್ನು ಉಪಕಸುಬನ್ನಾಗಿ ತಮ್ಮ ಬದುಕಿಗೆ ಅಂಟಿಸಿಕೊಂಡಿದ್ದಾರೆ. ಹಾವನ್ನು ಹಿಡಿದು ಆಡಿಸುವುದರ ಜೊತೆಗೆ ಹಾವು ಮತ್ತು ಹುಚ್ಚುನಾಯಿ ಕಚ್ಚಿದಾಗ ತೇಯ್ದು ಹಚ್ಚಿದರೆ ವಾಸಿಯಾಗುವ ಬೇರನ್ನು ಇವರು ಕೊಡುತ್ತಾರೆ. ಬಾಬಾಬುಡನ್‌ಗಿರಿಯ ಮುಸ್ಲಿಮರ ಫಾರಂನಿಂದ ವರುಷದಲ್ಲಿ ಒಂದೇದಿವಸದಂದು ತಂದರೆ ಮಾತ್ರ ಸಿದ್ಧಿಸುವ ಈ ಬೇರುಗಳಲ್ಲಿ ಎರಡು ಬಗೆ—ಒಂದು: ನಾಗಭೂತಾಳಿ, ಎರಡು: ನಿರ್ವಚನ

ನಾಗಭೂತಾಳಿಯನ್ನು ನಮ್ಮ ದೇಹದಲ್ಲಿ ಕಟ್ಟಿಕೊಂಡರೆ ಎಂತಹ ವಿಷದ ಹಾವೂ ನಮ್ಮ ಬಳಿ ಸುಳಿಯುವುದಿಲ್ಲ, ಕಚ್ಚುವುದಿಲ್ಲ. ಈ ಬೇರನ್ನು ಅಕ್ಕಿ ಮತ್ತು ಕಾಳುಜೀರಿಗೆಯೊಳಗಿಟ್ಟರೆ ಯಾರಿಗೆ ಹಾವು ಕಚ್ಚಿದರೂ ಉಪಯೋಗಕ್ಕೆ ಬರುತ್ತದೆ.

ನಿರ್ವಚನ ಬೇರನ್ನು ಮನೆಯೊಳಗೆ ಕಟ್ಟಿದರೆ ಹಾವು ಬರುವುದಿಲ್ಲ ಎಂಬ ಅಂಶ ಗಮನೀಯ. ನಾನು ಪ್ರತ್ಯಕ್ಷವಾಗಿ ಕಂಡಂತೆ ಇವರು ಹಾವು ಹಿಡಿಯುವಾಗ ಹಿಂದೆ ಹೇಳಿದ ಬೇರುಗಳನ್ನೇ ಕೈಯಲ್ಲಿ ಹಿಡಿದುಕೊಂಡಿರುತ್ತಾರೆ. ಹಾಗಾಗಿ ಇವರ ಬದುಕಿನಲ್ಲಿ ಢೋಂಗಿತನವಾಗಲಿ, ಆಷಾಢಭೂತಿತನವಾಗಲಿ ಇಲ್ಲ ಎನ್ನಬಹುದು.

ವಿದ್ಯೆ ಕೃಷ್ಣಗೊಲ್ಲರ ಪಾಲಿಗೆ ನೈವೇದ್ಯ, ಸಂಚಾರಿ ಜನಾಂಗವಾದ್ದರಿಂದ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಿಲ್ಲವೆಂದು ಮರುಗುತ್ತಾರೆ. ಇಂದಿನ ಶಿಕ್ಷಣ ವ್ಯವಸ್ಥೆ ನಮ್ಮನ್ನು ಇವರಷ್ಟು ಸ್ವಾವಲಂಬಿಗಳನ್ನಾಗಿಸದಿರುವುದಕ್ಕೆ ಸಂತಾಪ ಸಹಜವಾಗಿಯೇ ಉಂಟಾಗುತ್ತದೆ.

ತೀರಾ ಸಾಮಾನ್ಯವೆಂಬಂತೆ ದಿನಾಲು ಮುಂಜಾನೆ ಸ್ನಾನ ಮುಗಿಸಿ ತಮ್ಮ ಆರಾಧ್ಯ ದೇವರಾದ ಶ್ರೀ ವೆಂಕಟರಮಣನಿಗೆ ಪೂಜೆ ಸಲ್ಲಿಸುತ್ತಾರೆ. ಆದರೆ ದೇವರೇ ಎಲ್ಲಾ ಮಾಡುತ್ತಾನೆ ಎಂದು ಬೆಂಕಿಗೆ ಸೇರುಗಟ್ಟಳೆ ತುಪ್ಪ ಸುರಿಯುವುದಾಗಲೀ, ಕೈಕಟ್ಟಿ ಕುಳಿತು ವಾರಗಟ್ಟಳೆ ಜಪ ಮಾಡುವುದಾಗಲೀ, ದೆವ್ವ ಪಿಶಾಚಿಗಳ ಕುರಿತು ಮೂಢನಂಬಿಕೆಗಳಾಗಲೀ ಇವರಿಗಿಲ್ಲ. ಜನನ ಮರಣ ಸಂಸ್ಕಾರದಲ್ಲೂ ನಾವು ಯಾವ ಹೊಸತನ್ನೂ ಕಾಣುವುದಿಲ್ಲ. ವರುಷದಲ್ಲಿ ಉಗಾದಿ ಮತ್ತು ಪೂರ್ಣಿಮಿ (ಮಹಾನವಮಿ) ಎರಡೇ ಆಚರಿಸುವ ಹಬ್ಬಗಳು.




೧ ಕೃಷ್ಣಗೊಲ್ಲ



೨ ಗೊಲ್ಲರ ಸಂಸಾರ



೩ ಗೊಲ್ಲ ಸ್ತ್ರೀ



೪ ಹಾವಾಡಿಸುವಿಕೆ

ಚಪ್ಪರದವರು, ಮುಸ್ಲಿಮರು ಮತ್ತು ಹರಿಜನರ ಮನೆಗಳಲ್ಲಿ ಇವರು ಊಟ ಮಾಡುವುದಿಲ್ಲ, ಸಂಬಂಧವನ್ನೂ ಬೆಳೆಸುವುದಿಲ್ಲ. ತಮ್ಮ ಜಾತಿ ಬಿಟ್ಟರೆ, ಮಣ್ಣು ಒಡ್ಡರ ಜೊತೆ ಸಂಬಂಧ ಬೆಳೆಸುವುದಕ್ಕೆ ಇವರಿಗೆ ಯಾವ ಅಡ್ಡಿ ಆತಂಕಗಳೂ ಇಲ್ಲ.

ವರದಕ್ಷಿಣೆಯ ಗಾಳಿ ಬೀಸದ ಕೃಷ್ಣಗೊಲ್ಲರ ಜನಾಂಗದಲ್ಲಿ ತಂದೆತಾಯಿಗಳು ಆರಿಸಿ ತೀರ್ಮಾನಿಸಿದ ವಧೂವರರನ್ನೇ ಒಪ್ಪಿಕೊಳ್ಳಬೇಕು. ಆಯ್ಕೆಗೆ ಸ್ವಾತಂತ್ರ್ಯವಿಲ್ಲ. ಕಾರಣ ಕೇಳಿದರೆ, 'ತಂದೆ ತಾಯಿಯರ ಮಾತಿಗೆ ಗೌರವ-ಕಿಮ್ಮತ್ತು ಕೊಡದವರು ಮಕ್ಕಳಲ್ಲ, ಪಾಪಿಗಳು' ಅನ್ನುತ್ತಾರೆ.

ರಾಜಕೀಯಕ್ಕೆ ಸಂಬಂಧಪಟ್ಟಂತೆ ಕೆಲವು ಪ್ರಶ್ನೆಗಳನ್ನು ಕೇಳಬೇಕೆನಿಸಿತು. ನನ್ನ ಪ್ರಶ್ನೆಗಳಿಗೆಲ್ಲ ಜೀವ ಕೊಟ್ಟೆ.

೧. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಗೊತ್ತಾ?

'ಇಲ್ಲ, ಅಯ್ನೋರೇ'

ಕುತೂಹಲ ಕೆರಳಿ ಮತ್ತೊಂದು ಪ್ರಶ್ನೆ ಹಾಕಿದೆ.

೨. ಇಂದಿರಾಗಾಂಧಿ ಗೊತ್ತಾ?

'ಇಲ್ಲ, ಬಿದ್ರೀ!'

ಉತ್ತರ ದಂಗುಬಡಿಸಿತು. ಸುಧಾರಿಸಿಕೊಳ್ಳಲು ಒಂದು ಸೆಕೆಂಡು ಬೇಕಾಯಿತು. ಏನಾದರಾಗಲೆಂದು ಪುನಃ ಕೇಳಿದೆ.

೩. ನೀವು ಎಂದಾದರೂ ಮತ ನೀಡಿದ್ದೀರಾ?

'ಸ್ವಾಮೀ, ಅದೊಂದ್ ಕೆಲ್ಸ ಮಾತ್ರ ನಮ್ಮ ಜೀವನ್ದಾಗ್ ಮಾಡ್ಲಿಲ್ಲ'.

ನಿರಪರಾಧಿ ಭಾವದಿಂದ ಉತ್ತರಿಸಿದಾಗ ನನ್ನ ಬಾಯಿ ಕಟ್ಟಿಹೋಯಿತು.

ವಿದ್ಯಾಭ್ಯಾಸದಿಂದ, ರಾಜಕೀಯ ಹಕ್ಕುಗಳಿಂದ, ಸರಕಾರದ ಸವಲತ್ತುಗಳಿಂದ ಕೃಷ್ಣಗೊಲ್ಲರು ವಂಚಿತರಾಗಿದ್ದರೆ ಅದಕ್ಕೆ ಮೂಲಕಾರಣ ಬಹುಮಟ್ಟಿಗೆ ಅವರ ಈ ಅಲೆಮಾರಿ ಜೀವನ . ಆದರೆ ದೇಶದ ಜನಸಂಖ್ಯೆಯಲ್ಲಿ ತಲೆಮರೆಸಿ ಹೋದರೂ, ಯಾವ ರಾಜಕೀಯ ಸೋಂಕೂ ಇವರನ್ನು ತಟ್ಟದಿದ್ದರೂ ಇವರು ಮಾತ್ರ ನಿಶ್ಚಿಂತರಾಗಿದ್ದಾರೆ.

ಹೀಗೆ ಭಾರತಕ್ಕೆ ಸ್ವಾತಂತ್ರ್ಯ ಬಂದು ಮೂವತ್ತೊಂದು ಸಂವತ್ಸರಗಳು ಉರುಳಿ ಹೋದರೂ ಸ್ವಾತಂತ್ರ್ಯ ಬಂದಿದ್ದೇ ಗೊತ್ತಿರದ, ವಿಸ್ಮಯಪಡಬಹುದಾದಷ್ಟು ಸುದೀರ್ಘಕಾಲ ನಿರಂತರವಾಗಿ ಈ ದೇಶದ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯ ಹೆಸರನ್ನೂ ಕೇಳಿರದ, ಒಂದೇ ಒಂದು ಚುನಾವಣೆಯಲ್ಲಾದರೂ ಮತ ಚಲಾಯಿಸುವಷ್ಟು ರಾಜಕೀಯ ವಾಸನೆಯೂ ಬಡಿಯದ, ರಾಜಕೀಯ ವ್ಯವಸ್ಥೆಯೊಂದು ನಮ್ಮನ್ನು ಆಳುತ್ತಿದೆ ಎಂಬ ಕಲ್ಪನೆಯೂ ಇಲ್ಲದ ಕೃಷ್ಣಗೊಲ್ಲರಂಥ ಜನಾಂಗವೊಂದು ಭಾರತದಲ್ಲಿದೆ ಎಂಬ ಸೋಜಿಗ ಪ್ರಾಯಶಃ ಹಲವರಿಗೆ ಗೊತ್ತಿಲ್ಲ. ಆದರೆ ಇದು ಬಟ್ಟೆಬಿಚ್ಚಿ ಬೆತ್ತಲಾಗುವಷ್ಟೇ ಸತ್ಯ ಸಂಗತಿ. ಇಂತಹ ಇನ್ನೆಷ್ಟು ಜನಾಂಗಗಳು ನಮ್ಮ ದೇಶದ ಉದ್ದಗಲಗಳಲ್ಲಿ ತಲೆಮರೆಸಿಕೊಂಡಿವೆಯೋ ಯಾರು ಬಲ್ಲರು?

ದೇಶದಲ್ಲಿ ಜೀವಂತ ಇದ್ದರೂ ಕಳೆದುಹೋಗಿರುವ ಈ 'ಕೃಷ್ಣಗೊಲ್ಲ'ರೂ ಭಾರತೀಯರು ಎಂಬುದನ್ನು ಗುರುತಿಸಿ ಅವರಿಗೆ ನಿಲ್ಲಲು ಒಂದು ನಿರ್ದಿಷ್ಟವಾದ ನಾಗರಿಕ ನೆಲೆಯನ್ನು ಕಲ್ಪಿಸಿಕೊಟ್ಟು ತನ್ಮೂಲಕ ಅವರ ಬದುಕಿಗೆ ಶಾಶ್ವತ ವ್ಯವಸ್ಥೆಯೊಂದನ್ನು ರೂಪಿಸಿಕೊಡಬೇಕಾದ ಹೊಣೆ ಬಹುತರವಾಗಿ ಸರಕಾರದ್ದು. ಸರಕಾರ ಇದನ್ನು ಮಾಡೀತೇ? ಯಕ್ಷ ಪ್ರಶ್ನೆ.

ಇಲ್ಲದಿದ್ದರೆ, ಎಂದಾದರೊಂದು ದಿನ ಇವರು ತಮ್ಮ ಪುಂಗಿಯ ಶಬ್ದವನ್ನು ಹೆಚ್ಚಿಸಿದಾಗ, ಆ ಪುಂಗಿಯ ನಾದದಲ್ಲಿ ಖಂಡಿತಾ ಮಾಧುರ್ಯವನ್ನು ನಾವು ಕಾಣಲು ಸಾಧ್ಯವಿಲ್ಲ.

ದಕ್ಷಿಣ ಕರ್ನಾಟಕದಲ್ಲಿ ಜಾನಪದ ಸಂಸ್ಕೃತಿಯನ್ನು ದಟ್ಟವಾಗಿ ಉಳಿಸಿಕೊಂಡು ಬಂದ ಜನಾಂಗಗಳಲ್ಲಿ, ಕಾಡುಗೊಲ್ಲರು ಮುಖ್ಯರು. ಸಂಸ್ಕೃತ 'ಗೋಪಾಲ' ಶಬ್ದದಿಂದ ಕನ್ನಡದ 'ಗೊಲ್ಲ' ಶಬ್ದ ರೂಪಗೊಂಡಿದೆ. ತುಪ್ಪಗಳನ್ನು ಮಾರುವುದು ಒಂದು ಕಾಲಕ್ಕೆ ಈ ಜನಾಂಗದ ಮುಖ್ಯ ಕಸುಬಾಗಿತ್ತು. ಈಗ ವ್ಯವಸಾಯವನ್ನು ಅವಲಂಭಿಸಿದವರೂ ಹೆಚ್ಚಾಗಿದ್ದಾರೆ. ಕುರಿಗಳ ಮಂದೆಯನ್ನು ಪಡೆದವರೂ ಇದ್ದಾರೆ.

ಊರುಗೊಲ್ಲರು, ಕಾಡುಗೊಲ್ಲರು ಎಂದು ಗೊಲ್ಲರಲ್ಲಿ ಎರಡು ಬಗೆ. ತುಮಕೂರು, ಚಿತ್ರದುರ್ಗ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಕಾಡುಗೊಲ್ಲರು ಹೆಚ್ಚಾಗಿ ಕಾಣಬರುತ್ತಾರೆ. . . . . ಸಾಮಾನ್ಯವಾಗಿ ಇವರ ಜನಾಂಗಗಳ ಜೊತೆ ಬೆರೆಯದ ಇವರು ಸುತ್ತಲೂ 'ಕಳ್ಳಿ'ಗಳನ್ನು ಕಟ್ಟಿಕೊಂಡು ಬೀಳುತ್ತಾರೆ . . . . ಕಾಡುಗೊಲ್ಲರು ನಾಗರಿಕತಾದೂರವಾದ ಗ್ರಾಮಾಂತರ ಪ್ರದೇಶಗಳಲ್ಲಿ ಗುಡ್ಡಗಾಡುಗಳಲ್ಲಿ ವಾಸಮಾಡುವ ಜನ. ಮೂಲ ಸಂಸ್ಕೃತಿ ಇವರಲ್ಲಿ ನಿಚ್ಚಳವಾಗಿ ಉಳಿದು ಬಂದಿದೆ.

(ಶ್ರೀ ಜೀ. ಶಂ. ಪರಮಶಿವಯ್ಯನವರ 'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು' ಗ್ರಂಥದಿಂದ ಉದ್ಧೃತ, ಪು. ೨೦೧)

ಬಿ. ಆರ್. ಕೃಷ್ಣ

ಜನಸಂಖ್ಯೆ ಬೆಳವಣಿಗೆ ಮತ್ತು ಜನಾಂಗದ ಬಯಕೆಗಳ ಪೂರೈಕೆ—ಒಂದು ವಿವೇಚನೆ

ಸದ್ಯದ ಪರಿಸ್ಥಿತಿಯಲ್ಲಿ ಜನಸಂಖ್ಯೆಯ ಅಭಿವೃದ್ಧಿಯು ನಮ್ಮ ಮುಂದಿರುವ ಅದ್ಭುತ ಸಮಸ್ಯೆಯಾಗಿದೆ. ಇಪ್ಪತ್ತನೆಯ ಶತಮಾನದ ಈ ದಿನಗಳಲ್ಲಿ ಜಗತ್ತನ್ನು ಸುತ್ತಿಬಂದರೆ, ಮಾನವನ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಲ್ಲಿ, ಬೆಳೆಯುತ್ತಿರುವ ಜನಸಂಖ್ಯೆ ಹಾಗೂ ಸಂಪನ್ಮೂಲಗಳ ಇತಿ-ಮಿತಿಯ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ. ಚೈನಾದೇಶದ ಜನಸಂಖ್ಯೆಯನ್ನು ಸೂಚಿಸುವ ಬೃಹತ್ ಅಂಕಿ-ಅಂಶಗಳು, ಜಾವಾದಲ್ಲಿ ಕಂಡುಬರುವ ಅಧಿಕ ಜನಸಾಂದ್ರತೆ, ಭಾರತದ ಜನಸಂಖ್ಯೆಯನ್ನು ತಡೆಯಲು ಮಾಡಿರುವ ಪ್ರಯತ್ನಗಳು, ಫಿಜಿ ಮತ್ತು ಸಿಲೋನ್‌ಗಳಲ್ಲಿ ವಲಸೆ ಹೋಗುವ ಮತ್ತು ಬರುವ ಜನಗಳು ಆಸ್ಟ್ರೇಲಿಯದಲ್ಲಿರುವ ವಿಶಾಲವಾದ ವ್ಯರ್ಥ ಭೂಪ್ರದೇಶಗಳು ಅಲ್ಲದೆ ಭೂಸವೆತ. ಮಾನವಜನಾಂಗಕ್ಕೆ ಒಂದು ದೊಡ್ಡ ಸವಾಲನ್ನೆಸೆದಿವೆ. ಇದಲ್ಲದೆ ಕಾಡು ಮತ್ತು ವನ್ಯಜೀವಿಯ ನಾಶ, ವಾಯುಮಂಡಲದ ಮಾಲಿನ್ಯ ಮುಂತಾದ ಸಮಸ್ಯೆಗಳು ಅಧಿಕಗೊಂಡು ಜಗತ್ತಿನಲ್ಲಿ ಹೊಸ ಜಾಗೃತಿಯನ್ನು ಉಂಟುಮಾಡುತ್ತಿರುವುದನ್ನು ಯಾವ ಪ್ರವಾಸಿಯು ಬೇಕಾದರೂ ಗಮನಿಸಬಹುದು. ಇದರ ಜೊತೆಯಲ್ಲಿಯೇ, ಹೆಚ್ಚುತ್ತಿರುವ ಜನಸಂಖ್ಯೆ ಹೇಗೆ ಜಗತ್ತಿನಲ್ಲಿ ಹೊಸ ಹೊಸ ಸಮಸ್ಯೆಯ ಬಗೆಗೆ ಇತಿಹಾಸ ಸೃಷ್ಟಿಸುತ್ತಿವೆ ಎಂಬುದನ್ನು ಗಮನಿಸಬಹುದು. ೧೯೫೪ರಲ್ಲಿ ವಿಶ್ವಸಂಸ್ಥೆಯು ರೋಮ್‌ನಲ್ಲಿ ನಡೆಸಿದ ಒಂದು ಅಂತರರಾಷ್ಟ್ರೀಯ ಸಮ್ಮೇಳನ ಜಗತ್ತಿನ ಜನಸಂಖ್ಯಾ ಅಧ್ಯಯನದ ಬಗೆಗೆ ಒಂದು ಹೊಸ ಅಧ್ಯಾಯವನ್ನು ಸೃಷ್ಟಿಸಿತು. ಅಂತರರಾಷ್ಟ್ರೀಯ ಸಂಸ್ಥೆಯ ಆಶ್ರಯದಲ್ಲಿ ನಡೆದ ಈ ಸಮ್ಮೇಳನ ವಿಶ್ವದ ಜನಸಂಖ್ಯೆಯ ಸಮಗ್ರ ಸಮೀಕ್ಷೆಮಾಡಲು ಅವಕಾಶ ಮಾಡಿಕೊಟ್ಟಿತು.

ಥಾಮಸ್ ಮಾಲ್‌ಥಸ್ ಶತಮಾನದ ಹಿಂದೆ ಜನಸಂಖ್ಯಾ ಬೆಳವಣಿಗೆಯ ಬಗೆಗೆ ಎಚ್ಚರಿಸುತ್ತಾ ಆಹಾರ ಪೂರೈಕೆಯ ಪ್ರಮಾಣದಲ್ಲಿ ಕಂಡುಬರುವ ಕೊರತೆಯು, ಜನತೆಯನ್ನು ಹಸಿವು, ದುಃಖಗಳಿಂದ ನರಳುವಂತೆ ಮಾಡುತ್ತದೆಂದಿದ್ದಾನೆ. ಕೈಗಾರಿಕಾಕ್ರಾಂತಿಯ ನಂತರ ವ್ಯವಸಾಯ ಕ್ಷೇತ್ರದಲ್ಲಾದ. ಉತ್ಪಾದನಾ ಆಧಿಕ್ಯ, ಮಾಲ್‌ಥಸ್‌ನ ಸಿದ್ಧಾಂತದ ಬಗೆಗೆ ಕೆಲವು ಸಂದೇಹಗಳನ್ನು ಸೃಷ್ಟಿಸಿ, ಆ ಸಿದ್ಧಾಂತವನ್ನು ಉಪೇಕ್ಷಿಸುವ ವಾತಾವರಣ ಹುಟ್ಟಿಸಿತ್ತು. ಅದರಲ್ಲೂ ೧೯ನೇ ಶತಮಾನದಲ್ಲಿ, ವ್ಯವಸಾಯ ರಂಗ ಸಾಧಿಸಿದ ಅದ್ಭುತ ಪ್ರಗತಿ, ಮಾಲ್‌ಥಸ್‌ನ ವಾದವಾದ "ಆಹಾರದ ಉತ್ಪಾದನೆ, ಅಂಕಗಣಿತ ರೀತ್ಯ ಹಾಗೂ ಜನಸಂಖ್ಯಾ ಬೆಳವಣಿಗೆ—ಜ್ಯಾಮಿತಿಯ ರೀತ್ಯ" ಎಂಬುದು ಸುಳ್ಳೆಂದು ಸಾಧಿಸಲು ಪ್ರಯತ್ನಿಸಿತು. ಆದರೆ ೨೦ನೇ ಶತಮಾನ—ಆಹಾರ ಉತ್ಪಾದನೆಯಲ್ಲಿ ಆಧಿಕ್ಯ ಸಾಧಿಸಿದರೂ ಕೂಡ, ಅದು ಅಂಕಗಣಿತ ಪ್ರಮಾಣಕ್ಕಿಂತ ಹೆಚ್ಚಾಗಿರಲಿಲ್ಲವೆಂಬುದು ಇತ್ತೀಚಿನ ಅಂಕಿ-ಅಂಶಗಳಿಂದ ವ್ಯಕ್ತಪಟ್ಟಿದೆ. ಈ ಪ್ರಮಾಣದ ಉತ್ಪಾದನೆ ನಿರಂತರವಾಗಿ ಮುಂದುವರಿಯುವ ಬಗೆಗೆ ತಜ್ಞರೂ ತಮ್ಮ ಸಂದೇಹ ವ್ಯಕ್ತಪಡಿಸಿದ್ದಾರೆ.

ಮಾಲ್‌ಥಸ್ ಜನಸಂಖ್ಯಾ ಸಿದ್ಧಾಂತದ ಕೆಲವು ಅಂಶಗಳನ್ನು ಒಪ್ಪಲು ಸಾಧ್ಯವಿಲ್ಲದಿದ್ದರೂ,

ಜನಸಂಖ್ಯಾ ಬೆಳವಣಿಗೆಯು ಜ್ಯಾಮಿತಿಯ ಪ್ರಮಾಣದಲ್ಲಿ ಉಂಟಾಗುವುದೆಂಬುದನ್ನು ಒಪ್ಪಬಹುದಾಗಿದೆ. ಆಹಾರದ ಉತ್ಪಾದನೆಯಲ್ಲಿ ಈ ಏರಿಕೆ ಕಂಡುಬರುತ್ತಿಲ್ಲ. ಪುರಾತನ ಸಮಾಜಗಳಲ್ಲಿ, ಮುಖ್ಯವಾಗಿ. ಪ್ರಕೃತಿಯು ಅನೇಕ ಮಾರ್ಗಗಳ ಮೂಲಕ. (ಕ್ಷಾಮ, ಸಾಂಕ್ರಾಮಿಕ ಜಾಡ್ಯಗಳು. ಪ್ರವಾಹ, ಮುಂತಾದವು) ಜನಸಂಖ್ಯಾ ನಿಯಂತ್ರಣವನ್ನು ಸಾಧಿಸಿದ್ದವು "*The Population Problem*" ಎನ್ನುವ ತನ್ನ ಉತ್ಕೃಷ್ಟ ಗ್ರಂಥದಲ್ಲಿ ಕಾರ್. ಸ್ಯಾಂಡರ್ಸ್ ಎಲ್ಲ ಅನಾಗರಿಕ ಸಮಾಜಗಳೂ. ಶಿಶುಹತ್ಯೆ ಗರ್ಭಪಾತ ಅಥವಾ ಗರ್ಭನಿರೋಧಕ ಔಷಧಗಳ ಬಳಕೆ, ಅಥವಾ ದೀರ್ಘಕಾಲದ ಲೈಂಗಿಕ ಸಂಬಂಧಗಳ ನಿಷೇಧಗಳನ್ನು ಅನುಸರಿಸಿ ಜನನ ನಿಯಂತ್ರಣ ಸಾಧಿಸಿದವೆನ್ನುತ್ತಾನೆ.

ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿ ಜನಸಂಖ್ಯೆಯ ಹೆಚ್ಚಳ ಮೇಲೆ ಬೀರಿದ ಪರಿಣಾಮ

೧೯ನೇ ಶತಮಾನದ ಅನೇಕ ಸಮಾಜಗಳಲ್ಲಿ ವಿಜ್ಞಾನ ನೇರವಾಗಿ ಜನ ಜೀವನವನ್ನು ಪ್ರವೇಶಿಸಿತು. ಮುಖ್ಯವಾಗಿ ಜನನ ನಿಯಂತ್ರಣದ ಬಗೆಗಿನ ಸಂಶೋಧನೆಗಳು ಯಶಸ್ವಿಯಾಗಿ ಅನೇಕ ಹೊಸ ಕೃತಕ ವಿಧಾನಗಳು ಜನಪ್ರಿಯವಾಗತೊಡಗಿದವು. ಪಶ್ಚಿಮದಲ್ಲುಂಟಾದ ಈ ಜನಪ್ರಿಯತೆ ಕ್ರಮೇಣ ಎಲ್ಲಾ ಭಾಗಗಳನ್ನು ಆವರಿಸಿತು. ಈ ಹಂತದಲ್ಲಿ ಜಗತ್ತಿನ ಜನಸಂಖ್ಯೆ ಒಂದು ಹೊಸ ಆಯಾಮವನ್ನು ಪ್ರವೇಶಿಸಿತು. ಜನಸಂಖ್ಯೆಯ ಬೆಳವಣಿಗೆ ಮತ್ತು ಆಹಾರದ ಉತ್ಪಾದನೆಯಲ್ಲಿನ ಸ್ಪರ್ಧೆ ಮಾತ್ರವಲ್ಲದೆ, ಜನನ ನಿಯಂತ್ರಣ. ಹಾಗೂ ಮರಣ ನಿಯಂತ್ರಣಗಳ ನಡುವೆಯೂ ಸ್ಪರ್ಧೆ ಏರ್ಪಟ್ಟಿತೆನ್ನಬಹುದು.

ಜನಸಂಖ್ಯಾ ಚಕ್ರ: ಜಗತ್ತಿನ ಜನಸಂಖ್ಯೆಯ ಬೆಳವಣಿಗೆ ಒಂದೇ ಸಮನಿಲ್ಲದಿರುವುದನ್ನು ನಾವು ಗಮನಿಸಬಹುದು. ಪ್ರತಿಯೊಂದು ದೇಶವೂ ತನ್ನದೇ ಆದ "ಜನಸಂಖ್ಯಾ ಚಕ್ರ"ವನ್ನು ಹೊಂದಿರುತ್ತದೆ. ಜನಸಂಖ್ಯಾ ತಜ್ಞರು. "ಜನಸಂಖ್ಯಾ ಚಕ್ರ"ವನ್ನು ನಿರ್ದಿಷ್ಟ ರೀತಿಯಲ್ಲಿ ಪ್ರಯೋಗಿಸಿದ್ದಾರೆ. ಪ್ರತಿಯೊಂದು ಜನಸಂಖ್ಯೆಯು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಬೆಳವಣಿಗೆಯ ನಾನಾ ಘಟ್ಟಗಳನ್ನು ಹಾದುಹೋಗುತ್ತದೆ. ಹುಟ್ಟು-ಸಾವುಗಳ "ಅಧಿಕ ಪ್ರಮಾಣದ" ಅಸ್ಥಿರ ನೆಲಗಟ್ಟಿನ ಹಂತದಿಂದ ಪ್ರಾರಂಭವಾಗಿ ನಿಧಾನವಾಗಿ ವೃದ್ಧಿಹೊಂದುತ್ತವೆ. ನಂತರ "ಕಡಿಮೆಯಾದ ಸಾವಿನ ಪ್ರಮಾಣ ಅಧಿಕಗೊಂಡ ಹುಟ್ಟಿನ ಪ್ರಮಾಣದಿಂದ" ಪ್ರಾರಂಭ ಅಭಿವೃದ್ಧಿಯ ಅವಸ್ಥೆಯನ್ನು ಮುಟ್ಟುತ್ತದೆ. ತೃತೀಯ ಘಟ್ಟದಲ್ಲಿ ಜನಸಂಖ್ಯೆ ಅಭಿವೃದ್ಧಿ ಹೊಂದಿದರೂ ಸಹ ಪ್ರಾರಂಭಿಕ ಅಭಿವೃದ್ಧಿಯ ಹಂತದಲ್ಲಿ ಕಂಡುಬರುವ ತೀವ್ರವಾದ ಹೆಚ್ಚಳವಿಲ್ಲದಿರುವುದನ್ನು ಗಮನಿಸಬಹುದು. ಅಂತಿಮಘಟ್ಟದಲ್ಲಿ ಜನಸಂಖ್ಯಾ ಹೆಚ್ಚಳ ಕಂಡುಬಂದರೂ ಸಹ "ಜನನ-ಮರಣ" ಪ್ರಮಾಣದಲ್ಲಿ ಕಂಡುಬರುವ ಸಾಮರಸ್ಯದಿಂದ ಬೆಳವಣಿಗೆಯ ಗತಿಯು ತುಂಬಾ ನಿಧಾನವಾಗಿರುತ್ತದೆ. ಒಮ್ಮೆ ಈ ಘಟ್ಟವನ್ನು ತಲುಪಿದ ಜನಸಂಖ್ಯೆ ಜೀವನದ ಹೊಸ ವಿಧಾನಗಳನ್ನು ಕಂಡುಹಿಡಿಯಬೇಕಾಗುತ್ತದೆ. ಮುಖ್ಯವಾಗಿ ಆಹಾರ. ಹೊಸಭೂಮಿ ಮುಂತಾದುವುಗಳ ಬಗೆಗೆ ಮಾನವ ಚಿಂತಿಸಬೇಕಾಗುತ್ತದೆ. ಪಶ್ಚಿಮ ಯೂರೋಪ್‌ನ ಅನೇಕ ರಾಷ್ಟ್ರಗಳು ಈಗಾಗಲೆ ಮೂರನೆ ಘಟ್ಟ (ತೀವ್ರ ಹೆಚ್ಚಳವಿಲ್ಲದ ಹಂತ)ವನ್ನು ತಲುಪಿವೆ. ಅಭಿವೃದ್ಧಿ ಹೊಂದುತ್ತಿರುವ (ಉದಾ: ಭಾರತ, ಚೈನಾ) ಅನೇಕ ರಾಷ್ಟ್ರಗಳೂ ಎರಡನೆ ಹಂತವಾದ "ಪ್ರಾರಂಭಿಕ ಅಭಿವೃದ್ಧಿ"ಯನ್ನು ಮುಟ್ಟಿವೆ. ಶೇಕಡ ೩ರಷ್ಟು ಬೆಳವಣಿಗೆಯನ್ನು ಅನೇಕ ರಾಷ್ಟ್ರಗಳಲ್ಲಿ ಸಾಧಿಸಲಾಗಿದೆ. ಶೇಕಡ ೨ರಷ್ಟು ಬೆಳವಣಿಗೆಯನ್ನು ಹೊಂದಿರುವ ಒಂದು ರಾಷ್ಟ್ರದ ಜನತೆ ಕೇವಲ ೩೫ ವರ್ಷಗಳ ಅವಧಿಯಲ್ಲಿ ದ್ವಿಗುಣಗೊಳ್ಳುತ್ತದೆ. ವಸ್ತುಸ್ಥಿತಿ ಹೀಗಿರುವಲ್ಲಿ ಶೇಕಡ ೩ರಷ್ಟು ಅಭಿವೃದ್ಧಿ ಸಾಧಿಸಿರುವ ಭಾರತ, ಚೈನಾದಂತಹ ರಾಷ್ಟ್ರಗಳಲ್ಲಿ ಜನಸಂಖ್ಯೆ ಕೇವಲ ೭ ವರ್ಷಗಳಲ್ಲಿ ದ್ವಿಗುಣಗೊಳ್ಳುವ ಸಾಧ್ಯತೆಗಳಿವೆ. ಈ ಪ್ರಮಾಣದ ಬೆಳವಣಿಗೆಯಿಂದ. ಜಗತ್ತಿನಲ್ಲಿ ಸುಮಾರು ಎರಡು ಸಾವಿರದ ಐನೂರುಕೋಟಿ ಮಕ್ಕಳೇ ಇರುವ ಸಾಧ್ಯತೆ ಹೆಚ್ಚಾಗುತ್ತಿದೆ. ಇವುಗಳ ಅವಶ್ಯಕತೆಗಳನ್ನು ಪೂರೈಸುವುದು ಸಾಮಾನ್ಯದ ಮಾತಲ್ಲ. ಈ ಜನ ಪ್ರವಾಹವನ್ನು ನಿಯಂತ್ರಿಸಲು ನಿಶ್ಚಿತ ಪ್ರಯತ್ನವನ್ನು ಮಾಡದಿದ್ದಲ್ಲಿ ಜಗತ್ತು ಅದರಲ್ಲೇ ಕೊಚ್ಚಿಹೋಗುವ ಅಪಾಯವಿದೆ. ಆದರೂ ಕೆಲವು ಆಶಾವಾದಿಗಳು ವಿಜ್ಞಾನ ಒಂದು ನಿಶ್ಚಿತ ಪರಿಹಾರವನ್ನೊದಗಿಸುತ್ತದೆ ಎಂದು

ನಂಬಿದ್ದಾರೆ. ಬೆಳೆಯುತ್ತಿರುವ ಜನಸಂಖ್ಯೆಗೆ ಹೊಸ ಭೂ ಪ್ರದೇಶಗಳನ್ನು ಆಕ್ರಮಿಸಿಕೊಂಡು ಸುಧಾರಿತ ಬೇಸಾಯದ ಮೂಲಕ ಅವರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯ. ಇಲ್ಲವೇ ಸಾಗರದಾಳದಲ್ಲಿ ಆಹಾರ ಉತ್ಪಾದನೆ, ತೀವ್ರ ಕೈಗಾರಿಕೀಕರಣ ಮುಂತಾದ ಕ್ರಮಗಳಿಂದ ಸಮಾಜದ ಅವಶ್ಯಕತೆಗಳನ್ನು ಈಡೇರಿಸಲು ಪ್ರಯತ್ನಿಸಬಹುದು.

ನೂತನ ಮಾರ್ಗಗಳು ಹಾಗೂ ಜನಸಂಖ್ಯಾ ಅಭಿವೃದ್ಧಿ: ಮೇಲಿನ ಎಲ್ಲ ಮಾರ್ಗಗಳನ್ನೂ ಗಾತ್ರದ ದೃಷ್ಟಿಯಿಂದ ನೋಡಿದಾಗ ಇವುಗಳಿಂದ ಅಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುವುದಿಲ್ಲವೆಂದು ಖಚಿತವಾಗಿ ಹೇಳಬಹುದು. ಆಹಾರದ ಉತ್ಪಾದನೆ ಜನಸಂಖ್ಯಾ ಉತ್ಪಾದನೆಗಿಂತ ಮಿಗಿಲಾದ ಪ್ರಮಾಣದಲ್ಲಿ ಉಂಟಾಗಲು. ಅಪಾರವಾದ ಶ್ರಮ. ಬಂಡವಾಳ ತಂತ್ರ. ಮತ್ತು ಸಮಯದ ಅವಶ್ಯಕತೆ ಇದೆ. ದಟ್ಟವಾದ ಕಾಡುಗಳನ್ನು ತೆರವು ಮಾಡಲು, ಬೃಹತ್ ನೀರಾವರಿ ಅಣೆಕಟ್ಟುಗಳನ್ನು ನಿರ್ಮಿಸಲು. ಸಣ್ಣ ಹಾಗು ಬೃಹತ್ ಉದ್ಯಮಗಳನ್ನು ಸ್ಥಾಪಿಸಲು ಖಚಿತ ಯೋಜನೆಗಳು, ತಂತ್ರಜ್ಞರು, ಬಂಡವಾಳ ಹೂಡಿಕೆ, ಮುಂತಾದ ಅಗಾಧ ಸಂಪನ್ಮೂಲಗಳ ಅವಶ್ಯಕತೆ ಇದೆ.

ಈ ಎಲ್ಲ ಕಾರ್ಯಗಳಿಗಿಂತ ಹೆಚ್ಚಾಗಿ ಪರಂಪರಾನುಗತವಾಗಿ ಬಂದ ಸಾಂಪ್ರದಾಯಿಕ ಮೌಲ್ಯಗಳ ಬದಲಾವಣೆಯು ಕಷ್ಟಕರವಾದುದೆನ್ನಬಹುದು. ಈ ಪ್ರಯತ್ನಗಳು ಸಫಲಗೊಳ್ಳುವ ವೇಳೆಗೆ ಜನಸಂಖ್ಯೆಯು ಪ್ರಮಾಣದಲ್ಲಿ ತೀವ್ರವಾದ ಏರಿಕೆ ತಲೆದೋರಿ ಉತ್ಪನ್ನಗಳ ಕೊರತೆಯುಂಟಾಗುತ್ತದೆ. ಇತ್ತೀಚಿನ ಉದಾಹರಣೆಯಂತೆ ಸಿಂಧೂ ಪ್ರಾಂತ್ಯದಲ್ಲಿ ನಿರ್ಮಿಸಿದ ಸುಮಾರು ೪,೦೦೦ ಚದರ ಮೈಲಿ ವಿಸ್ತಾರವಾದ ವ್ಯವಸಾಯ ಯೋಗ್ಯ ಭೂಮಿಯನ್ನು ಭಾರತದ ಜನತೆಯ ಜನಸಾಂದ್ರತೆ ಪ್ರಮಾಣದಲ್ಲಿ ಕಿಂಚಿತ್ ಬದಲಾವಣೆಯನ್ನುಂಟುಮಾಡದೆ. ಏರಿರುವ ಜನಸಂಖ್ಯೆ ಆಕ್ರಮಿಸಿಕೊಂಡಿತು.

ಪ್ರತಿವರ್ಷ ಸೃಷ್ಟಿಯಾಗುತ್ತಿರುವ ೩೪ ಮಿಲಿಯನ್ ಜೀವಿಗಳಿಗೆ ಆಹಾರವನ್ನೊದಗಿಸುವ ಕಾರ್ಯದಲ್ಲಿ ವ್ಯವಸಾಯರಂಗದ ಉತ್ಪಾದನೆ ಹಿಂದೆ ಬಿದ್ದಿದೆ. ಆಹಾರದ ಉತ್ಪಾದನೆ ಮತ್ತು ಜನಸಂಖ್ಯೆ ನಡುವಣ ಸ್ಪರ್ಧೆಯಲ್ಲಿ ಜನಸಂಖ್ಯೆಯು ಹೆಚ್ಚಳ ನೇರವಾದ ಜಯಗಳಿಸಿದೆ ಎಂಬುದು ಸ್ಪಷ್ಟವಾಗಿರುವ ಅಂಶವಾಗಿದೆ. ಜಾಗತಿಕ ಆಹಾರ ಸಂಸ್ಥೆಯ ಇತ್ತೀಚಿನ ವರದಿಗಳ ಪ್ರಕಾರ ಜಗತ್ತಿನ ೨/೩ರಷ್ಟು ಜನಸಂಖ್ಯೆ ಪೋಷಕಾಂಶಗಳ ಕೊರತೆ ಇಂದ ಬಳಲುತ್ತಿದೆ. ಈ ಕೊರತೆಯನ್ನು ತುಂಬಲು ನಿಶ್ಚಿತವಾದ ವ್ಯವಸ್ಥೆ ಬೇಕಾಗಿದೆ. ಜನಸಂಖ್ಯೆ ಹಾಗೂ ಅದರ ಅವಶ್ಯಕತೆಗಳ ನಡುವೆ. ಒಂದು ಸಮತೋಲನ ಉಂಟುಮಾಡುವ ಜನಸಂಖ್ಯಾ ನೀತಿ ನಿರೂಪಣೆಯಾಗಬೇಕು. ಈ ನೀತಿಯು ಸಾಕಷ್ಟು ವಾಸ್ತವಾಂಶಗಳನ್ನು ಅನುಸರಿಸುವಂತಿರಬೇಕು. ಜನಸಂಖ್ಯಾ ಬೆಳವಣಿಗೆ ಅನಿವಾರ್ಯ ಮತ್ತು ಅವಶ್ಯಕ ಎಂಬ ಕಲ್ಪನೆಯನ್ನು ಕ್ಷಣಕಾಲ ಮರೆತು, ವಾಸ್ತವ ಜಗತ್ತಿನ ಬಗೆಗೆ ವಿಚಾರಮಾಡುವ ಸಮಯ ಇದೆಂದು ಹೇಳಬಹುದು. ವಿಜ್ಞಾನ ಎಲ್ಲ ಸಮಸ್ಯೆಗಳನ್ನು ನಿವಾರಿಸುತ್ತದೆ ಎಂದು ನಂಬಿ ನಾವು ವಾಸ್ತವಾಂಶಗಳ ಬಗೆಗೆ ಅಜ್ಞರಾಗಿದ್ದೇವೆ.

ಆಹಾರದ ಉತ್ಪಾದನೆಯಂತೆ ಜೀವ ಜನನವೂ ಪ್ರಕೃತಿಯ ಒಂದು ಭಾಗವೆನ್ನಬಹುದು. ಉಳಿದೆಲ್ಲ ಪ್ರಕೃತಿಯ ಭಾಗಗಳನ್ನು ಅಭ್ಯಾಸ ಮಾಡಿ ಅರ್ಥಮಾಡಿಕೊಂಡು ನಿಯಂತ್ರಿಸುವಂತೆ ಮಾನವನ ಬಯಕೆಗಳನ್ನೂ ನಿಯಂತ್ರಿಸಿ ಜನಸಂಖ್ಯೆಯ ಹೆಚ್ಚಳವನ್ನು ಕ್ರಮಬದ್ಧಗೊಳಿಸಬೇಕಾಗಿದೆ. ಆಹಾರದ ಉತ್ಪಾದನೆಯಲ್ಲಿ ಹೇಗೆ ವಿಜ್ಞಾನವನ್ನು ಬಳಸಿಕೊಂಡು ಉತ್ಪತ್ತಿಯನ್ನು ಅಧಿಕಗೊಳಿಸಲು ಪ್ರಯತ್ನಗಳು ನಡೆದಿವೆಯೋ ಅದೇ ರೀತಿ ಜೀವಗಳ ಬೆಳವಣಿಗೆಯನ್ನು ತಡೆಯಲು ಬಳಸಿಕೊಳ್ಳಬೇಕಾಗಿದೆ.

ಜನನ ನಿಯಂತ್ರಣಗಳ ಬಗೆಗೆ ನಡೆಸುವ ಮೂಲಭೂತ ಸಂಶೋಧನೆಗಳ ಜೊತೆಗೆ ಜನಮನಗಳ ಮಾನಸಿಕ ದೃಷ್ಟಿಕೋನಗಳನ್ನು ಅಭ್ಯಸಿಸುವ ಪ್ರಯತ್ನಗಳು ಇಂದು ಹೆಚ್ಚಾಗಿ ನಡೆಯಬೇಕಾಗಿದೆ. ತಾಂತ್ರಿಕ ಗರ್ಭನಿರೋಧಕಗಳಲ್ಲದೆ, ಉತ್ತಮ ಆಡಳಿತ ವ್ಯವಸ್ಥೆ, ಪ್ರಚಾರ ವ್ಯವಸ್ಥೆಗಳು ಜನತೆಯ ಮಾನಸಿಕ ಪರಿವರ್ತನೆಯಲ್ಲಿ ಮಹತ್ವದ ಪಾತ್ರವಹಿಸಬಲ್ಲವು. ಮುಂಬರುವ ೩೦–೪೦ ವರ್ಷಗಳ ಅವಧಿಯಲ್ಲಿ ಜನನ ನಿಯಂತ್ರಣಗಳ ಬಗೆಗೆ ನಾವು ಖಚಿತ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ದುಃಖ

ದಾರಿದ್ರ್ಯದಿಂದ ಕಂಗೆಡುವ ಕೋಟ್ಯಾಂತರ ಮುಖಗಳನ್ನು ಕಾಣಬೇಕಾಗುತ್ತದೆ. ಆದುದರಿಂದ, ಇತಿ-ಮಿತಿ ಇಲ್ಲದೆ ಬೆಳೆಯುತ್ತಿರುವ ಜಗತ್ತಿನ ಜನಸಂಖ್ಯೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕಾಗಿದೆ.

ಇದುವರೆವಿಗೆ, ಜನಸಂಖ್ಯೆ-ಆಹಾರ ಇವುಗಳಿಗಿರುವ ಸಂಬಂಧವನ್ನು ಸೂಕ್ಷ್ಮವಾಗಿ ಚರ್ಚಿಸಿದ್ದಾಯಿತು. ಹೆಚ್ಚುತ್ತಿರುವ ಜನಸಂಖ್ಯೆ ಜೀವನದ ಎಲ್ಲ ರಂಗಗಳ ಮೇಲೂ ನೇರವಾದ ಪರಿಣಾಮ ಬೀರಬಲ್ಲದು. ಆಹಾರದ ಉತ್ಪಾದನೆಗೆ ಸಿದ್ಧಪಡಿಸಿದ ಅನೇಕ ಲಕ್ಷಾಂತರ ಹೆಕ್ಟೇರ್ ಭೂಮಿಯನ್ನು ಬೆಳೆಯುತ್ತಿರುವ ನಗರಗಳು, ರಸ್ತೆಗಳು, ಸಣ್ಣ ಪುಟ್ಟ ಕೈಗಾರಿಕೆಗಳು, ವಿಮಾನ ನಿಲ್ದಾಣಗಳು, ಸೈನಿಕ ನೆಲೆಗಳು, ಮುಂತಾದುವು ಆಕ್ರಮಿಸಿಕೊಳ್ಳುತ್ತಿರುವುದರಿಂದ ಉತ್ಪಾದನೆ ತೆಗೆಯುವ ಭೂಮಿಯ ವಿಸ್ತೀರ್ಣ ಕಡಿಮೆಯಾಗುತ್ತಿದೆ.

ಅನೇಕ ರಾಷ್ಟ್ರಗಳಲ್ಲಿ ವ್ಯವಸಾಯಕ್ಕೆ ಭೂಮಿಯನ್ನು ಆಕ್ರಮಿಸಿಕೊಳ್ಳುವ ಸಲುವಾಗಿ ಅರಣ್ಯಗಳು ನಿರ್ನಾಮವಾದುದರಿಂದ ಭೂಸವೆತ ವನ್ಯಮೃಗಗಳ ನಾಶ ಉಂಟಾಗಿದೆ.

ಆಹಾರ ಒಂದರಿಂದಲೇ ಜೀವಿಯು ಜೀವಿಸುವುದಿಲ್ಲ ಅಥವಾ ಆಹಾರಕ್ಕಾಗಿಯೇ ಬದುಕುವುದಿಲ್ಲ. ಬಟ್ಟೆ, ವಸತಿ ಮುಂತಾದುವಲ್ಲದೆ ಎಲ್ಲ ಐಹಿಕ ಸೌಕರ್ಯಗಳು ಅವನಿಗೆ ಬೇಕು. ಅಲ್ಲದೆ, ಸೌಂದರ್ಯ, ಕ್ರೀಡೆ, ಆಸಕ್ತಿ, ಸಂತೋಷ ಇವುಗಳಿಲ್ಲದ ಮಾನವ ಸಮಾಜವನ್ನು ಊಹಿಸಲು ಸಾಧ್ಯವಿಲ್ಲ. ಅಧಿಕ ಜನಸಂಖ್ಯೆ ಈ ಎಲ್ಲ ಸೌಲಭ್ಯಗಳನ್ನು ನುಂಗಿಹಾಕುತ್ತಿದೆ. ಇಂದಿನವರೆವಿಗೆ ಉಂಟಾದ ಜನಸಂಖ್ಯಾ ಹೆಚ್ಚಳದಿಂದ ನಿರ್ಮಾಣಗೊಂಡಿರುವ ಬೃಹತ್ ನಗರಗಳು, ಅವುಗಳ ಮೂಲ ಉದ್ದೇಶವಾದ ಸುಖ ಸಂತೋಷಗಳಿಂದ ದೂರ ಸರಿದಿವೆ ಎಂದು ಹೇಳಬಹುದು. ಪ್ರಕೃತಿಯ ಜೊತೆಯಲ್ಲಿ ನೇರವಾದ ಸಂಪರ್ಕವಿಲ್ಲದ ಲಕ್ಷಾಂತರ ಮಂದಿ, ಮಾನಸಿಕ ತೊಳಲಾಟದಿಂದ ನರಳುತ್ತ ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ.

ಹೆಚ್ಚುತ್ತಿರುವ ಜನಸಂಖ್ಯೆ ಜಗತ್ತಿನ ಸುಂದರ ಪ್ರಕೃತಿ ಸ್ಥಾನಗಳನ್ನು ಆಕ್ರಮಿಸುತ್ತಿದೆ. ಚಿಕ್ಕ ದೇಶಗಳಾದ ಇಂಗ್ಲೆಂಡ್ ಮುಂತಾದುವುಗಳಲ್ಲಿ ಜನಸಾಂದ್ರತೆ ಇಂದ ಉಂಟಾದ ಒತ್ತಡದಿಂದ, ಭೂ ಆಕ್ರಮಣ, ಸವೆತ, ನಾಶ, ನಿರಂತರ ಕ್ರಿಯೆಯಾಗಿದೆ. ಆಫ್ರಿಕದ ದಟ್ಟ ಕಾಡುಗಳಲ್ಲಿನ ವನ್ಯಜೀವನದ ಮೇಲೆ ನಡೆಯುತ್ತಿರುವ ನಿರಂತರ ಆಕ್ರಮಣದಿಂದ ಅವುಗಳ ಸಂತತಿ ನಿರ್ನಾಮಗೊಳ್ಳುತ್ತಿದೆ. ಜಗತ್ತಿನ ಪರ್ವತಪ್ರದೇಶಗಳು, ಧ್ರುವ ಪ್ರದೇಶಗಳು ಮಾನವನ ಆಕ್ರಮಣಕ್ಕೆ ಗುರಿಯಾಗಿವೆ. ಕೈಗಾರಿಕೆ ಉತ್ಪಾದಿಸಿದ ಉತ್ಪನ್ನಗಳಿಂದ ಮಾನವ, ತನ್ನ ಹಳೆಯ ಪರಂಪರೆ, ಸಾಂಸ್ಕೃತಿಕ ಜೀವನ ಇವುಗಳನ್ನು ಮರೆತು ಹೆಚ್ಚು ಕೃತಕವಾಗುತ್ತಿದ್ದಾನೆ. ಜನಸಂಖ್ಯಾಸಮಸ್ಯೆಯ ಸಮಗ್ರಾವಲೋಕನದಿಂದ ಮಾನವನ ಜೀವನದ ಸಾಮಾನ್ಯ ಮೌಲ್ಯಗಳ ಪುನರ್ ಪರಿಶೀಲನೆ ಸಾಧ್ಯವಾಗುತ್ತದೆ. ಪ್ರಥಮವಾಗಿ ಜನಸಂಖ್ಯಾಗಾತ್ರಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಹಿಂತೆಗೆದುಕೊಂಡು ಸಮಾಜದ ಬದುಕಿಗೆ ಹೆಚ್ಚು ಬೆಲೆ ಕೊಡಬೇಕು.

ಎರಡನೆಯದಾಗಿ ಮಾನವನ ಅವಶ್ಯಕತೆಗಳನ್ನು ಹೆಚ್ಚಾಗಿ ಪೂರೈಸುವ ಪರಿಸರವನ್ನು ನಿರ್ಮಿಸಬೇಕು. ಅತ್ಯುತ್ತಮವಾದ ಪರಿಸರ ನಿರ್ಮಾಣದಿಂದ, ವ್ಯಕ್ತಿಯ ಸಂಪೂರ್ಣ ವಿಕಾಸ ಉಂಟಾಗುತ್ತದೆ. ಮಾನವನ ಅವಶ್ಯಕತೆಗಳ ಹೆಚ್ಚು ಪೂರೈಕೆಯಿಂದ ಅವನು ತನ್ನ ಅತ್ಯುತ್ತಮ ಮಟ್ಟ ಮುಟ್ಟಲು ಸಾಧ್ಯವಾಗುತ್ತದೆ. ಬದುಕಿನ ಅವಶ್ಯಕತೆಗಳನ್ನು ಹೆಚ್ಚು ಹೆಚ್ಚು ಪೂರೈಸುವ ಮೌಲ್ಯಗಳ ಅವಶ್ಯಕತೆ ಇಂದಿನ ಸಮಾಜದಲ್ಲಿ ಹೆಚ್ಚಾಗಿದೆ. ಆಹಾರ, ಆರೋಗ್ಯ, ಶಕ್ತಿ ಮತ್ತು ವಿಶ್ರಾಂತಿ ಇವುಗಳು ಸಮಾಜದ ಆಧಾರಗಳಾಗಿವೆ. ಗುರುತಿಸುವಿಕೆ, ಜ್ಞಾನ, ಆಸಕ್ತಿ, ಸೌಂದರ್ಯ, ಇವುಗಳು, ಆಂತರಿಕ ಸಂಘಟನೆ, ಬಾಹ್ಯವಾದ ಪಾಲ್ಗೊಳ್ಳುವಿಕೆಯಿಂದ ಪ್ರೇರೇಪಿತಗೊಳ್ಳುವ ಮೌಲ್ಯಗಳು ಎನ್ನಬಹುದು. ಇವುಗಳ ಆಚರಣೆಯಲ್ಲಿ ಕಂಡುಬರುವ ಸ್ಪರ್ಧೆ ಘರ್ಷಣೆಗಳಿಂದ ಪೂರ್ಣ ಪ್ರಮಾಣದಲ್ಲಿ ಮಾನವನು ತನ್ನ ಅವಶ್ಯಕತೆಗಳನ್ನು ಸಾಧಿಸಲಾರ. ಆದುದರಿಂದ ಈ ಎಲ್ಲ ಮೌಲ್ಯಗಳಲ್ಲಿ ಒಂದು ರೀತಿಯ ಒಡಂಬಡಿಕೆ ಉಂಟಾಗಬೇಕಾಗಿದೆ.

ಭೂಮಿಯಲ್ಲಿನ ಜಾಗ ಮತ್ತು ಸಂಪನ್ಮೂಲಗಳು ಖಚಿತವಾಗಿಯೂ ಸೀಮಿತವಾದುವು. ಅವುಗಳಲ್ಲಿ ಕೆಲವನ್ನು ಆಹಾರ, ಶಕ್ತಿ, ಇವುಗಳ ಉತ್ಪಾದನೆಗೆ ಮೀಸಲಿಡುವುದು ಅನಿವಾರ್ಯ. ಆದರೆ ಇದೇ

ಜೀವನದ ಪರಮಗುರಿಯಲ್ಲವೆಂಬುದನ್ನು ಮರೆಯಬಾರದು. ತನ್ನ ಸಂಸ್ಕೃತಿ, ಪರಂಪರೆ, ಕಾಡುಪ್ರಾಣಿಗಳ ರಕ್ಷಣೆ, ಮನರಂಜನೆ ಮುಂತಾದ ಅಂಶಗಳಿಗೂ ಪ್ರಾಮುಖ್ಯತೆ ನೀಡಬೇಕಾಗಿದೆ. ಎಂದರೆ ಕೆಲವು ಉಪಯೋಗಗಳ ಮೇಲೆ ನಿಶ್ಚಿತವಾದ ಮಿತಿ ಹೇರಬೇಕಾಗುತ್ತದೆ. ಆದರೆ ಇದು ಸಾಧ್ಯವೇ ಎಂಬ ಪ್ರಶ್ನೆ ನಮ್ಮ ಮುಂದಿದೆ. ಇದನ್ನು ಸಾಧ್ಯವಾಗಿಸದಿದ್ದ ಪಕ್ಷಕ್ಕೆ ಭವಿಷ್ಯದಲ್ಲಿ ಪತನ, ನಾಶ, ಖಂಡಿತವಾಗಿಯೂ ಉಂಟಾಗುತ್ತದೆ.

ಸಂಪನ್ಮೂಲಗಳ ಬಳಕೆಯ ಮೇಲೆ ಜನಸಂಖ್ಯೆ ಬೆಳವಣಿಗೆಯು ತೀವ್ರವಾದ ಸಮಸ್ಯೆಗಳನ್ನುಂಟು ಮಾಡುತ್ತದೆ. ಜನಸಂಖ್ಯೆಯ ವಿತರಣೆಯಲ್ಲಾಗಿರುವ ಅಪಾರ ವ್ಯತ್ಯಾಸದಂತೆ, ಸಂಪನ್ಮೂಲಗಳ ಬಳಕೆಯಲ್ಲಿಯೂ ಅಗಾಧ ವ್ಯತ್ಯಾಸಗಳು ನಿರ್ಮಾಣವಾಗುತ್ತಿವೆ. ಆಹಾರದಂಥಹ ಅವಶ್ಯಕ ವಸ್ತುಗಳಲ್ಲಿಯೂ ಈ ವ್ಯತ್ಯಾಸಗಳನ್ನು ಗುರುತಿಸಬಹುದು. ಐರ್ಲೆಂಡ್, ಅಮೆರಿಕಾ ಮುಂತಾದ ರಾಷ್ಟ್ರಗಳಲ್ಲಿ ದಿನ ಒಂದಕ್ಕೆ ೩.೫೦೦ ಕ್ಯಾಲೊರಿ ಆಹಾರವನ್ನು ವ್ಯಕ್ತಿಯೊಬ್ಬ ಬಳಸಿದರೆ, ಭಾರತದಂತಹ ರಾಷ್ಟ್ರದಲ್ಲಿ ಅದು ಕೇವಲ ೧೯೬೦ ಕ್ಯಾಲೋರಿಗಳಷ್ಟು ಪ್ರಮಾಣದಲ್ಲಿರುತ್ತಿದೆ. ಹಿಂದುಳಿದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಈ ಸರಾಸರಿ ಪ್ರಮಾಣಕ್ಕಿಂತ ಕಡಿಮೆ ಆಹಾರವನ್ನು ಸುಮಾರು ಶೇಕಡ ೫೦ಕ್ಕೂ ಹೆಚ್ಚು ಜನ ಪಡೆಯುತ್ತಿದ್ದಾರೆ. ಇನ್ನುಳಿದ ಸಂಪನ್ಮೂಲಗಳಲ್ಲಿ ಈ ಕೊರತೆ ಮತ್ತಷ್ಟು ಅಧಿಕಗೊಂಡಿದೆ ಎಂದು ಹೇಳಬಹುದು. ಅಮೆರಿಕವು, ಭಾರಕ್ಕಿಂತ, ೮೦ರಷ್ಟು ತಲಾ ಅಧಿಕ ಕಬ್ಬಿಣದ ಉತ್ಪನ್ನಗಳನ್ನು ಬಳಸುತ್ತದೆ. ಶಕ್ತಿಯ ಬಳಕೆಯಲ್ಲಿ ಅದು ಗ್ರೇಟ್ ಬ್ರಿಟನ್ನಿನ ಎರಡುಪಟ್ಟು ಭಾರತದ ೨೦ ಪಟ್ಟು ಹೆಚ್ಚು ಉಪಯೋಗವನ್ನು ಮಾಡುತ್ತಿದೆ. ಜಗತ್ತಿನ ಮೂರನೇ ಒಂದರಷ್ಟು ಪೆಟ್ರೋಲಿಯಂ ಉತ್ಪನ್ನಗಳನ್ನು ಅಮೆರಿಕಾ, ತನ್ನ ಅಂತರಿಕ್ಷ ಉಡ್ಡಾಣಗಳಿಗೆ ಬಳಸುತ್ತಿದೆ. ೧/೩ ಭಾಗ ಸಾರಿಗೆ, ಮತ್ತು ಅಂತರಿಕ ಶಕ್ತಿ ಉತ್ಪನ್ನ ಯಂತ್ರಗಳಿಗೆ ಬಳಸಲ್ಪಡುತ್ತದೆ. ಇನ್ನುಳಿದ ೧/೩ ಭಾಗ ಜಗತ್ತಿನ ನಾಗರಿಕ ರಾಷ್ಟ್ರಗಳಲ್ಲಿ ಬಳಸಲ್ಪಡುತ್ತಿದೆ.

ಈ ಅಗಾಧ ವ್ಯತ್ಯಾಸಗಳು ಜಗತ್ತಿನ ಹಿಂದುಳಿದ ರಾಷ್ಟ್ರಗಳ ಜನರಲ್ಲಿ ಅಸಮಾಧಾನವನ್ನು ಸೃಷ್ಟಿಸುತ್ತಿವೆ. ಈ ಅಸಮಾಧಾನ ಮತ್ತು ವ್ಯತ್ಯಾಸವನ್ನು ನಿವಾರಿಸಲು ಜಗತ್ತಿನ ಮುಂದುವರಿದ ರಾಷ್ಟ್ರಗಳು ಈಗ ನೀಡುತ್ತಿರುವ ಸಹಾಯದ ಹತ್ತರಷ್ಟು ಗಾತ್ರದ ಹೆಚ್ಚಿನ ಸಹಾಯ, ಸಹಕಾರ ನೀಡಬೇಕಾಗಿದೆ. ಮುಂದುವರಿದ ರಾಷ್ಟ್ರಗಳ ಜನರು ಇನ್ನುಳಿದ ದೇಶಗಳಲ್ಲಿ ಸಾಮಾನ್ಯ ಮಟ್ಟದ ಜೀವನ ನಿರ್ಮಿಸುವುದಕ್ಕಾಗಿ ತಮ್ಮ ವೈಭವದ ಜೀವನದಲ್ಲಿ ಸ್ವಲ್ಪ ಮಟ್ಟಿನ ತ್ಯಾಗಮಾಡಬೇಕಾಗಿದೆ. ಜೊತೆಗೆ ಶ್ರಮದ ದುಡಿಮೆ, ಉನ್ನತ ಜೀವನಾದರ್ಶಗಳು ವ್ಯವಸ್ಥಿತ ಜನನ ನಿಯಂತ್ರಣ ಮಾರ್ಗಗಳು, ಹಿಂದುಳಿದ ರಾಷ್ಟ್ರಗಳ ಜನರ ಜೀವನ ಮಟ್ಟವನ್ನು ಸುಧಾರಿಸಬಲ್ಲವು.

ಎರಡನೇ ಮಹಾಯುದ್ಧಾನಂತರ ಜಗತ್ತಿನ ಅತ್ಯಂತ ಜನನಿಬಿಡ ರಾಷ್ಟ್ರಗಳಾದ ಜಪಾನ್ ಮತ್ತು ಭಾರತ ಜನನ ನಿಯಂತ್ರಣದ ಬಗೆಗೆ ತಮ್ಮವೇ ಆದ ಖಚಿತ ನೀತಿಗಳನ್ನು ನಿರೂಪಿಸಿ ಆಚರಣೆಗೆ ತರಲು ಯತ್ನಿಸುತ್ತಿವೆ ಎಂದು ಹೇಳಬಹುದು.

ಯಂತ್ರಶಾಸ್ತ್ರದಲ್ಲಿ ಅತ್ಯಂತ ಮುಂದಿರುವ ಜಪಾನ್, ಅಧಿಕ ಜನಸಂಖ್ಯೆಯನ್ನು ಹೊಂದಿದೆ. ಗ್ರೇಟ್ ಬ್ರಿಟನ್‌ಗಿಂತ ೧½ ಪಟ್ಟು ಹೆಚ್ಚು ವಿಸ್ತಾರಉಳ್ಳ ಅದು ೯೦ ಮಿಲಿಯನ್‌ಗೂ ಹೆಚ್ಚು ಜನ ಸಂಖ್ಯೆಯನ್ನು ಹೊಂದಿದೆ. ಯಾವ ಬೆಳೆಯನ್ನೂ ಬೆಳೆಯಲು ಸಾಧ್ಯವಿಲ್ಲದ ಪರ್ವತ ಪ್ರದೇಶಗಳು ಜಪಾನನ್ನು ಆಕ್ರಮಿಸಿವೆ. ಇದರಿಂದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯು ತಲಾ ೧/೭ ಎಕರೆಯಷ್ಟಿದೆ ಎಂದು ಅಂದಾಜು ಮಾಡಲಾಗಿದೆ. ಶೇಕಡ ಒಂದರಷ್ಟು ಪ್ರಮಾಣದಲ್ಲಿ ಏರುತ್ತಿರುವ ಜನಸಂಖ್ಯೆಯಿಂದ ಇನ್ನು ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ೧೦೦ ಮಿಲಿಯನ್ ಮುಟ್ಟುವ ಸಾಧ್ಯತೆ ಇದೆ. ಜಪಾನ್‌ನಲ್ಲಿ ತಲಾ ಸರಾಸರಿ ಆಹಾರ ಸೇವನೆಯ ಪ್ರಮಾಣ ೨೦೦೦ ಕ್ಯಾಲೋರಿಗಳಷ್ಟಿದೆ. ಯುದ್ಧವು ಅವರ ಆಶೋತ್ತರಗಳನ್ನು ಮಣ್ಣುಗೂಡಿಸಿತು. ಅಮೆರಿಕೆಯ ಉತ್ತಮ ನೆರವಿನಿಂದ ಜಪಾನ್‌ನಲ್ಲಿ ಯಂತ್ರಗಳು ಚಲಿಸುತ್ತಿವೆ ಹಾಗೂ ಜನರು ಆಹಾರ ಸೇವಿಸುತ್ತಿದ್ದಾರೆ. **P.E.P.** ವರದಿಯ ಪ್ರಕಾರ "ಜಪಾನ್ ನಿಶ್ಚಯವಾಗಿಯೂ ಜಗತ್ತಿನ ಜನನಿಬಿಡರಾಷ್ಟ್ರ."

ಭಾರತದಲ್ಲಿ ಜನಸಂಖ್ಯಾ ಸಮಸ್ಯೆ : ಭಾರತದಲ್ಲಿ ಜನಸಂಖ್ಯಾ ಸಮಸ್ಯೆ ವಿಭಿನ್ನವಾದುದು. ಜಪಾನ್‌ನಷ್ಟು ಪರಿಸ್ಥಿತಿ ನಿರಾಶಾದಾಯಕವಾಗಿಲ್ಲ. ನಿಶ್ಚಿತಕ್ರಮಗಳನ್ನು ಕೈಗೊಳ್ಳದಿದ್ದರೆ, ಇನ್ನು ಕೆಲವೇ ವರ್ಷಗಳಲ್ಲಿ ಖಂಡಿತವಾಗಿ ಪರಿಸ್ಥಿತಿ ಹದಗೆಡುತ್ತದೆ. ಭಾರತದಲ್ಲಿ ಉತ್ಪಾದನೆಗೆ ಸಿದ್ಧವಿರುವ ವಿಪುಲ ಸಂಪನ್ಮೂಲಗಳಿವೆ. ಇವುಗಳ ಸಂಪೂರ್ಣ ಬಳಕೆ ಮತ್ತು ಜನಸಂಖ್ಯಾ ಹೆಚ್ಚಳದ ನಡುವೆ ನಿಶ್ಚಿತವಾದ ಹೊಂದಾಣಿಕೆಯಾಗಬೇಕಾಗಿದೆ. ಇದು ಅಸಾಧ್ಯವಾದರೆ ಜನಸಂಖ್ಯಾ ಒತ್ತಡ ಅತಿ ಶೀಘ್ರವಾಗಿ ಏರ್ಪಡುವುದು.

ಆಧುನಿಕ ಸಮಾಜದ ಅವಶ್ಯಕತೆಗಳನ್ನು ಪೂರೈಸುವಷ್ಟರ ಮಟ್ಟಿಗೆ, ಭಾರತದಲ್ಲಿ ವ್ಯವಸಾಯ ಮುಂದುವರೆದಿಲ್ಲ. ಪರಂಪರೆಯಿಂದ ಉಂಟಾದ ಮೌಢ್ಯ. ಅನಕ್ಷರತೆ. ಅಜ್ಞಾನ, ಇವುಗಳ ಜೊತೆಗೆ ಗೋಷ್ಠಾಜೆ, ಜಾತಿ ಪದ್ಧತಿ, ಮುಂತಾದುವುಗಳು ಪ್ರಗತಿಯ ಹಾದಿಯಲ್ಲಿ ಸಾಕಷ್ಟು ಅಡ್ಡಿ ಆತಂಕಗಳನ್ನು ನಿರ್ಮಿಸುತ್ತಿವೆ. ಇವೆಲ್ಲಕ್ಕೂ ಕಳಶವಿಟ್ಟಂತೆ ಪ್ರತಿವರ್ಷ ಹೆಚ್ಚುತ್ತಿರುವ ಐದು ಮಿಲಿಯನ್ ಜನರು ಅಗಾಧ ಸಮಸ್ಯೆಗಳನ್ನು ನಿರ್ಮಿಸುತ್ತಿದ್ದಾರೆ. ಭಾರತವು ಜನಸಂಖ್ಯಾ ಚಕ್ರದ (Population Cycle) ಪ್ರಥಮ ಹಂತದಲ್ಲಿದೆ. ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ೧೦೦೦ಕ್ಕೆ ೪೦ ಹುಟ್ಟಿನ ಪ್ರಮಾಣಕ್ಕೆ ಏರಿದೆ ಎಂದು ತಿಳಿದು ಬಂದಿದೆ. ಸಾವಿನ ಪ್ರಮಾಣದಲ್ಲಿ ಗಣನೀಯ ಇಳಿತ (೧೦೦೦ಕ್ಕೆ ೨೭) ಕಂಡುಬಂದಿದೆ. ಒಂದು ಆರೋಗ್ಯ ವರದಿಯ ಪ್ರಕಾರ ವರ್ಷಕ್ಕೆ ಮೂರು ಮಿಲಿಯನ್ ಜೀವಗಳನ್ನು ಉಳಿಸಲಾಗುತ್ತಿದೆ. ಸಂತಾನ ನಿಯಂತ್ರಣಕ್ಕೆ ಯಾವ ಸಮರ್ಥ ಕ್ರಮಗಳನ್ನೂ ಕೈಗೊಳ್ಳದಿದ್ದರೆ ಭಾರತದಲ್ಲಿ ವರ್ಷಂಪ್ರತಿ ಜನಸಂಖ್ಯಾ ಏರಿಕೆಯು ಲಂಡನ್ ಮಹಾನಗರದ ಒಟ್ಟು ಜನಸಂಖ್ಯೆ(೮ ಮಿಲಿಯನ್)ಯಷ್ಟಾಗುತ್ತದೆ.

ಭಾರತದ ವಿಭಜನೆಯ ನಂತರ ಗಡಿಪ್ರದೇಶಗಳಾದ ಪಂಜಾಬ್, ಬಂಗಾಳ ಇವುಗಳಲ್ಲಿ ವಲಸೆಯಿಂದ ಉಂಟಾದ ಜನಸಾಂದ್ರತೆಯ ಒತ್ತಡ ಆ ಪ್ರದೇಶಗಳ ಸಂಪನ್ಮೂಲಗಳ ಮೇಲೆ ನೇರವಾಗಿ ಪರಿಣಾಮ ಬೀರಿತೆಂದು ಹೇಳಬಹುದು. ಸ್ವಾತಂತ್ರ್ಯಾನಂತರ ಭಾರತದ ಸರ್ಕಾರವು, ಜನ ಸಂವರ್ಧನೆಯ ಅಗಾಧ ಬೆಳವಣಿಗೆಯನ್ನು ಗುರುತಿಸಿ, ಸಮಾಜದ ಪ್ರಗತಿಗೆ ಹೇಗೆ ಅಡ್ಡಿ ಆತಂಕಗಳನ್ನು ನಿರ್ಮಿಸುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡಿದೆ. ೧೯೫೧ರ ಜನಗಣತಿಯ ಅಂಕಿ ಅಂಶಗಳು ಜನಸಂಖ್ಯಾ ಬೆಳವಣಿಗೆಯ ಬಗೆಗೆ ತೀವ್ರವಾದ ಎಚ್ಚರಿಕೆ ನೀಡಿತು. ಹುಟ್ಟುವಿಕೆಯ ಪ್ರಮಾಣದಲ್ಲಿ ಶೇಕಡ ೫ರಷ್ಟು ಕಡಿತ. ವರ್ಷ ಒಂದಕ್ಕೆ ೨೪ ಮಿಲಿಯನ್ ಟನ್‌ಗಳಷ್ಟು ಹೆಚ್ಚಿನ ಆಹಾರ ಉತ್ಪಾದನೆ ಜೀವಿಯ ನೋವನ್ನು ತಗ್ಗಿಸಿ ಸುಖ ಸಂತೋಷಗಳನ್ನು ತರಬಲ್ಲದು.

ಕೆಲವು ಸಮಸ್ಯೆಗಳು :

ಜನನ ನಿಯಂತ್ರಣವನ್ನು ಸಾರ್ವಜನಿಕ ಆರೋಗ್ಯ ಇಲಾಖೆಗೆ ಒಳಪಡಿಸಲಾಗಿದೆ. ಈ ಇಲಾಖೆ ಜನನ ನಿಯಂತ್ರಣ ಸಂಶೋಧನೆ ಬಗೆಗೆ ಅತ್ಯುತ್ತಮ ಕೆಲಸವನ್ನು ಮಾಡುತ್ತಿದೆ. ಜನಸಂಖ್ಯಾ ಸಮಸ್ಯೆಗಳಲ್ಲಿ ಮುಖ್ಯವೆನಿಸಿದ ಜನನ ಮತ್ತು ಮರಣಗಳ ಬಗೆಗೆ ಅಪಾರ ಸಂಶೋಧನೆ ನಡೆಯುತ್ತಿದೆ. ಮಕ್ಕಳ ಕಲ್ಯಾಣ ಕುಟುಂಬ ಯೋಜನೆ ಮುಂತಾದ ವಿಷಯಗಳ ಬಗೆಗೆ ನಿಶ್ಚಿತ ತರಬೇತಿ ನೀಡಲು ಅನೇಕ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಜನನ ನಿಯಂತ್ರಣದ ಬಗೆಗೆ ಸಾರ್ವಜನಿಕ ಅಭಿಪ್ರಾಯ ರೂಪಿಸಲು, ಸ್ವಯಮಾಡಳಿತ ಸಂಸ್ಥೆಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ. ಭಾರತದಂತಹ ಬೃಹತ್ ರಾಷ್ಟ್ರದಲ್ಲಿ ಜನನ ನಿಯಂತ್ರಣ, ರಾಷ್ಟ್ರೀಯ ನೀತಿಯಾಗಿರುವುದು ಶ್ಲಾಘನೀಯ ಅಂಶವಾಗಿದೆ. ಆದರೆ ಈ ಕಾರ್ಯಕ್ರಮಗಳನ್ನು ವೀಕ್ಷಿಸುವ ಆಗಂತುಕ ವೀಕ್ಷಕರಿಗೆ ಇದು ಅರೆಮನಸ್ಸಿನಿಂದ ಕೈಗೊಂಡ ಕಾರ್ಯಕ್ರಮದಂತೆ ಭಾಸವಾಗುವುದು.

ಸಾವಿರಾರು ನಂಬಿಕೆಗಳು, ಹಲವಾರು ಧರ್ಮಗಳು, ಕುಟುಂಬಯೋಜನೆಯ ಆಚರಣೆಯಲ್ಲಿ ಅಡ್ಡಿ-ಆತಂಕಗಳನ್ನು ನಿರ್ಮಿಸಿವೆ. ಕೃತಕ ಜನನ ನಿಯಂತ್ರಣ ವಿಧಾನಗಳಿಗೆ ಅನೇಕ ಮತ ಧರ್ಮಗಳು ವಿರೋಧ ವ್ಯಕ್ತಪಡಿಸಿದುದರಿಂದ ಸ್ವಾಭಾವಿಕ ಜನನ ನಿಯಂತ್ರಣ ನಿಧಾನವಾಗಿ "ಕ್ಷೇಮಕಾಲ"

(Safe period) ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸಲಾಯಿತು ಆದರೆ ಈ ವಿಧಾನವನ್ನು ಎಲ್ಲ ವ್ಯಕ್ತಿಗಳಿಗೂ ಅನ್ವಯಿಸಲು ಸಾಧ್ಯವಾಗುವುದಿಲ್ಲ. "ಕ್ಷೇಮಕಾಲ" ವ್ಯಕ್ತಿಗಳಿಂದ ವ್ಯಕ್ತಿಗಳಿಗೆ ಬದಲಾಗುತ್ತಿರುತ್ತದೆ. ಈ ವಿಧಾನವನ್ನು ಅನುಸರಿಸಲು ನಿರಂತರ ಎಚ್ಚರಿಕೆ ಅಗತ್ಯವಾಗಿರುವುದರಿಂದ ಹೆಚ್ಚು ತೊಡಕೆನಿಸಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅನುಸರಿಸುತ್ತಿರುವ ಅನೇಕ ಪದ್ಧತಿಗಳನ್ನು ಭಾರತಕ್ಕೆ ಅನ್ವಯಿಸಲು ಸಾಧ್ಯವಾಗುತ್ತಿಲ್ಲ. ಆರೋಗ್ಯದ ಅನುಕೂಲಗಳಾಗಲೀ, ಏಕಾಂತವಾಗಿರಲು ವಾಸ ಗೃಹಗಳಾಗಲೀ. ಭಾರತದ ಹಳ್ಳಿಗಳಲ್ಲಿ ಇಲ್ಲದಿರುವುದರಿಂದ ಕುಟುಂಬ ಯೋಜನಾ ಪದ್ಧತಿಗಳು ವಿಫಲ ಗೊಂಡಿವೆ.

"ಮಾತ್ರೆ ವಿಧಾನ" (Pill method)ವು ಕಡಿಮೆ ವೆಚ್ಚದ ಆದರ್ಶ ಕುಟುಂಬಯೋಜನಾ ಸಾಧನವಾಗಿದೆ. ಡಿಂಬಾಣುಗಳು ಫಲಿತವಾಗದಂತೆ ಮಾಡುವ ಈ ಮಾತ್ರೆಗಳನ್ನು ಸೇವಿಸುವುದರಿಂದ ಅಹಿತಕರ ಜನನಗಳನ್ನು ತಡೆಗಟ್ಟಬಹುದು. ಆದರೆ ದೇಹದ ಸಾಮಾನ್ಯ ಆರೋಗ್ಯದ ಮೇಲೆ ಪ್ರತಿ ಕ್ರಿಯೆ ಬೀರದ, ಸಂಪೂರ್ಣ ಗರ್ಭನಿರೋಧ ಸಾಧಿಸುವ, ಯಾವ ಮಾತ್ರೆಗಳನ್ನೂ ಇದುವರೆವಿಗೆ ಸಂಶೋಧಿಸಿಲ್ಲದಿರುವುದು ದುರದೃಷ್ಟಕರ. ಆಟಂಬಾಂಬ್ ಸಂಶೋಧನೆಗೆ ನಡೆಸಿದ ಅತ್ಯುತ್ತಮ ಮಟ್ಟದ ಸಂಶೋಧನೆಯ ರೀತಿಯಲ್ಲಿ ಇಂದು ಜನನ ನಿಯಂತ್ರಣ ಮಾರ್ಗಗಳನ್ನು ಹುಡುಕಬೇಕಾಗಿದೆ. ಇದನ್ನು ಸಾಧಿಸಿದಲ್ಲಿ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಜನಸಂಖ್ಯಾ ಸಮಸ್ಯೆಯನ್ನು ಬಗೆ ಹರಿಸಲು ಸಾಧ್ಯ.

ನಿರಂತರವಾದ ಹಸಿವು. ಪೌಷ್ಟಿಕ ಆಹಾರಗಳ ಕೊರತೆ. ಭೀಕರ ಕ್ಷಾಮ, ಭಾರತ ಸರ್ಕಾರವನ್ನು ಜನಸಂಖ್ಯೆಯ ಬೆಳವಣಿಗೆಯನ್ನು ತಡೆಗಟ್ಟುವ ನಿಶ್ಚಿತ ಮಾರ್ಗಗಳನ್ನು ಹುಡುಕುವಂತೆ ಪ್ರೇರೇಪಿಸಿತು. ೧೯೬೬ರ ಮಹಾಕ್ಷಾಮವು ಭಾರತದ ಜನತೆಯನ್ನು ಅಲುಗಾಡಿಸಿತು. ಹೊರದೇಶಗಳಿಂದ ಆಮದಾದ ಅಪಾರ ಪ್ರಮಾಣದ ಗೋಧಿ ಮತ್ತಿತರ ಆಹಾರ ಪದಾರ್ಥಗಳು ಲಕ್ಷಾಂತರ ಜೀವಗಳನ್ನುಳಿಸಿದವು. ಆಧುನಿಕ ಸರಕು ಸಾಗಾಣಿಕೆಯಿಂದ ಈ ಸಮಸ್ಯೆ ತತ್ಕಾಲಕ್ಕೆ ಪರಿಹಾರವಾದರೂ. ನಿರಂತರವಾಗಿ ಸಂಭವಿಸುತ್ತಿರುವ ಕ್ಷಾಮದ ಭೀಕರತೆಯಿಂದ ಪಾರಾಗಲು, ಜನಸಂಖ್ಯಾ ಬೆಳವಣಿಗೆಯಲ್ಲಿನ ಸಮ ತೋಲನವು ಶಾಶ್ವತ ಪರಿಹಾರ ಒದಗಿಸಬಲ್ಲದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಹಾರದ ಉತ್ಪತ್ತಿಯನ್ನು ಗರಿಷ್ಠಮಟ್ಟಕ್ಕೇರಿಸಲು ಸಾಹಸಪೂರ್ಣವಾದ ಪ್ರಯತ್ನಗಳನ್ನು ಕೈಗೊಂಡಿವು. ಇದರ ಫಲವಾಗಿ ಭಾರತವು ಇತ್ತೀಚಿನ ವರ್ಷಗಳಲ್ಲಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದೆ. ಉತ್ತಮ ಹವಾಗುಣವೂ ಇದಕ್ಕೆ ಬಹುಮಟ್ಟಿಗೆ ಕಾರಣವೆನ್ನಬಹುದು. ಹವಾಗುಣ ಪರಿಸ್ಥಿತಿಯು ಯಾವಾಗಲೂ ಹೀಗೆಯೇ ಮುಂದುವರಿಯುತ್ತದೆಂದು ಹೇಳಲು ಸಾಧ್ಯವಿಲ್ಲ. ಅನಿರೀಕ್ಷಿತ ಕಾರಣ ಗಳು ಆಹಾರದ ಉತ್ಪಾದನೆಯ ಮೇಲೆ ಪರಿಣಾಮ ಬೀರಬಲ್ಲವು. ಇದರಿಂದ ಉತ್ಪಾದನೆಯಲ್ಲಿ ಕೊರತೆ ತಲೆದೋರುತ್ತದೆ. ಹೀಗಾದಾಗ ವರ್ಷ ಒಂದಕ್ಕೆ ೫ ಮಿಲಿಯನ್‌ಗೂ ಹೆಚ್ಚು ಪ್ರಮಾಣದಲ್ಲಿ ಏರುತ್ತಿರುವ ಜನಸಂಖ್ಯೆಯನ್ನನುಸರಿಸಿ ಆಹಾರದ ಉತ್ಪಾದನೆ ಹೆಚ್ಚಾಗಲು ಸಾಧ್ಯವಿಲ್ಲ.

ಜೀವನದ ಮಟ್ಟ ಹಾಗೂ ಜನಸಂಖ್ಯೆ :

ಜೀವನಮಟ್ಟವನ್ನು ಏರಿಸಲು ಸರ್ಕಾರ ಕೈಗಾರಿಕೀಕರಣದ ಮೂಲಕ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ತೀವ್ರ ಕೈಗಾರಿಕೀಕರಣ, ಗೃಹ ಕೈಗಾರಿಕೆಗಳ ಅಭಿವೃದ್ಧಿ, ಇವುಗಳು ಹೆಚ್ಚಿನ ಉದ್ಯೋಗ ಕಲ್ಪಿಸಬಲ್ಲವು. ಆದರೆ ಹೆಚ್ಚುತ್ತಿರುವ ಜನಸಂಖ್ಯೆಯಲ್ಲಿನ ವ್ಯಕ್ತಿಗಳನ್ನು ಉದ್ಯೋಗದಲ್ಲಿ ತೊಡಗಿಸು ವುದು ಅಸಾಧ್ಯವೇ ಸರಿ. ಕೈಗಾರಿಕೀಕರಣವು ಜನಸಂಖ್ಯಾ ಸಮಸ್ಯೆಯನ್ನು ಪರಿಹರಿಸಲು ಒಂದು ಉತ್ತಮ ಮಾರ್ಗವೆನಿಸಿದರೂ. ಅದೊಂದೇ ಮಾರ್ಗವಲ್ಲ ಎಂಬುದನ್ನು ನೆನಪಿಡಬೇಕಾಗಿದೆ. ಜನನ ನಿಯಂತ್ರಣವು ಸಮಸ್ಯೆಗಳನ್ನು ಪರಿಹರಿಸಲು ನಿಶ್ಚಿತ ಮಾರ್ಗ ಎಂಬುದು ಖಚಿತವಾಗಿದೆ. ಜನನ ನಿಯಂತ್ರಣ ವಿಧಾನಗಳನ್ನು ಸೃಷ್ಟಿಸುವ ಸಂಶೋಧನೆಗಳಿಗೆ ಒದಗಿಸುವ ಹಣ, ಸೇವೆ ಮುಂತಾದುವುಗಳ ತೃಪ್ತಿಕರ ಉಪಯೋಗ ಸಮಸ್ಯೆಯನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.

ಪ್ರತ್ಯೇಕ ಇಲಾಖೆಯ ಅವಶ್ಯಕತೆ :

ಈ ಉದ್ದೇಶಗಳನ್ನು ಸಾಧಿಸಲು ಭಾರತಲ್ಲಿಂದು ಜನಸಂಖ್ಯಾ ಮಂತ್ರಿಶಾಖೆಯ ಅವಶ್ಯಕತೆ ಇದೆ. ಸಾರ್ವಜನಿಕ ಆರೋಗ್ಯ ಇಲಾಖೆಯೊಂದಿಗೆ, ಜನಸಂಖ್ಯಾ ನಿಯಂತ್ರಣ, ಪೌಷ್ಠಿಕ ಆಹಾರ ವಿತರಣೆ, ಕುಟುಂಬಯೋಜನೆ ಮುಂತಾದ ಕಾರ್ಯಕ್ರಮಗಳನ್ನು ಜೋಡಿಸಿರುವುದರಿಂದ ಅನೇಕ ವಿಷಮ ಪರಿಸ್ಥಿತಿಗಳು ನಿರ್ಮಾಣಗೊಂಡಿವೆ. ಸಾರ್ವಜನಿಕ ಆರೋಗ್ಯ ಇಲಾಖೆ ಈ ಕಾರ್ಯಕ್ರಮಗಳನ್ನು ತನ್ನ ಉಪ ಚಟುವಟಿಕೆಗಳನ್ನಾಗಿಸಿಕೊಂಡಿರುವುದರಿಂದ ಪ್ರಗತಿ ಕುಂಠಿತಗೊಂಡಿದೆ ಎಂದು ಹೇಳಬಹುದು. ಕುಟುಂಬ ಯೋಜನೆ, ಜನನ ನಿಯಂತ್ರಣ ಮುಂತಾದುವುಗಳು ಜನಾರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಾದರೂ, ಅವುಗಳನ್ನನುಸರಿಸುವ ವಿಧಾನಕ್ಕೆ ಪ್ರತ್ಯೇಕ ದೃಷ್ಟಿಕೋನ ಹೊಂದಿರುವ ಇಲಾಖೆಯ ಅವಶ್ಯಕತೆ ಇದೆ. ಜನಸಂಖ್ಯೆಯ ನಿಯಂತ್ರಣವನ್ನು ಒಂದು ವಿಶಿಷ್ಟ ಸವಾಲನ್ನಾಗಿ ಎದುರಿಸುವ ಶಾಖೆಯು ಅಗತ್ಯವಾಗಿದೆ. ಆಧುನಿಕ ಭಾರತನಿರ್ಮಾಣಕಾರ್ಯದಲ್ಲಿ ಈ ಶಾಖೆ ಮಹತ್ವದ ಪಾತ್ರ ವಹಿಸಬೇಕಾಗಿದೆ. ವಿಶ್ವಬ್ಯಾಂಕ್ ಸಹಯೋಗದೊಂದಿಗೆ ಭಾರತದಲ್ಲಿ ನಿರ್ವಹಿಸಲಾಗುತ್ತಿರುವ "ಭಾರತ ಜನಸಂಖ್ಯಾ ಯೋಜನೆ" ಅನೇಕ ಉತ್ತಮ ಕಾರ್ಯಕ್ರಮಗಳನ್ನು ನಿರೂಪಿಸಿ ಆಚರಣೆಗೆ ತರುತ್ತಿದೆ. ಪೌಷ್ಠಿಕ ಆಹಾರ ಯೋಜನೆಯನ್ವಯ ಮಕ್ಕಳಿಗೆ, ಗರ್ಭಿಣಿಯರಿಗೆ, ಬಾಣಂತಿಯರಿಗೆ ಒದಗಿಸುತ್ತಿರುವ ಆಹಾರ ಪೂರೈಕೆ ಒಂದು ಶ್ಲಾಘನೀಯವಾದ ಕೆಲಸವಾಗಿದೆ.

ಜನಸಂಖ್ಯಾ ಬೆಳವಣಿಗೆ-ಸಂಪನ್ಮೂಲಗಳ ಬಳಕೆ :

ಜಗತ್ತಿನ ಜನಸಂಖ್ಯಾ ಬೆಳವಣಿಗೆ–ಸಂಪನ್ಮೂಲಗಳ ಬಳಕೆ ಇವುಗಳ ನಡುವಣ ವ್ಯವಸ್ಥಿತ ಹೊಂದಾಣಿಕೆಯನ್ನು ಸಾಧಿಸಬೇಕಾಗಿದೆ. ಸಂಪನ್ಮೂಲಗಳನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸಬಹುದು.

೧. ವ್ಯವಸಾಯಕ್ಕೆ ಸಂಬಂಧಿಸಿದ ಉತ್ಪನ್ನಗಳು :

ವ್ಯವಸಾಯಕ್ಕೆ ಸಂಬಂಧಿಸಿದ ಉತ್ಪನ್ನಗಳಲ್ಲಿ ಆಹಾರದ ಉತ್ಪಾದನೆ ಮುಖ್ಯವಾದುದಾದರೂ ಮರಮುಟ್ಟುಗಳು ಅತ್ಯಾವಶ್ಯಕಗಳಾಗಿರುವುದರಿಂದ ಅನೇಕ ಸಮಸ್ಯೆಗಳನ್ನು ನಿರ್ಮಿಸುತ್ತಿವೆ. ಇವುಗಳ ಉತ್ಪಾದನೆಗೆ ಹೆಚ್ಚು ಹೆಚ್ಚು ಭೂಮಿಯನ್ನು ಆಕ್ರಮಿಸಿಕೊಳ್ಳಬೇಕಾಗಿರುವುದರಿಂದ ಆಹಾರದ ಉತ್ಪಾದನೆಯ ಜೊತೆಯಲ್ಲಿ ನೇರ ಸ್ಪರ್ಧೆ ಹೂಡಿದೆ.

೨. ವ್ಯವಸಾಯೋತ್ಪನ್ನ ಉತ್ಪನ್ನಗಳು :

ವ್ಯವಸಾಯೇತರ ಉತ್ಪನ್ನಗಳಲ್ಲಿ ಖನಿಜಗಳು, ಅಸಾವಯವ ಕಚ್ಚಾವಸ್ತುಗಳು. ಒಂದು ಪಂಗಡದವುಗಳಾದರೆ ಶಕ್ತಿಯನ್ನು ಉತ್ಪಾದಿಸುವ ಶಕ್ತಿಮೂಲಗಳು ಇನ್ನೊಂದು ಪಂಗಡದವುಗಳಾಗಿರುತ್ತವೆ.

ಕ್ರಿ.ಶ. ೨೦೦೦ದ ವರೆಗೆ ಜಗತ್ತಿನ ಸಂಪನ್ಮೂಲಗಳನ್ನು ಈಗಿನ ಪ್ರಮಾಣದಲ್ಲಿಯೇ ಬಳಸಿದರೆ ಅವುಗಳು ಬರಿದಾಗುವ ಸಾಧ್ಯತೆಗಳಿವೆ. ಹೀಗಾಗಿ ಪ್ರಸಕ್ತ ಜನಸಂಖ್ಯಾ ಪರಿಸ್ಥಿತಿಯೇ, ಸಂಪನ್ಮೂಲಗಳನ್ನು ಬರಿದುಮಾಡುವ ಹಂತ ಮುಟ್ಟಿದೆ. ಜಾಗತಿಕ ಮಟ್ಟದಲ್ಲಿ ಶಕ್ತಿ ಖನಿಜಗಳು, ಮತ್ತು ಕಚ್ಚಾ ವಸ್ತುಗಳನ್ನು ಕೈಗಾರಿಕೆಗಳಿಗೆ ಭವಿಷ್ಯದ ದಿನಗಳಲ್ಲಿ ಪೂರೈಸಬಹುದಾದರೂ ಅವಶ್ಯಕ ಆಹಾರ ಸಾಮಗ್ರಿಗಳನ್ನು ಪೂರೈಸುವ ವಿಚಾರದಲ್ಲಿ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ. ಅಧಿಕಗೊಳ್ಳುತ್ತಿರುವ ಹೊಸ ಜೀವಿಗಳ ಜೊತೆಗೆ ಪೂರ್ಣ ಪ್ರಮಾಣದಲ್ಲಿ ಆಹಾರವನ್ನು ಸೇವಿಸಲು ಸಾಧ್ಯವಿಲ್ಲದ ಕೋಟ್ಯಾಂತರ ಜೀವಿಗಳ ಹಸಿವೆಯನ್ನು ಹಿಂಗಿಸುವುದಕ್ಕಾಗದ ಭಯಾನಕ ಪರಿಸ್ಥಿತಿಯುಂಟಾಗುವ ಸಾಧ್ಯತೆಗಳಿವೆ. ಜಾಗ್ರತಿಕ ಮಟ್ಟದಲ್ಲಿ ಪರಿಸ್ಥಿತಿ ಈ ಭೀಕರ ಮಟ್ಟ ಮುಟ್ಟಿದಾಗ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ಜನರ ಪರಿಸ್ಥಿತಿ ಊಹಿಸಲು ಸಾಧ್ಯವಿಲ್ಲದಷ್ಟು ಹದಗೆಡುವ ಸಾಧ್ಯತೆಗಳಿವೆ.

ಜಗತ್ತಿನ ವಿವಿಧ ದೇಶಗಳ ಉತ್ಪಾದನೆ, ಗ್ರಾಹಕತೆಯ ಪ್ರಮಾಣದಲ್ಲಿ ಅಗಾಧ ವ್ಯತ್ಯಾಸಗಳು

ಕಂಡುಬರುತ್ತಿವೆ. ಉತ್ಪಾದನೆ ಅಧಿಕಗೊಂಡ ಅನೇಕ ದೇಶಗಳು ಆ ವಸ್ತುಗಳನ್ನು ಅವಶ್ಯಕತೆ ಇರುವ ಇತರ ರಾಷ್ಟ್ರಗಳಲ್ಲಿ ತೊಡಗಿಸಲು ಅನೇಕ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗಿದೆ. ಇವು ಮುಖ್ಯವಾಗಿ ರಾಜಕೀಯ-ಆರ್ಥಿಕ ಸ್ವರೂಪದ್ದಾಗಿರುತ್ತದೆ. ಅಮೆರಿಕ ತನ್ನ P. L. ೪೮೦ರ ಮೂಲಕ, ಭಾರತಕ್ಕೆ ಒದಗಿಸಿದ, ಗೋಧಿ, ಎಣ್ಣೆ ಮುಂತಾದುವುಗಳು, ಭಾರತದಲ್ಲಿ ಹೊಸ ಸಮಸ್ಯೆಗಳನ್ನು ನಿರ್ಮಿಸಿತು. ಹೀಗಾಗಿ ನಿರ್ದಿಷ್ಟ ರಾಜಕೀಯ ಭೂಪ್ರದೇಶಗಳ ಪರಿಸ್ಥಿತಿಯನ್ನು ಅವಲೋಕಿಸಿದಾಗ ಭವಿಷ್ಯವು ಕಾರ್ಮೋಡಗಳಿಂದ ತುಂಬಿರುವುದು ಅರಿವಾಗುತ್ತದೆ.

ಎಣ್ಣೆ. ಮುಖ್ಯ ಖನಿಜಗಳು. ಮುದ್ರಣ ಕಾಗದ. ಮುಂತಾದ ವಸ್ತುಗಳ ಉತ್ಪಾದನೆಯನ್ನು ಗಣನೀಯ ಪ್ರಮಾಣದಲ್ಲಿ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಹೆಚ್ಚಿಸಿರುವುದರಿಂದ, ಇವುಗಳನ್ನು ಅತ್ಯಧಿಕವಾಗಿ ಬಳಸುತ್ತಿದ್ದ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ನಡುವೆ ಒಂದು ರೀತಿಯ ಸಮತೋಲನ ಉಂಟಾಗಿದೆ. ಆದರೆ ಆಹಾರ ಉತ್ಪಾದನೆಯ ವಿಷಯದಲ್ಲಿ ಈ ಸಮತೋಲನ ಉಂಟುಮಾಡಲು ಸಾಧ್ಯವಾಗಿಲ್ಲ. ಅಭಿವೃದ್ಧಿ ಹೊಂದಿದ ಈ ದೇಶಗಳಲ್ಲಿ ಜನಸಂಖ್ಯೆಯು ಸಾಮಾನ್ಯ ಜೀವನ ಮಟ್ಟ ಹೆಚ್ಚಿರುವುದರ ಜೊತೆಗೆ 'ಹೆಚ್ಚಾದ ಹುಟ್ಟಿನ ಪ್ರಮಾಣ' ವೂ ಸಹ ಪ್ರಭಾವ ಬೀರಿದೆ. ಈ ದೇಶಗಳು "ಅಭಿವೃದ್ಧಿ ಹೊಂದುತ್ತಿರುವ" ದೇಶಗಳಿಗೆ ರಫ್ತು ಮಾಡುವ ಆಹಾರಧಾನ್ಯಗಳ ಪ್ರಮಾಣ ಗಣನೀಯವಾಗಿ ಇಳಿಮುಖವಾಗುತ್ತಿದೆ ಎಂದು ಹೇಳಬಹುದು. ಉದಾ: ಅಮೆರಿಕದ ಗೋಧಿ. ಅರ್ಜೆಂಟೈನಾದ ಮಾಂಸಾಹಾರ.

ಒಟ್ಟಿನಲ್ಲಿ ಹೇಳುವುದಾದರೆ ಮಾನವನ ಪ್ರತಿಯೊಂದು ಪ್ರಯತ್ನವೂ, ಅವನ ಕಲ್ಯಾಣ ಸಾಧಿಸುವಲ್ಲಿ ನಿರ್ದೇಶಿತವಾಗಬೇಕಾಗಿದೆ. ಹೆಚ್ಚು ಆಹಾರ ಉತ್ಪಾದನೆ, ಉತ್ತಮ ವಿತರಣೆ, ಮುಂತಾದುವು ವ್ಯವಸ್ಥಿತವಾಗಿ ನಡೆಯಬೇಕಾಗಿದೆ. ಇರುವ ದೇಶದ ಜನರು ಇಲ್ಲದ ದೇಶದ ಜನಗಳಿಗೆ ಅವಶ್ಯಕ ಆಹಾರ ಕೊಡುವಂತೆ ಮಾಡುವುದು ಮುಂತಾದ ಕಾರ್ಯಕ್ರಮಗಳು ಅಧಿಕವಾಗಬೇಕಾಗಿವೆ. ಸಂತಾನ ನಿಯಂತ್ರಣ ವಿಧಾನಗಳು ಸಮಸ್ಯೆಯ ಅಗಾಧತೆಯನ್ನು ಪರಿಹರಿಸುವ ಮುಖ್ಯ ಮಾರ್ಗಗಳಾಗಿವೆ.

ಜನಸಂಖ್ಯಾ ಸಮಸ್ಯೆಯು ಇಂದು ಬಹಳಷ್ಟು ಭಯಾನಕರೂಪ ತಾಳಿದೆ. ಜನತೆಗೆ ಅವಶ್ಯಕವಾದ ಸೌಲಭ್ಯಗಳನ್ನು ಒದಗಿಸುವಲ್ಲಿ, ಸರ್ಕಾರದ ಸರ್ವಪ್ರಯತ್ನಗಳು ವಿಫಲಗೊಳ್ಳುತ್ತಿವೆ. ಈ ಕಾರಣದಿಂದ ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಮೂಲಕಾರಣವಾದ ಜನಸಂಖ್ಯಾ ಸ್ಫೋಟವನ್ನು ತಡೆಹಿಡಿಯುವುದು ಅವಶ್ಯಕ. ಜನಸಂಖ್ಯೆಯನ್ನು ತಡೆಹಿಡಿದು ಪ್ರತಿಯೊಂದು ಕುಟುಂಬದ ಮೂಲ ಅವಶ್ಯಕತೆಗಳನ್ನು ಪೂರೈಸುವ ಕಡೆಗೆ ನಾವು ಗಮನಹರಿಸಿದಲ್ಲಿ ಮುಂದಿನ ತಲೆಮಾರುಗಳ ಜೀವನ ಸಹನೀಯವೆನಿಸೀತು.

ಗ್ರಂಥ ಋಣ

1. Julian Huxley : *Population Analysis and Studies.*

2. ಜನಸಂಖ್ಯಾ ಸ್ಫೋಟನೆ—ಪಿ. ಕೆ. ಪ್ರಕಾಶರಾವ್—ಕನ್ನಡ ಪ್ರಭ ಪತ್ರಿಕೆ : ವಾರದ ವಿಭಾಗ, ದಿನಾಂಕ 11–2–79.

3. Asha, K Bendi: *Population Studies.*

4. Thomson: *Population Problems.*

೨೦ನೆಯ ಶತಮಾನದ ಆದಿಯ ವೇಳೆಗೆ ಪ್ರಪಂಚದ ಜನಸಂಖ್ಯೆಯ ಏರಿಕೆಯ ವೇಗ ತೀವ್ರತರವಾಗಿತ್ತು. ಎರಡು ಮಹಾ ಯುದ್ಧಗಳು, ಇವುಗಳ ನಡುವಣ ಕಾಲದಲ್ಲಿ ವಿಶ್ವದಲ್ಲೆಲ್ಲ ಹಬ್ಬಿದ ಇನ್‌ಫ್ಲೂಯೆಂಜ ವ್ಯಾಧಿ ಮತ್ತು ಆರ್ಥಿಕ ಮುಗ್ಗಟ್ಟು-ಇವು ಕೂಡ ಈ ಏರಿಕೆಯನ್ನು ತಡೆಗಟ್ಟಲಿಲ್ಲ: ೧೮೫೦ರ ಅನಂತರವಂತೂ, ಯಾವ ಅಡೆತಡೆಯೂ ಇಲ್ಲದೆ ಇದರ ವೇಗ ಇನ್ನೂ ವರ್ಧಿಸಿದೆ.

ಪ್ರಪಂಚದ ಜನಸಂಖ್ಯೆ ದ್ವಿಗುಣಗೊಳ್ಳಲು ಇನ್ನೂರು ವರ್ಷಗಳಾದುವು. ಅಂದರೆ ೧೬೫೦ರಲ್ಲಿ ಸುಮಾರು ೫೪.೫ ಕೋಟಿ ಇದ್ದ ಜನಸಂಖ್ಯೆ ೧೮೫೦ರ ವೇಳೆಗೆ ೧೧೭.೧ ಕೋಟಿ ಮುಟ್ಟಿತು ಎಂದು ಲೆಕ್ಕ ಹಾಕಲಾಗಿದೆ. ಮುಂದಿನ ಒಂದು ಶತಮಾನದಲ್ಲಿ (೧೮೫೦–೧೯೫೦) ಅದು ೨೫೧.೬ ಕೋಟಿಗೆ ಏರಿತು. ೨೦ನೆಯ ಶತಮಾನದ ಕೊನೆಯ ವೇಳೆಗೆ ಇದು ಸುಮಾರು ೬೫೦ ಕೋಟಿ ಮುಟ್ಟಬಹುದೆಂದು ವಿಶ್ವಸಂಸ್ಥೆಯ ಜನಸಂಖ್ಯಾ ಅಧ್ಯಯನ ಸಂಸ್ಥೆಯ ಒಂದು ಅಂದಾಜು. ಎಂದರೆ ೩೫ ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆ ಪುನಃ ದ್ವಿಗುಣ ಹೊಂದೀತೆಂಬುದು ಭೀತಿ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಪ್ರತಿ ಸಾವಿರಕ್ಕೆ ೧೫–೨೦ರ ವರೆಗೆ ಜನನ ದರ ಇದ್ದರೆ ಅಭಿವೃದ್ಧಿಶೀಲ ದೇಶಗಳಲ್ಲಿ, ಅದು ಪ್ರತಿ ಸಾವಿರಕ್ಕೆ ೩೦–೪೦ರ ವರೆಗೆ ಇದೆ. ಆದರೆ ಮರಣ ದರ ಎಲ್ಲ ದೇಶಗಳಲ್ಲೂ ಪ್ರತಿ ಸಾವಿರಕ್ಕೆ ಸುಮಾರು ೧೦–೧೫. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜನಸಂಖ್ಯೆ ವರ್ಷಂಪ್ರತಿ ಶೇಕಡಾ ೦.೫–೧ರಂತೆ ಬೆಳೆಯುತ್ತಿದ್ದರೆ, ಹಿಂದುಳಿದ ದೇಶಗಳಲ್ಲಿ ಶೇ. ೨–೩ ರಂತೆ ಬೆಳೆಯುತ್ತಿದೆ. ಶೇ. ೩ರಷ್ಟು ಬೆಳವಣಿಗೆಯಾದರೆ ಜನಸಂಖ್ಯೆ ೨೫ ವರ್ಷಗಳಲ್ಲಿ ಎರಡರಷ್ಟಾಗುತ್ತದೆ.

(ಕನ್ನಡ ವಿಶ್ವಕೋಶ ಸಂಪುಟ ಏಳರಲ್ಲಿ ಜನಸಂಖ್ಯೆಯ ಬೆಳವಣಿಗೆ ಕುರಿತ
ಶ್ರೀ ಎನ್. ಪ್ರಭುಸ್ವಾಮಿಯವರ ಲೇಖನ (ಪು. ೬೩೩)ದಿಂದ ಉದ್ಧೃತ)

ಸಂಗ್ರಹ : ಎಚ್. ಎಸ್. ಸುಜಾತಾ

ಎಂ. ಎಸ್. ಪುಟ್ಟಣ್ಣನವರ ಮತ್ತೆರಡು ಲೇಖನಗಳು

[ಎಂ. ಎಸ್. ಪುಟ್ಟಣ್ಣನವರು ಹೊಸಗನ್ನಡ ಸಾಹಿತ್ಯಕ್ಕಾಗಿ ದುಡಿದ ಹಿರಿಯ ಮಹನೀಯರಲ್ಲಿ ಒಬ್ಬರು. ಅವರು ಕಾದಂಬರಿ, ಜೀವನಚರಿತ್ರೆ, ಅನುವಾದ, ಸಂಶೋಧನೆ, ಬಾಲಸಾಹಿತ್ಯ ಮೊದಲಾದ ಪ್ರಕಾರಗಳಲ್ಲಿ ಹೆಸರು ಮಾಡಿದರು. ಜೊತೆಗೆ 'ಹಿತಬೋಧಿನಿ' ಎಂಬ ಮಾಸಪತ್ರಿಕೆಯನ್ನು ಕೆಲವುಕಾಲ ನಡೆಸಿದರು. 'ಹಿತಬೋಧಿನಿ'ಯಲ್ಲೂ ಇತರ ಹಲವು ಪತ್ರಿಕೆಗಳಲ್ಲೂ ಅನೇಕ ಬಿಡಿಲೇಖನಗಳನ್ನು ಬರೆದರು.

'ಹಿತಬೋಧಿನಿ'ಯಲ್ಲಿ ಪ್ರಕಟವಾದ, ಪುಟ್ಟಣ್ಣನವರ ಎರಡು ಲೇಖನಗಳನ್ನು ಇಲ್ಲಿ ಕೊಡಲಾಗಿದೆ. "ರೈಲ್ವೇ ಅಭಿವೃದ್ಧಿ" (ಸಂಪುಟ ೧, ಸಂಚಿಕೆ ೨, ೧೮೮೩) ಎಂಬ ಲೇಖನದಲ್ಲಿ ಪುಟ್ಟಣ್ಣನವರು ರೈಲು ಮಾರ್ಗಗಳ ವಿಸ್ತರಣೆಯನ್ನು ಕುರಿತು ಹೇಳಿದ್ದಾರೆ. 'ನಂಜನಗೂಡು ರೈಲ್ವೇ ರಸ್ತೆ' (ಸಂಪುಟ ೧, ಸಂಚಿಕೆ ೨, ೧೮೮೩) ಎಂಬ ಲೇಖನದಲ್ಲಿ ನಂಜನಗೂಡಿಗೆ ರೈಲುಮಾರ್ಗ ಪೂರ್ಣವಾದರೆ ಉಂಟಾಗುವ ಸೌಕರ್ಯ. ಲಾಭಗಳನ್ನು ಕುರಿತು ವಿವರವಾಗಿ ತಿಳಿಸಿದ್ದಾರೆ. ಕನ್ನಡಿಗರ ಗಮನಕ್ಕೆ ಬರಲೆಂಬ ಉದ್ದೇಶದಿಂದ ಈಗ ಈ ಎರಡು ಲೇಖನಗಳನ್ನು ಇಲ್ಲಿ ಪುನರ್ಮುದ್ರಿಸಲಾಗಿದೆ.—ಎಚ್. ಎಸ್. ಸುಜಾತಾ]

ರೈಲ್ವೇ ಅಭಿವೃದ್ಧಿ

ಕಳೆದ ನವರಾತ್ರಿಯಾದ ಮೇಲೆ ನಡೆದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ದಿವಾನರವರು ಈ ಸೀಮೆಯ ಮುಖ್ಯವಾದ ಕಡೆಯಲ್ಲೆಲ್ಲಾ ರೈಲ್ವೇಯನ್ನು ಹೆಚ್ಚಿಸುವುದಾಗಿ ಅಪ್ಪಣೆ ಕೊಡಿಸಿದರು. ಈಗ ಬೆಂಗಳೂರಿನಿಂದ ಮೈಸೂರವರಿಗೂ ಹೊಗೇಗಾಡಿಯು ಸರಿಯಾಗಿ ನಡೆಯುತ್ತಿರುವ ವಿಷಯು ಪ್ರಯಾಣಿಕರೆಲ್ಲರಿಗೂ ತಿಳಿದಿದೆಯಷ್ಟೆ; ಇದಲ್ಲದೆ ಬೆಂಗಳೂರಿನಿಂದ ತುಮಕೂರವರಿಗೆ ಹಾಕತಕ್ಕ ರೇಲ್‌ರಸ್ತೇ ಕಾಮಗಾರಿಯು ಎಲ್ಲಾ ಪೂರಯಿಸಿ ಬಂತು. ಗಾಡಿಯು ಮುಂದಿನ ವರ್ಷದ ಆದಿ ಭಾಗದಲ್ಲಿಯೇ ಸರಿಯಾಗಿ ನಡೆಯಬಹುದು. ಮತ್ತು ತುಮಕೂರಿನಿಂದ ತಿಪಟೂರಿನವರಿಗೆ ಹಾಕತಕ್ಕ ರೇಲಿನ ನಕ್ಷೆ ಮತ್ತು ಅಂದಾಜು ಸಹ ತಯಾರಾಗಿವೆ. ಇದರ ಒಟ್ಟು ಖರ್ಚು ಸುಮಾರು ೧೭॥ ಲಕ್ಷ ರೂಪಾಯಿ ಆಗಬಹುದು. ಈ ರಸ್ತೇ ಕಾಮಗಾರಿಯೂ ಪೂರಯಿಸಿ ೮೫ನೇ ಇಸವಿಯ ಒಳಗಾಗಿ ಗಾಡಿ ನಡೆಯಬಹುದೆಂಬ ಕೋರಿಕೆಯಿದೆ.

ಮೇಲಾಗಿ ತಿಪಟೂರಿನಿಂದ ಹರಿಹರಕ್ಕೆ ರೇಲ್ ಹಾಕಲು ಮಾರ್ಗವನ್ನು ಸರ್ವೇ ಮಾಡುತ್ತಿದ್ದಾರೆ. ತಿಪಟೂರಿನಿಂದ ಬೀರೂರಿನವರಿಗೆ ಸರ್ವೇ ಆಗಿ ನಕ್ಷೆ ತಯಾರಾಗಿದೆ. ಅಲ್ಲಿಂದ ಮುಂದಕ್ಕೆ ಹರಿಹರದ ವರೆಗೂ ಸರ್ವೇ ಮಾಡಿ ನಕ್ಷೆಯನ್ನು ಮುಂದಿನ ಮಳೆಗಾಲದ ಒಳಗಾಗಿ ತಯಾರ್ಮಾಡುವದಕ್ಕೆ ಏರ್ಪಾಡಾಗಿದೆ. ಹರಿಹರಕ್ಕೆ ಹೋಗುವ ರಸ್ತೆಯನ್ನು ದಕ್ಷಿಣ ಮರಾಟಾ ರೇಲ್ ರಸ್ತೆಗೆ ಸೇರಿಸಬಹುದು. ಈ

ದಕ್ಷಿಣ ಮರಾಟಾ ರೇಲ್ ಪಶ್ಚಿಮ ಸಮುದ್ರತೀರದಲ್ಲಿರುವ ಗೋವಾವರೆಗೂ ವಿಸ್ತರಿಸಿದೆ. ರೇಲ್ ಹಾಕುವದಕ್ಕೆ ಮುಂಚೆ ಪಶ್ಚಿಮ ಸಮುದ್ರಕ್ಕೂ ಮದರಾಸಿಗೂ ಮೈಸೂರು ಮಾರ್ಗವಾಗಿಯೇ ತುಂಬು ಗಾಡಿಗಳು ನಡೆಯುತ್ತಿದ್ದವು. ಆದಕಾರಣ, ಈ ಏರ್ಪಾಡಿನಿಂದ ಇನ್ನು ಮೇಲೂ ಹಾಗೆಯೇ ನಡೆಯ ಬಹುದು. ಮತ್ತು ಈ ರೈಲು ನಮ್ಮ ಸೀಮೆಯಲ್ಲಿ ಕಾಫಿ, ಅಡಕೆ, ಬೆಳೆಯುವ ಪ್ರಾಂತ್ಯದ ಮೇಲೆ ಹೋಗುವ ಕಾರಣ ನಮ್ಮ ಸರಕಾರಕ್ಕೂ ಜನರಿಗೂ ವಿಶೇಷವಾದ ಆದಾಯ ಉಂಟು. ಇದೂ ಅಲ್ಲದೆ ತುಮಕೂರು ರೇಲ್ ರಸ್ತೆಯಲ್ಲಿ ಸಿಕ್ಕುವ ದೊಡ್ಡಬೆಲಿಯಿಂದ ೫೦ ಮೈಲೀ ದೂರದಲ್ಲಿರುವ ಹಿಂದೂ ಪುರಕ್ಕೆ ರೇಲನ್ನು ಹಾಕುವದಕ್ಕೋಸ್ಕರ ದಾರಿಯನ್ನು ಸರ್ವೇ ಮಾಡಬೇಕಾಗಿದೆ. ಗುಂಟೂರಿನಿಂದ ಗುಂಡು ಕಲ್ಲು ಮಾರ್ಗವಾಗಿ ಬಳ್ಳಾರಿಯ ದಕ್ಷಿಣಭಾಗಕ್ಕೆ ಬರತಕ್ಕ ರೇಲ್ನೊಡನೆ ಹಿಂದೂಪುರದವರಿಗೆ ಹಾಕುವ ರೇಲನ್ನು ಸೇರಿಸುವ ಯೋಚನೆಯುಂಟು. ಮೈಸೂರಿನಿಂದ ನಂಜನಗೂಡುವರಿಗೆ ರೇಲು ಹಾಕಬೇಕೆಂದು ಹೋದವರುಷದಿಂದಲೂ ಯೋಚನೆ ಇದೆಯಷ್ಟೆ. ಇದರ ನಕ್ಷೆಯೂ ಅಂದಾಜೂ ಸಿದ್ಧವಾಗಿದೆ. ಇದಕ್ಕೆ ೬॥ ಲಕ್ಷ ರೂಪಾಯಿ ತಗಲುವದು. ಇದರಿಂದ ಮೈಸೂರಿಗೆ ದಕ್ಷಿಣದಲ್ಲಿರುವ ಜಂಗಲ್ಮರಗಳು ಮೈಸೂರು ಸೀಮೆಯ ರೇಲಿಗೆ ಉಪಯೋಗವಾಗುವಂತೆ ಅನುಕೂಲಿಸುವವು. ಇದರ ವಿಷಯವಾಗಿ ಮುಂದಿನ ಸಂಚಿಕೆಯಲ್ಲಿ ಸ್ವಲ್ಪ ವಿಶದವಾಗಿ ಹೇಳುವೆವು.

ಹೀಗೆ ಹೊಸದಾಗಿ ಮಾಡಬೇಕೆಂದಿರುವ ೧೯೦ ಮೈಲಿ ರೇಲ್ ರಸ್ತೆಯಲ್ಲಿ ತಿಪಟೂರಿನಿಂದ ಹರಿಹರದವರೆಗೆ ಬೀಳುವ ೧೩೦ ಮೈಲೀ ರಸ್ತೆಯು ಈ ಸೀಮೆಗೆ ಬಹಳ ಮುಖ್ಯವಾದದ್ದು. ಇದರಿಂದ ನಮ್ಮ ಸೀಮೆಯ ವ್ಯಾಪಾರವು ಹೆಚ್ಚುವುದು. ಇಲ್ಲಿನ ಸರಕುಗಳು ಅನ್ಯದೇಶಕ್ಕೆ ಹೋಗುವವು. ಅಲ್ಲಿನ ಸರಕುಗಳು ಇಲ್ಲಿಗೂ ಬರುವವು. ಇದರಿಂದ ನಮ್ಮ ದೇಶದ ಸಾಹುಕಾರರು ಹಣವಂತರಾಗುವದಕ್ಕೆ ವಿಶೇಷವಾದ ಆಸ್ಪದವಿದೆ. ಈ ನಮ್ಮ ಹಿಂದೂರಾಜ್ಯದಲ್ಲಿ ನವರಾತ್ರಿಯೇ ಮೊದಲಾದ ವಿಭವಗಳೂ, ಜಾತ್ರೆಗಳೂ, ವಿಶೇಷವಾಗಿ ನಡೆಯುವ ಕಾರಣ ಇಲ್ಲಿಗೆ ಅನ್ಯದೇಶದ ಜನರು ಬಹಳವಾಗಿ ಬರುವರು. ಇದರಿಂದ ಇಲ್ಲಿನ ನಾಗರಿಕ ಅವರಿಗೂ ಅವರ ನಾಗರಿಕ ನಮಗೂ ಚನ್ನಾಗಿ ತಿಳಿಯುವುದಕ್ಕೆ ಆಕರ ವಾಗಿದೆ. ಹೀಗೆ ಪೂರ್ವ ಪಶ್ಚಿಮ ದಡಗಳವರಿಗೂ ನಮ್ಮ ಸೀಮೆಯ ರೇಲ್ ವಿಸ್ತರಿಸಲಾಗಿ, ಕ್ಷಾಮ ಕಾಲದಲ್ಲಿ ಸಮುದ್ರದ ಮೇಲೆ ಬರುವ ಸರಕುಗಳು ನಮ್ಮ ಸೀಮೆಗೆ ಜಾಗ್ರತೆಯಾಗಿ ಬಂದು ಪ್ರಜೆಗಳ ಹಾಹಾಕಾರವನ್ನು ಕಡಮೆ ಮಾಡುವದಕ್ಕೆ ಸಂಶಯವಿಲ್ಲ. ಇಲ್ಲಿನ ಜನರು ಅನ್ಯದೇಶಕ್ಕೂ ಅಲ್ಲಿನ ಪ್ರಜೆಗಳು ಇಲ್ಲಿಗೂ ಹೋಗಿ ಬಂದಲ್ಲಿ, ಜನರಿಗೆ ಪರಸ್ಪರ ನಡತೆ ನುಡಿತೆಗಳು ತಿಳಿದು ನಮ್ಮಲ್ಲಿ ಐಕ್ಯ ಮತ್ಯವು ಹೆಚ್ಚಲು ಕಾರಣವಾಗುವುದು. ಹೀಗೆ ಹಲವು ಬಗೆಯಲ್ಲಿ ಜನರಿಗೆ ನಾಗರಿಕತೆಯನ್ನೂ ಸೌಖ್ಯವನ್ನೂ ಉಂಟುಮಾಡತಕ್ಕ ಈ ರೇಲನ್ನು, ಅವರ ಇಷ್ಟಾನುಸಾರ ಎಲ್ಲ ಕಡೆಗೂ ಚನ್ನಾಗಿ ವಿಸ್ತರಿಸಲು, ನಮ್ಮ ಮೈಸೂರು ಸರಕಾರದವರಿಗೆ ಸಕಲ ವಿಷಯದಲ್ಲೂ ದೇವರು ಉಪಪತ್ತಿಯನ್ನು ಕೊಡಲೆಂದು ನಾವು ಪ್ರಾರ್ಥಿಸುತ್ತೇವೆ.

ನಂಜನಗೂಡು ರೇಲ್‌ರಸ್ತೆ

ಹೋದತಿಂಗಳು ಸೇರಿದ್ದ ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ದಿವಾನರವರು ನಂಜನ ಗೂಡು ರೇಲ್ ರಸ್ತೇ ವಿಷಯವಾಗಿ ಅಪ್ಪಣೇ ಕೊಡಿಸಿದ್ದು ಸರಿಯಷ್ಟೆ. ಆ ರೇಲನ್ನು ಹಾಕಬೇಕೆಂಬ ಉದ್ದೇಶದಿಂದ ಮಾರ್ಗವನ್ನು ಸರ್ವೇ ಮಾಡಿಸಿ ಅಂದಾಜು ಹಾಕಿ ೬॥ ಲಕ್ಷರೂಪಾಯಿ ಆಗುವದೆಂದು ಹೇಳಿದ್ದು ಸರಿಯಷ್ಟೆ. ಸದ್ಯಕ್ಕೆ ಸರಕಾರದ ಹುಟ್ಟುವಳಿಯಲ್ಲಿ ಖರ್ಚು ಹೋಗುತ್ತಾ ಉಳಿಯುವ ಹಣವು ಸ್ವಲ್ಪವಾಗಿದೆ. ಆದ್ದರಿಂದ ಈಗ ತಯಾರಾಗುತ್ತಿರುವ ತಿಪಟೂರು ರೇಲನ್ನು ಪೂರಯಿಸುವುದರಲ್ಲಿ ವಿಶೇಷಾಸಕ್ತಿಯುಳ್ಳ ನಮ್ಮ ಸರಕಾರದವರಿಗೆ ಈ ಕೆಲಸಕ್ಕಾಗಿ ಹಣವೊದಗುವುದು ಕಡಮೆಯಾಗಿದೆ. ಆದಕಾರಣ ಈ ನಂಜನಗೂಡು ರೇಲ್ ಕಾಮಗಾರಿಯು ಸ್ವಲ್ಪ ಸಾವಕಾಶಕ್ಕೆ ಬಿದ್ದಿದೆ.

ಆದರೆ ಹೀಗೆ ಸಾವಕಾಶವಾದ ಮಾತ್ರಕ್ಕೆ, ಇದು ನಷ್ಟದ ಬದುಕು, ಇದನ್ನು ತಾವು ನಡಿಸಕೂಡ ದೆಂದು ಸರಕಾರದವರು ಯೋಚಿಸಿದ್ದಾರೆಂಬದಾಗಿ ತಿಳಿಯಕೂಡದು. ಈ ನಂಜನಗೂಡು ರೇಲ್‌ನಿಂದ

ಉಂಟಾಗುವ ನಾನಾ ವಿಧವಾದ ಪ್ರಯೋಜನಗಳು ಸ್ವಲ್ಪ ಮಟ್ಟಿಗಾದರೂ ಜನರಿಗೆ ತಿಳಿಯದೇ ಇಲ್ಲ. ಈ ಪ್ರಯೋಜನಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ:

೧ ರೇಲ್ ರಸ್ತೆಯು ಮುಂದಕ್ಕೆ ಹೋಗದೆ ಒಂದು ಸ್ಥಳದಲ್ಲಿಯೇ ನಿಂತರೆ, ಆ ಸ್ಥಳಕ್ಕೆ ಬರುವ ಸರಕುಗಳು ಮುಂದಕ್ಕೆ ಹೋಗದೆ ಅಲ್ಲಿಯೇ ನಿಲ್ಲುವವಾದ ಕಾರಣ, ವ್ಯಾಪಾರವು ವಿಶೇಷ ವೃದ್ಧಿಯಾಗುವದಿಲ್ಲ. ಹೀಗಿರುವದಕ್ಕೆ ಬದಲಾಗಿ ನಾಲ್ಕು ದಿಕ್ಕಿನಿಂದಲೂ ಸರಕುಗಳು ಸುಲಭವಾಗಿ ಒಂದು ಸ್ಥಳಕ್ಕೆ ಬರುತ್ತಾ, ಅಲ್ಲಿಂದ ಮುಂದಕ್ಕೆ ಸಾಗಿಹೋಗುತ್ತಿದ್ದರೆ, ಅಂಥಾ ಸ್ಥಳದಲ್ಲಿ ವ್ಯಾಪಾರಗಾರರು ವಿಶೇಷವಾಗಿ ದ್ರವ್ಯಸ್ಥರಾಗುವದಕ್ಕೆ ಸಂಶಯವಿಲ್ಲ. ಹಡಗು ಮತ್ತು ಹೊಗೇ ಜಹಜುಗಳು, ಸಮುದ್ರತೀರದಲ್ಲಿರತಕ್ಕ ರೇವುಗಳ ಐಶ್ವರ್ಯವನ್ನು ವ್ಯಾಪಾರದ ಮೂಲಕ ಹ್ಯಾಗೆ ಹೆಚ್ಚಿಸುವರೋ, ಹಾಗೆಯೇ ರೇಲ್‌ಗಳು ಒಳದೇಶದಲ್ಲಿರುವ ಪಟ್ಟಣಗಳ ಐಶ್ವರ್ಯವನ್ನು ವ್ಯಾಪಾರದ ಮೂಲಕ ವೃದ್ಧಿ ಮಾಡುವವು. ಹೀಗೆ ಅಂಥಾ ಪಟ್ಟಣಗಳು ಅಭಿವೃದ್ಧಿಯಾದ ಹಾಗೆಲ್ಲಾ, ರೇಲ್ ಹುಟ್ಟುವಳಿಯು ಹೆಚ್ಚುವದು.

೨ ನಂಜನಗೂಡು, ಚಾಮರಾಜನಗರ ಪ್ರಾಂತ್ಯಗಳಲ್ಲಿ ಮೆಣಸಿನಕಾಯಿ, ತುಗರಿ , ಗೋಧಿ ಮುಂತಾದ ಪದಾರ್ಥಗಳು ವಿಶೇಷವಾಗಿ ಬೆಳೆದು, ಮೇಲುಸೀಮೆಗೆ ಸಾಗುವವು. ಮೂಗೂರು, ನಂಜನಗೂಡು, ಯಳಂದೂರು, ಈ ಪ್ರಾಂತ್ಯಗಳ ಕೃಷ್ಣಭೂಮಿಯಲ್ಲಿ ಹತ್ತಿಯು ಬೆಳೆಯುತ್ತಿದೆ. ಬೆಂಗಳೂರಲ್ಲಿ ಹತ್ತೀ ಕಾರ್ಖಾನೆಯು ಏರ್ಪಾಡು ನಡೆಯುವವಾಗಿ ಆಲೋಚನೆ ಇರುವ ಕಾರಣ, ಆ ಕಾರ್ಖಾನೆಯ ಸರಪರಾಜಿಗೋಸ್ಕರ ಮೇಲೆ ಕಂಡ ಪ್ರಾಂತ್ಯಗಳಲ್ಲಿ ಹತ್ತೀ ವ್ಯವಸಾಯವು ಮತ್ತೂ ವಿಶೇಷವಾಗಿ ನಡೆಯಬಹುದು. ಈ ಪದಾರ್ಥಗಳೂ, ಮತ್ತು ಯಳಂದೂರು ಸೀಮೆಯ ರೇಷ್ಮೆ, ಗಾಜಿನ ಬಳೆ, ಮುಂತಾದವುಗಳೂ ಸಾಗುವದಕ್ಕೆ ನಂಜನಗೂಡು ರೇಲು ಬಹಳ ಅನುಕೂಲವಾಗಿರುವದು. ಹೀಗೆ ಸರಕುಗಳನ್ನು ವಿಶೇಷವಾಗಿ ಸಾಗಿಸುವದು ಎಂದರೆ, ರೇಲಿನ ಆಗತಿಯು ಹೆಚ್ಚಾಗುವದೆಂದು ಅರ್ಥ.

೩ ಮೈಸೂರು ಸೀಮೆಯಲ್ಲಿ ಜಂಗಲು ವಿಸ್ತಾರವಾಗಿ, ತ್ಯಾಗ, ಹೊನ್ನೆ, ಮೊದಲಾದ ಮರಗಳು ಹೆಚ್ಚಾಗಿರುವದು ಸರಿಯಷ್ಟೆ. ಇವುಗಳನ್ನು ನಮ್ಮ ಸೀಮೆಯ ರೇಲಿಗೂ ಮತ್ತು ಇತರ ರೇಲುಗಳಿಗೂ ಉಪಯೋಗಿಸಬಹುದು. ಆದರೆ ಈ ಜಂಗಲ್ ಪ್ರಾಂತ್ಯದಿಂದ ಈ ಮರಗಳನ್ನು ಸಾಗಿಸುವದಕ್ಕಿಂತಲೂ ಸಾವಿರಾರು ಮೈಲೀ ದೂರದಲ್ಲಿರುವ ದೇಶಗಳಿಂದ ರೇಲ್ ರಸ್ತೆಗೆ ಹಾಕುವ ಮರದ ತುಂಡುಗಳನ್ನು ನಮ್ಮ ದೇಶಕ್ಕೆ ತರಿಸಿಕೊಳ್ಳುವದರಿಂದ, ಶ್ರಮವೂ ವೆಚ್ಚವೂ ಕಡಿಮೆಯಾಗುವದೆಂದು ಇಂಗ್ಲಿಷ್ ಸರ್ಕಾರದವರು ಯೋಚಿಸಿದ್ದಾರೆ. ಆದರೆ ಈ ಮರಗಳನ್ನು ಸಾಗಿಸಲು ತಕ್ಕ ಉಪಪತ್ತಿಗಳು ಕಡಿಮೆಯಾಗಿದ್ದ ಕಾರಣ, ಅವರಿಗೆ ಇಂಥಾ ಆಲೋಚನೆ ಹೊಳೆಯುವದಕ್ಕೆ ಕಾರಣವಾಯಿತು. ನಮ್ಮ ದೇಶದಲ್ಲಿ ಬೆಳೆಯುವ ಪದಾರ್ಥವನ್ನು ನಾವು ಉಪಯೋಗಿಸಿಕೊಳ್ಳುವದಕ್ಕೆ ಇಲ್ಲದೆ, ಮತ್ತೊಂದು ದೇಶದಿಂದ ತರಿಸಿಕೊಳ್ಳುವದು, ನಮ್ಮ ಮನೆಯಲ್ಲಿ ಮಾಡಿದ ಅನ್ನವನ್ನು ನಾವು ತಿನ್ನುವದಕ್ಕೆ ಇಲ್ಲದೆ ನೆರೆಮನೆಯಲ್ಲಿ ಮಾಡಿದ ಹಿಟ್ಟಿಗೆ ಹಲ್ಲುಕಿರಿದ ಹಾಗಾಯಿತು. ನಮ್ಮ ಸೀಮೇ ಮರಗಳನ್ನು ಸುಲಭವಾಗಿ ಸಾಗಿಸುವುದಕ್ಕೆ ಅನುಕೂಲ್ಯವಿಲ್ಲದೆ ಇರುವದೇ ಇಂಥಾ ದೌರ್ಭಾಗ್ಯಕ್ಕೆ ಮುಖ್ಯ ಕಾರಣ. ಆದ್ದರಿಂದ ನಂಜನಗೂಡಿಗೆ ರೇಲ್‌ರಸ್ತೆಯನ್ನು ಹಾಕಿದರೆ, ಕಾಕನಕೋಟೆ ಜಂಗಲ್‌ನಲ್ಲಿ ಆಗುವ ಮರಗಳನ್ನು ಕಡಿದು ಕಪಿಲಾನದಿಯಲ್ಲಿ ತೇಲುಬಿಟ್ಟು, ಮಲ್ಲನಮೂಲೇ ಸೇತುವೆಯ ಸಮೀಪದಲ್ಲಿ ಮೇಲಕ್ಕೆಯೆಳೆದು ರೇಲ್‌ಗಾಡಿಗಳಿಗೆ ಏರಿಸಿ ಸಾಗಿಸಲು

ಅನುಕೂಲವಾಗಿರುವುದು. ಹೀಗೆ ವಿಶೇಷವಾಗಿ ನಮ್ಮ ಸೀಮೆಯ ಮರಗಳನ್ನು ಹೊರಕ್ಕೆ ಸಾಗಿಸುವ ಕಾರಣ, ರೇಲಿನ ಆಗತಿಯೂ ವ್ಯಾಪಾರವೂ ಹೆಚ್ಚಾಗುವವು.

೪ ದಕ್ಷಿಣದಲ್ಲಿರುವ ಶಿವಸ್ಥಳಗಳಲ್ಲಿ ನಂಜನಗೂಡು ಒಂದು ಮಹಾಸ್ಥಳ. ಪ್ರತಿನಿತ್ಯವೂ ಉತ್ಸವಾದಿಗಳು ನಡೆಯುತ್ತಲೇ ಇರುವವು. ದೊಡ್ಡ ಜಾತ್ರೆ, ಮಾರ್ಕಂಡೇಯ ತಿರುನಾಳು, ಗಿರಿಜಾ ಕಲ್ಯಾಣ, ಕೃತ್ತಿಕೋತ್ಸವ, ಆದ್ರೋತ್ಸವ, ಹುಣ್ಣಿಮೆಸೇವೆ, ಈ ಕಾಲಗಳಲ್ಲಿ ವಿಶೇಷವಾದ ಪರಿಷೆಯು ಸೇರುವದು. ಕಡಪಾ, ಬಳ್ಳಾರಿ, ಧಾರವಾಡ, ಶಿವಮೊಗ್ಗ, ಚಿತ್ರದುರ್ಗ ಮತ್ತು ತಿರುಚನಾಪಳ್ಳಿ, ಮಧುರೆ, ರಾಮೇಶ್ವರ, ಮದರಾಸ್, ಕೊಡಗು, ಈ ಪ್ರಾಂತ್ಯದಿಂದೆಲ್ಲಾ ನಂಜುಂಡೇಶ್ವರನ ಸೇವೆಗಾಗಿ ಜನರು ಬರುತ್ತಾರೆ. ನವರಾತ್ರಿ ನೋಟಕ್ಕೋಸ್ಕರ ಮೈಸೂರಿಗೆ ಬಂದವರಲ್ಲಿ ಅನೇಕರು ನಂಜನಗೂಡಿಗೆ ಹೋಗದೆ ಹಿಂತಿರುಗುವದಿಲ್ಲ. ಒಂದೊಂದು ಸಾರಿ ಇಲ್ಲಿಗೆ ಬರುವ ಜನರ ಗುಂಪನ್ನು ನೋಡಿದರೆ, ನಂಜನಗೂಡಿಗೆ ರೇಲು ಇದ್ದ ಪಕ್ಷದಲ್ಲಿ ಸಾಮಾನುಗಾಡಿಗಳಿಂದ ಆಗಬಹುದಾದ ಉತ್ಪತ್ತಿಗಿಂತಲೂ ಪ್ರಯಾಣಿಕರ ಗಾಡೀ ಉತ್ಪತ್ತಿಯು ಒಂದಕ್ಕೆ ನಾಲ್ಕರಷ್ಟು ಹೆಚ್ಚಾಗ ಬಹುದು.

೫ ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಇರುವದಕ್ಕಿಂತಲೂ ಮೈಸೂರಿನಲ್ಲಿ ಪದಾರ್ಥಗಳೆಲ್ಲವೂ ತಗ್ಗು. ಇಲ್ಲಿಂದ ನಂಜನಗೂಡು, ಚಾಮರಾಜನಗರಕ್ಕೆ ಸರಕುಗಳು ಸಾಗುವದು ಕಷ್ಟವಾಗಿರುವ ಕಾರಣ, ಪದಾರ್ಥಗಳ ಕ್ರಮವು ಅಲ್ಲಿ ಇನ್ನೂ ಹೆಚ್ಚು. ಚಾಮರಾಜನಗರವನ್ನು ಕ್ಷಾಮರಾಜನಗರವೆಂದು ಜನರೆಲ್ಲರೂ ಈಗಲೂ ಹಾಸ್ಯವಾಗಿ ಕರೆಯುತ್ತಾರೆ. ಸಾಧಾರಣ ದಿವಸಗಳಲ್ಲಿಯೇ ಹೀಗೆ ಪ್ರಿಯವಾಗಿರತಕ್ಕ ಸಾಮಾನುಗಳ ಬೆಲೆಯು ಬರಗಾಲದಲ್ಲಿ ಹ್ಯಾಗೆ ಇರುವದೋ ಊಹಿಸಿಕೊಳ್ಳಬೇಕು. ಕಳೆದುಹೋದ ಈಶ್ವರ ಸಂವತ್ಸರದ ಕ್ಷಾಮದಲ್ಲಿ ನಂಜನಗೂಡು, ಗುಂಡಲು ಚಾಮರಾಜನಗರದ ಬಡಜನರು ಕಷ್ಟಪಟ್ಟುಕೊಂಡು ಕೊನೆಗೆ ಪ್ರಾಣ ಬಿಟ್ಟದ್ದನ್ನು ಕೇಳಿದರೆ ರೋಮಾಂಚವಾಗುವದು. ಅನ್ಯದೇಶದ ಸರಕುಗಳು ಸುಲಭವಾಗಿ ಬರುವಂತೆ ರೇಲ್ ಇದ್ದರೆ, ಅಷ್ಟೊಂದು ಪ್ರಜಾಕ್ಷೋಭೆ ಆಗುತ್ತಿರಲಿಲ್ಲ.

ಇವೇ ಮೊದಲಾದ ಇನ್ನೂ ಅನೇಕಾಂಶಗಳನ್ನು ಪರ್ಯಾಲೋಚಿಸಿ ನಮ್ಮ ಸರ್ಕಾರದವರು ಈ ರೇಲನ್ನು ಹಾಕಬೇಕೆಂದು ನಿಶ್ಚಯಿಸಿದಾಗ್ಯೂ, ಮೇಲೆ ಹೇಳಿದ ಕಾರಣಗಳಿಂದ ಸಧ್ಯಕ್ಕೆ ಸ್ವಲ್ಪ ಮಾನಸಿಕ ಮಾಡಬೇಕಾಯಿತು. ಆದರೆ ಇಂಥಾ ದೊಡ್ಡ ಕಾರ್ಯಗಳನ್ನು ದ್ರವ್ಯಸಹಾಯದಿಂದಲೂ ಬುದ್ಧಿ ಕೌಶಲ್ಯದಿಂದಲೂ, ದೇಹಶ್ರಮದಿಂದಲೂ, ಹಣವಂತರಾದ ಸಾಹುಕಾರರು ಇಂಗ್ಲೆಂಡ್ ಮೊದಲಾದ ದೇಶಗಳಲ್ಲಿಯೂ ಇಲ್ಲಿಯೂ ನೆರವೇರಿಸುವದು ಲೋಕಪ್ರಸಿದ್ಧವಾಗಿದೆ. ಆದರೆ ಗೋಸಾಯಿಗಳಲ್ಲಿಯೂ, ಗುಜರಾತಿಯವರಲ್ಲಿಯೂ, ಮುಲ್ತಾನಿಯವರಲ್ಲಿಯೂ, ಜೈನರಲ್ಲಿಯೂ, ವೈಶ್ಯರಲ್ಲಿಯೂ, ಮೊದಲಿಯಾರರಲ್ಲಿಯೂ, ಕುಂಚಿಗರಲ್ಲಿಯೂ, ಮುಸಲ್ಮಾನರಲ್ಲಿಯೂ ಲಕ್ಷಾಧಿಕಾರಿಗಳು ಇಧಾರೆಂಬ ಅಹಂಕಾರವು ಈ ಸೀಮೆಗೆ ಪೂರ್ವದಿಂದಲೂ ಇದೆಯಾಗಿ, ಈ ಸೀಮೆಯ ಸಾಹುಕಾರರಿಗೆ ದ್ರವ್ಯಸಹಾಯವಿಲ್ಲವೆಂಬುವ ಮಾತು ಒಳ್ಳೇ ಅಪಟಾ ಸುಳ್ಳು; ರೇಲ್ ಮೊದಲಾದ ಇಂಥಾ ದೊಡ್ಡ ಕೆಲಸಕ್ಕೆ ಬೇಕಾದ ಬುದ್ಧಿ ಕೌಶಲ್ಯವುಳ್ಳ ಜನರು ದ್ರವ್ಯ ಮೂಲಕ ಸಿಕ್ಕುವದು ನಿಸ್ಸಂದೇಹವಾಗಿದೆ. ಇದರಿಂದ ಮೇಲೆ ಕಾಣಿಸಿದ ಮೂರು ಗುಣಗಳಲ್ಲಿ ದ್ರವ್ಯ ಮತ್ತು ಕೌಶಲ್ಯ, ಈ ಎರಡು ಗುಣಗಳು ಇದ್ದ ಹಾಗಾದವು. ಆದರೆ ನಮ್ಮ ಸಾಹುಕಾರರುಗಳು ಇಂಥಾ ಯಾವ ಕಾರ್ಯಗಳಲ್ಲಿಯೂ ಇದುವರಿಗೆ ಉದ್ಯೋಗಿಸದೆ ಇರುವ ಕಾರಣ ಧೈರ್ಯದೊಡನೆ ಕೂಡಿದ ದೇಹಶ್ರಮ ಅಥವಾ ಸಾಹಸಗುಣ ಒಂದೇ ಲೋಪವಾಗಿದೆ.

ಇದರಿಂದೆಲ್ಲಾ ನಮ್ಮ ಸಾಹುಕಾರರುಗಳಿಗೆ ನಾವು ಹೇಳಿಕೊಳ್ಳುವುದೇನೆಂದರೆ—ಎಲ್ಲರೂ ಒಂದು ಕಡೆ ಸಭೇ ಸೇರಿ ಪ್ರಯೋಜನಕರವಾದ ಈ ನಂಜನಗೂಡು ರೇಲ್ ರಸ್ತೆಯನ್ನು ತಾವೇ ಹಾಕಿಸುವ ಹಾಗೆ ಆಲೋಚನೇ ಮಾಡಬೇಕು. ಈ ಹದಿನೈದು ಮೈಲೀ ರಸ್ತೆಗೆ ಬೇಕಾಗಿರುವ ಆರೂವರೆ ಲಕ್ಷ

ರೂಪಾಯಿಯನ್ನು ಷೇರುಪ್ರಕಾರ ಜನರು ಹಂಚಿಕೊಂಡು ಹಾಕಬಹುದು. ದೊಡ್ಡ ದೊಡ್ಡ ಸಾಹುಕಾರರುಗಳು ಹತ್ತು, ಇಪ್ಪತ್ತು ಸಾವಿರ ರೂಪಾಯಿಗಳ ಮೇಲೆ ಹಾಕಿ, ಇನ್ನೂ ಬೇಕಾಗುವ ಹಣವನ್ನು ಸಾಧಾರಣ ಜನರೆಲ್ಲರೂ ಭರ್ತಿ ಮಾಡುವಂತೆ ನೋಟೀಸುಗಳನ್ನು ನಮ್ಮ ಸೀಮೆಯಂ ಇತರ ಪ್ರಾಂತ್ಯಗಳಿಗೂ ಮದ್ರಾಸ್ ಬೊಂಬಾಯಿ ಮೊದಲಾದ ದೊಡ್ಡ ಷಹರುಗಳಿಗೂ ಕಳುಹಿಸಬಹುದು. ಬೆಂಗಳೂರಿನಲ್ಲಿ ಇಡತಕ್ಕ ಹತ್ತಿಕಾರ್ಖಾನೇ ವಿಷಯದಲ್ಲಿ ನಡೆಸಿದಂತೆಯೇ ಮೈಸೂರು ಸರ್ಕಾರದವರು ಇದರಲ್ಲಿಯೂ ಕೆಲವು ಷೇರುಗಳನ್ನು ತೆಗೆದುಕೊಳ್ಳಬಹುದು; ಮತ್ತು ಸಾಹುಕಾರರುಗಳು ಕೇಳಿಕೊಂಡಲ್ಲಿ ತಮ್ಮ ಎಂಜಿನಿಯರ್ ಮೊದಲಾದವರ ಸಹಾಯವನ್ನೂ ಕೊಡಬಹುದು. ಮಾರ್ಗವನ್ನು ಸರ್ಕಾರದವರೇ ಸರ್ವೇ ಮಾಡಿಸಿರುವದ್ದರಿಂದ ಆ ವೆಚ್ಚವೂ ಈ ಸಾಹುಕಾರರ ಕಂಪೆನಿಗೆ ತಟ್ಟುವದಿಲ್ಲ. ಮಲ್ಲನಮೂಲೇ ಸೇತುವೆಯು ಬಹುಬಲವಾಗಿರುವ ಕಾರಣ, ಅದರ ಮೇಲೆಯೇ ಗಾಡಿಯನ್ನು ಬಿಡಬಹುದೆಂದು ಎಂಜಿನಿಯರುಗಳು ಒಪ್ಪಿಯಾರು; ಆದಕಾರಣ ಒಂದು ದೊಡ್ಡ ಸೇತುವೆಯನ್ನು ಕಟ್ಟಿಸುವಲಾಗೋಡು ಉಳಿಯುವದು. ಕಡಕೊಳದ ಎಣ್ಣೇಹೊಳೆ ಸೇತುವೆಯು ಮದ್ದೂರು ಸೇತುವೆಯಂತೆ ಬಲವಾಗಿದೆ. ಸದ್ಯಕ್ಕೆ ಇನ್ನೊಂದು ಸೇತುವೆ ತಯಾರಾಗುವ ತನಕ ಈ ಹಳೇ ಸೇತುವೇ ಮೇಲೆ ಎಂಜಿನಿಯರು ಒಪ್ಪಿದಲ್ಲಿ ಗಾಡಿಯನ್ನು ಬಿಡುತ್ತಿರಬಹುದು. ಈ ರೇಲ್‌ನಿಂದ ಅನೇಕ ಪ್ರಯೋಜನಗಳು ಇರುವ ಕಾರಣ, ಇಂಥಾ ಯೋಗ್ಯವಾದ ಪ್ರಯತ್ನಕ್ಕೆ ತಕ್ಕ ಪ್ರೋತ್ಸಾಹವನ್ನು ಮೈಸೂರು ಸರ್ಕಾರದವರು ಕೊಡಬಹುದು. ಈ ಕೆಲಸದಲ್ಲಿ ನಷ್ಟ ಸಂಭವಿಸೀತೆಂಬ ಆಲೋಚನೆಯನ್ನು ಮಾಡಲೇಕೂಡದು; ಹಾಗೆ ನಷ್ಟವಾಗುವ ಸಂದರ್ಭದಲ್ಲಿ ತಮಗೆ ಪ್ರಯೋಜನವಾಗಿರತಕ್ಕ ಈ ಕರಕರ್ದನ್ನು ಸರ್ಕಾರದವರು ಕೊಂಡುಕೊಂಡು, ಷೇರದಾರರಿಗೆ ಹಣವನ್ನಾಗಲಿ ಅಥವಾ ಅವರು ಅಪೇಕ್ಷಿಸಿದರೆ ತಾರತಮ್ಯವರಿತು ಬಡ್ಡಿಯನ್ನಾಗಲಿ ಕೊಡಬಹುದು. ಈ ರೀತಿಯಲ್ಲಿ ಈ ದೊಡ್ಡಕಾರ್ಯವನ್ನು ನೆರವೇರಿಸಿದರೆ ನಮ್ಮ ಜನರಿಗೆ ಉಪಯುಕ್ತವಾದ ಈ ರೇಲ್ ಕೆಲಸವು ತಿಳಿಯುವದಲ್ಲದೆ, ಇಲ್ಲಿನ ಸಾಹುಕಾರರುಗಳ ಪ್ರಸಿದ್ಧಿ ಇತರ ದೇಶದಲ್ಲಿಯೂ ಹರಡಿಕೊಳ್ಳುವದು. ತಮಗೂ ತಮ್ಮ ದೇಶಕ್ಕೂ ಪ್ರಯೋಜನವನ್ನೂ ಪ್ರಖ್ಯಾತಿಯನ್ನೂ ಉಂಟುಮಾಡತಕ್ಕ ಈ ಕಾರ್ಯದ ವಿಷಯವಾಗಿ ಕೂಡಲೇ ಎಲ್ಲರೂ ಒಟ್ಟಾಗಿ ಸೇರಿ ಸಾವಧಾನವಾಗಿ ಯೋಚಿಸಿಯಾರೆಂದು ನಂಬುತ್ತೇವೆ.

ಪುಟ್ಟಣ್ಣನವರು ಉಪಾಧ್ಯಾಯ ವೃತ್ತಿಯಲ್ಲಿದ್ದಾಗಲೇ ಲೇಖನ ಚಟುವಟಿಕೆಯನ್ನು ಆರಂಭಿಸಿದ್ದರು. ಶಾಲಾ ಪಠ್ಯ ಪುಸ್ತಕಗಳನ್ನು ರಚಿಸಿದ್ದರಲ್ಲದೆ, ಮಕ್ಕಳಿಗಾಗಿ ನೀತಿ ಚಿಂತಾಮಣಿ ಎಂಬ ಪುಸ್ತಕವನ್ನು ಮೂರು ಭಾಗಗಳಾಗಿ ಪ್ರಕಟಿಸಿದ್ದರು. ನಿವೃತ್ತರಾದ ಮೇಲೆ ಇವರು ಬರೆದ ಕುಣಿಗಲು ರಾಮಶಾಸ್ತ್ರಿಗಳ ಚರಿತ್ರೆ, ಮಾಡಿದ್ದುಣ್ಣೋ ಮಹರಾಯ (೧೯೧೫), ಮುಸುಕು ತೆಗೆಯೋ ಮಾಯಾಂಗನೆ (೧೯೨೮) ಈ ಕೃತಿಗಳು ಇವರಿಗೆ ಒಳ್ಳೆಯ ಪ್ರಸಿದ್ಧಿಯನ್ನು ತಂದು ಕೊಟ್ಟವು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನ ವಿದ್ವಾಂಸರಾಗಿದ್ದ ಕುಣಿಗಲ್ ರಾಮಶಾಸ್ತ್ರಿಗಳ ವ್ಯಕ್ತಿತ್ವದ ಜೊತೆಗೆ ಆ ಕಾಲದ ಜನಜೀವನದ ಚಿತ್ರಣ ಕುಣಿಗಲು ರಾಮಶಾಸ್ತ್ರಿಗಳ ಜೀವನ ಚರಿತ್ರೆಯಲ್ಲಿ ಬಹು ಚೆನ್ನಾಗಿ ವರ್ಣಿತವಾಗಿದ್ದು, ಕಾದಂಬರಿಯಂತೆ ಸ್ವಾರಸ್ಯವಾಗಿ ಓದಿಸಿಕೊಂಡು ಹೋಗುತ್ತದೆ. ಕನ್‌ಫ್ಯೂಸಿಯಸ್, ಮಹಮದ್‌ಗವಾನ್, ಹೈದರಾಬಾದ್ ಸಂಸ್ಥಾನದ ಮಂತ್ರಿಯಾಗಿದ್ದ ಸಾಲಾರ್‌ಜಂಗ್ ಇವು ಇವರು ಬರೆದಿರುವ ಜೀವನ ಚರಿತ್ರೆಗಳು.

(ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟದಲ್ಲಿನ ಜಿ. ವೆಂಕಟಸುಬ್ಬಯ್ಯನವರ ಬರಹದಿಂದ
(ಪು. ೬೦೯) ಉದ್ಧೃತ)

ಬಿ. ಎನ್. ಸೋಮೇಗೌಡ

ಸರ್ವೋದಯ ಪ್ರಾಯೋಗಿಕವೇ ?

ಗಾಂಧೀಜಿಯವರ ಮೇಲೆ ಆಧುನಿಕರಾದ ಮೂರು ಪ್ರಬಲರಾದ ವ್ಯಕ್ತಿಗಳು ತಮ್ಮ ವರ್ಚಸ್ಸನ್ನು ಬೀರಿದ್ದಾರೆ. 'ತನ್ನ ಸಜೀವ ಸಂಸರ್ಗದಿಂದ' ರಾಯಚಂದ ಬಾಯಿಯೂ, 'ನಾಕವಿರುವುದು ಎನ್ನೆದೆಯಲ್ಲಿಯೆ' ಎಂಬ ಕೃತಿಯ ಮೂಲಕ ಟಾಲ್‌ಸ್ಟಾಯಿಯೂ, ತನ್ನ 'ಅನ್‌ಟು ದಿಸ್ ಲಾಸ್ಟ್' ಎಂಬ ಕೃತಿಯಿಂದ ಜಾನ್ ರಸ್ಕಿನ್ನನೂ ಗಾಂಧೀಜಿಯವರ ಮನಸ್ಸನ್ನು ಸೂರೆಗೊಂಡಿದ್ದಾರೆ. ಮುಖ್ಯವಾಗಿ 'ಅನ್‌ಟು ದಿಸ್ ಲಾಸ್ಟ್' ಗ್ರಂಥವು ಗಾಂಧೀಜಿಯವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿನ ಧ್ಯೇಯಗಳಿಗೆ ಅನುಸಾರವಾಗಿ ತಮ್ಮ ಬಾಳನ್ನು ಬದಲಾಯಿಸುವ ಮನೋಭಾವನೆಯನ್ನು ಹುಟ್ಟಿಸಿಕೊಂಡರು. ಈ ಪುಸ್ತಕವನ್ನು ಗುಜರಾತಿ ಭಾಷೆಯಲ್ಲಿ ಅನುವಾದ ಮಾಡಿ ಸರ್ವೋದಯ ಎಂದು ಹೆಸರಿಟ್ಟರು.

ಅನ್‌ಟು ದಿಸ್‌ಲಾಸ್ಟ್ ಕೃತಿಯಿಂದ ಗಾಂಧೀಜಿಯವರು ಮುಖ್ಯವಾಗಿ ತಿಳಿದುಕೊಂಡ ವಿಷಯಗಳೆಂದರೆ:

೧ ಎಲ್ಲರ ಹಿತದಲ್ಲಿಯೇ ತನ್ನ ಹಿತವು ಅಡಗಿದೆ.

೨ ವಕೀಲನ ವೃತ್ತಿಯೂ ಕ್ಷೌರಿಕನ ಕಸುಬೂ ಸಮಾನ ಗೌರವವುಳ್ಳವು. ಏಕೆಂದರೆ ಎಲ್ಲರ ಜೀವಿಕೆಯ ಗಳಿಕೆಯೂ ಕಾಯಕದಿಂದಲೇ ನಡೆಯುತ್ತದೆ.

೩ ದುಡಿಮೆಯ-ನೇಗಿಲಯೋಗಿಯ ಇಲ್ಲವೆ ಶ್ರಮಜೀವಿಯ ಬಾಳೇ ಭವ್ಯವಾದ ಬಾಳು.

ಈ ಮೂರು ತತ್ವಗಳಲ್ಲಿ ಒಂದನೆಯದು ಅವರಿಗೆ ತಿಳಿದಿತ್ತು. ಎರಡನೆಯದು ಮಸುಕು ಮಸಕಾಗಿ ಅರ್ಥವಾಗಿತ್ತು. ಮೂರನೆಯದು ನನಗೆ ಹೊಳೆದೇ ಇರಲಿಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ. ಮೊದಲನೆಯ ತತ್ವವು ಉಳಿದ ಎರಡನ್ನು ಒಳಗೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಅವರಿಗೆ ಮನಗಾಣಿಸಿತು. ಹಾಗೂ "ನೈತಿಕ ನಿಯಮಗಳ ಪರಿಪಾಲನೆಯಲ್ಲಿ ಮಾನವರ ಕಲ್ಯಾಣವಿದೆ ಎಂಬುದನ್ನು ತೋರಿಸಿದೆ". ಈ ಮೇಲಿನ ಮೂರು ತತ್ವಗಳ ಆಧಾರಗಳನ್ನಿಟ್ಟುಕೊಂಡು ಗಾಂಧೀಜಿಯವರು ಸರ್ವೋದಯ ಸಮಾಜವನ್ನು ಕಟ್ಟುವ ಪ್ರಯತ್ನ ಮಾಡಿದರು. ಈ ಪ್ರಯತ್ನಕ್ಕೆ ಜಯಪ್ರಕಾಶ್ ನಾರಾಯಣ್, ಆಚಾರ್ಯ ವಿನೋಬಾಭಾವೆ ಮುಂತಾದ ನಾಯಕರುಗಳು ಬಹು ವಿಧವಾಗಿ ಪ್ರೋತ್ಸಾಹ ನೀಡಿದರು.

ರಾಷ್ಟ್ರದ ಸಾಮಾಜಿಕ, ಆರ್ಥಿಕ, ರಾಜಕೀಯ, ನೈತಿಕ ಸುಭದ್ರತೆಗಾಗಿ ಕಾಕಾ ಕಾಲೇಲ್ಕರ್ ಎಂಬುವರ ಅಧ್ಯಕ್ಷತೆಯಲ್ಲಿ ಸರ್ವೋದಯದ ಆರ್ಥಿಕ ಸಮ್ಮೇಳನವನ್ನು ದಿ. ೩೦-೧-೧೯೪೮ರಲ್ಲಿ ನಡೆಸಲಾಯಿತು. ವಿನೋಬಾಜಿಯವರು ದಿ ೨೦-೧-೧೯೫೦ರಲ್ಲಿ ಸರ್ವೋದಯ ಸಮಾಜವನ್ನು ಕಟ್ಟಿದರು. ಇದಕ್ಕೆ ಜೆ. ಪಿ.ಯವರು ಮುಂದಾಳತ್ವವನ್ನು ವಹಿಸಿದರು. ವಿನೋಬಾ ಭಾವೆಯವರು ಸರ್ವೋದಯದ ಲಕ್ಷಣಗಳನ್ನು ಈ ರೀತಿ ಹೇಳಿದ್ದಾರೆ. ಇವುಗಳು ಮೂಲಭೂತವಾಗಿವೆ.

೧ ಶಕ್ತಿಯಿಂದ ಅಥವಾ ಬಲದಿಂದಲೇ ಮಾತ್ರ ಸಮಾಜವನ್ನು ಕಟ್ಟಲಾಗುವುದಿಲ್ಲ. ಅದಕ್ಕೆ ಒಳ್ಳೆಯ ಶಿಸ್ತು ಮತ್ತು ಮನಸ್ಸು ಅವಶ್ಯಕ.

೨ ಪ್ರತಿಯೊಬ್ಬನೂ ತನ್ನ ಯೋಗ್ಯತೆಗನುಸಾರವಾಗಿ ತನ್ನ ಸಮಾಜದ ಬೆಳವಣಿಗೆಗೆ ಮತ್ತು ಅದರ ಅಭಿವೃದ್ಧಿಗೆ ದುಡಿಯಲು ತನ್ನ ಜೀವನವನ್ನು ಮೀಸಲಿಡಬೇಕು.

೩ ನೈತಿಕ, ಸಾಮಾಜಿಕ, ಆರ್ಥಿಕ ಮೌಲ್ಯಗಳು ಎಲ್ಲಾ ಕಾಲಗಳಲ್ಲಿಯೂ ಒಂದೇ ಸಮನಾಗಿ ಸಮಾಜದಲ್ಲಿ ಬೆಳೆದಿರಬೇಕು.

೪ ಪ್ರಜಾಪ್ರಭುತ್ವವು ಅಹಿಂಸೆಯ ಆಧಾರದ ಮೇಲೆ ರೂಪುಗೊಳ್ಳಬೇಕು.

ಈ ರೀತಿಯಲ್ಲಿ ಹಲವಾರು ಲಕ್ಷಣಗಳನ್ನೊಳಗೊಂಡ ಸರ್ವೋದಯ ಎಂಬ ಸಮಾಜ ಬೆಳಕಿಗೆ ಬಂದಿತು. ಸರ್ವೋದಯ ಎಂಬ ಪದವೂ ತನ್ನದೇ ಆದ ಅರ್ಥವನ್ನು ಒಳಗೊಂಡಿದೆ.

ಸರ್ವೋದಯದ ಅರ್ಥವೇನೆಂದರೆ "ಸರ್ವರಿಗೂ ಕಲ್ಯಾಣಪ್ರದವಾದುದು". ಇದರಲ್ಲಿ (೧) ಸರ್ವಸಮಾಜಗಳ ಉದಯ ಮತ್ತು (೨) ಸಮಾಜದ ಸರ್ವವಿಭಾಗಗಳ ಉದಯಗಳು ಅಡಕ ವಾಗುವುವು. ಗಾಂಧೀಜಿಯವರು ಸರ್ವೋದಯವನ್ನು 'ಸಮಗ್ರ ಸೂತ್ರದ' ಬದಲಿಗೆ ಉಪಯೋಗಿಸಿ ದ್ದಾರೆ. ಸಮಗ್ರ ಸೂತ್ರವೆಂದರೆ "ಒಂದು ಸಮುದಾಯದ ಸರ್ವಕಾಲಿಕ ಸಂತೋಷ". ಗಾಂಧೀಜಿ ಯವರು ಈ ಬಹುಜನರ ಸುಖ ಸಂತೋಷ ತತ್ವವನ್ನು ನಿರಾಕರಿಸಿದರು. ಶೇ. ೫೧ ಜನರ ಹಿತವನ್ನು ಸಾಧಿಸಲು ಉಳಿದ ೪೯ ಜನರ ಹಿತಾಶಕ್ತಿಗಳನ್ನು ತ್ಯಾಗಮಾಡಬೇಕೆಂಬುದಾಗಿ ಬೆಂಥಾಮ್‌ರವರ ಸೂತ್ರವು ತೋರಿಸುವುದು. "ಇದು ಹೃದಯಶೂನ್ಯತೆಯಿಂದ ಕೂಡಿದ್ದು ಮಾನವೀಯತೆಯ ವಿರೋಧಿ ಯಾಗಿದೆ". ಈ ತತ್ವದ ಪರಾಕಾಷ್ಟತೆಯನ್ನು ವಿವರಿಸುವುದು "ಸರ್ವರ ಕಲ್ಯಾಣವೇ ಸರ್ವೋದಯ ವಾಗಿದ್ದು ಅದಕ್ಕಾಗಿ ಎಲ್ಲರ ಆತ್ಮತ್ಯಾಗ ಮುಖ್ಯ" ಎಂಬುದೇ ಆಗಿದೆ.

ಸರ್ವೋದಯದ ಉದ್ದೇಶವೆಂದರೆ ಸತ್ಯ ಮತ್ತು ಅಹಿಂಸೆಯ ತಳಹದಿಯ ಮೇಲೆ ಜಾತಿ, ಮತ, ಪಂಥ ಬೇಧವಿಲ್ಲದೆ ಶೋಷಣರಹಿತವಾದ ಸಮಾಜವನ್ನು ರಚಿಸಿ ಸರ್ವವ್ಯಕ್ತಿಗಳಿಗೂ ಸರ್ವ ಗುಂಪುಗಳಿಗೂ ತಮ್ಮ ಏಳಿಗೆ ಮಾಡಿಕೊಳ್ಳುವ ಸಂಪೂರ್ಣ ಅವಕಾಶ ದೊರೆಯುವಂತೆ ಏರ್ಪಡಿಸು ವುದು ಆಗಿದೆ.

ಗಾಂಧೀಜಿಯವರು ತಮ್ಮ ಲೇಖನದಲ್ಲಿ ಬರೆಯುತ್ತಾ ಅಹಿಂಸಾ ಸಾಧಕನು ಎಂದೂ ಸಮಗ್ರ ಸೂತ್ರವನ್ನು ಅಳವಡಿಸಿಕೊಳ್ಳಲಾರ. ಈತನು ಎಲ್ಲರ ಹಿತಕ್ಕಾಗಿ ಕಷ್ಟಪಡುತ್ತಾನೆ. ಸರ್ವಕಲ್ಯಾಣವು ಈ ರೀತಿಯಾಗಿ ಸಾಧಿಸಲ್ಪಡುತ್ತದೆ. "ಸಮಗ್ರ ಸೂತ್ರದ ಪಾಲಕನು ಕೇವಲ ತಾತ್ವಿಕನಾಗಿದ್ದು ತ್ಯಾಗಕ್ಕೆ ಸಿದ್ಧನಾಗಿರುವುದಿಲ್ಲ".

ಗಾಂಧೀಜಿಯವರ ದೃಷ್ಟಿಯಲ್ಲಿ ಮತ್ತು ಭೌತಿಕ ಪ್ರಾಂಪಚಿಕ ಸುಖ ಸಾಧನೆಗೆ ದಿವ್ಯತತ್ವದಲ್ಲಿ ಯಾವ ಮನ್ನಣೆಯೂ ಇಲ್ಲ. ಆದರೆ ಸರ್ವೋದಯದಲ್ಲಿ ಸರ್ವ ಸಮುದಾಯದ ಒಳಿತನ್ನು ಸಾಧಿಸು ವಂತಹ ಉದಾತ್ತ ಕಲ್ಪನೆ ಇದೆ.

ಗಾಂಧೀಜಿಯವರಿಂದ ಕೊಡಲ್ಪಟ್ಟ ಸರ್ವೋದಯ ತತ್ವವು ಮೊದಲೇ ಹೇಳಿರುವಂತೆ ವಿನೋಬಾ ಭಾವೆ ಮತ್ತು ಜೆ.ಪಿ.ಯಂತಹವರಿಂದ ಪ್ರವರ್ಧಮಾನಕ್ಕೆ ಬಂದಿತು. ಇದು "ರಾಜಕೀಯ ಭೌತಿಕ ಪಂಚಕ್ಕೆ ಈ ಶತಮಾನದ ನೈಜ ಪ್ರಯತ್ನದಿಂದ ಕೂಡಿರುವಂತಹ ಒಂದು ಕೊಡುಗೆ" ಎಂದು ಪ್ರಜೆ.ಪಿ.ಯವರು ವರ್ಣಿಸಿದ್ದಾರೆ.

ಅಪ್ಪಾದೊರೆಯ ಪ್ರಕಾರ "ಗ್ರಾಮ ಪಂಚಾಯತಿ ಮತ್ತು ಗ್ರಾಮ ನಿರ್ದೇಶನ ಸಂಸ್ಥೆಗಳು ಇವೆಲ್ಲವೂ ಸಾಮಾಜಿಕ ಸುಭದ್ರತೆಗೆ ಅತಿ ಕಡಿಮೆ ವೆಚ್ಚದಲ್ಲಿ ನಡೆಸಲ್ಪಡುವಂತಹ ಸಂಸ್ಥೆಗಳಾಗಿವೆ. ಇದರಿಂದ ಹಳ್ಳಿಯವರೂ ಕೂಡ ಸಂಸ್ಥೆಯ ಪ್ರತಿನಿಧಿಯಾಗಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳ ಬಹುದು. ಇದಕ್ಕಾಗಿ ತ್ಯಾಗ ನಿಷ್ಠೆ ಇರಬೇಕು. ಮನುಷ್ಯನು ಪ್ರಕೃತಿಯ ಸೂಕ್ಷ್ಮ ಸ್ಪಂದನೆಯಲ್ಲಿ ಕೆಲಸ ಮಾಡಬೇಕು. ವ್ಯಕ್ತಿಯು ತನ್ನ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಪರಿಮಿತಿಗೊಳಿಸಿ ಹೊಸ ಸಾಮಾಜಿಕ

ಪರಿಸರವನ್ನುಂಟುಮಾಡಿದ್ದೇ ಆದರೆ ಅಸಮಾನತೆಯನ್ನು ತೆಗೆದುಹಾಕಬಹುದು. ಆಗ ಸರ್ವೋದಯ ಸಮಾಜವನ್ನು ಎಲ್ಲೆಡೆಯಲ್ಲಿಯೂ ಕಟ್ಟಬಹುದು ".

ಸಮಗ್ರ ಸೂತ್ರ ತತ್ವದಲ್ಲಿ ಅಚೇತಬಾರಿಯಾದ ಮತ್ತು ಯಾಂತ್ರಿಕವಾದ ಕಲ್ಪನೆ ಇದೆ. ಡಸ್ತೋವಿಸ್ಕಿಯ ಪ್ರಕಾರ " ಸರ್ವೋದಯವು ಭಾವನಾತ್ಮಕವಾದಂತಹ ಮತ್ತು ಚೇತೋಹಾರಿಯಾದಂತಹ, ಸಾಧಿಸಲು ಕಷ್ಟವಾದಂತಹ ಕಲ್ಪನೆಯುಳ್ಳದ್ದಾಗಿದೆ. ಈ ಕಲ್ಪನೆಯು ವಾಸ್ತವಕ್ಕೆ ಬರಬೇಕಾದರೆ ಮನುಷ್ಯರಿಗೆ ರೆಕ್ಕೆಬರಬೇಕು. ಮನುಷ್ಯರು ದೇವತೆಗಳಾಗಬೇಕು " *(The Diary of a Writer,* translated by Boris Brasol)

ವಾಸ್ತವವಾಗಿ ಆದರ್ಶಗಳು ವಾಸ್ತವತೆಗೆ ಬರುವುದು ಕಷ್ಟ. ಆದರೆ ಸರ್ವೋದಯದ ಮಹತ್ವವನ್ನು ಇಲ್ಲಿ ಕಾಣಬಹುದು. ಅಪ್ಪಾ ದೊರೆಯವರ ಪ್ರಕಾರ " ಒಂದುವೇಳೆ ಸರ್ವೋದಯ ತತ್ವವು ಸ್ವೀಕಾರಯೋಗ್ಯವಾಗದಿದ್ದರೆ ಕೊನೆಯಪಕ್ಷ ಒಂದು ಹೊಸ ಮಾಧ್ಯಮವನ್ನಾದರೂ ಹುಡುಕಿಕೊಳ್ಳಲು ಸಹಾಯ ಮಾಡುತ್ತದೆ " ಸ್ವಾರ್ಥಶಕ್ತಿಯು ತನ್ನ ಶಕ್ತಿಯನ್ನು ಕಳೆದುಕೊಳ್ಳಬೇಕು. ವಿಕೇಂದ್ರೀಕರಣವನ್ನು ಅನುಸರಿಸಬೇಕು. ಆರ್ಥಿಕ ಅಸಮಾನತೆಯನ್ನು ಕಡಿಮೆಗೊಳಿಸಬೇಕು. ವ್ಯಕ್ತಿಯನ್ನು ಸರಕಾರ ರಚನೆಯಲ್ಲಿ ತೀರ್ಪುಕೊಡುವುದರಲ್ಲಿ ಎಲ್ಲಾ ಹಂತಗಳಲ್ಲೂ ಕ್ರಿಯಾತ್ಮಕ ಪಾತ್ರವಹಿಸುವಂತೆ ಮಾಡಬೇಕು. ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಸರ್ವೋದಯ ಮತ್ತು ಸಮಗ್ರಸೂತ್ರ ಇವೆರಡರ ನಡುವೆ ದಾರಿಯನ್ನು ಹುಡುಕಿಕೊಳ್ಳಬೇಕು. ಇನ್ನೂ ಹೆಚ್ಚಾಗಿ ಹೇಳಬೇಕೆಂದರೆ ಪ್ಲೇಟೋನ ತತ್ವವಾದ " ಸಂತೋಷಕ್ಕಿರುವಂತಹ ದಾರಿಯನ್ನು ಹುಡುಕಬೇಕು ".

ಸರ್ವೋದಯವು ಜನತೆಯಲ್ಲಿರುವ ಅಜ್ಞಾನ, ನಿರುತ್ಸಾಹ, ದುಃಖ, ಸೋಮಾರಿತನ, ಬಡತನ ಇವುಗಳ ಮೂಲ ನಾಶಕ್ಕೆ ಜೀವನದ ಮಾರ್ಗವನ್ನು ಕಂಡು ಹಿಡಿದು ಅದರ ಮೂಲಕ ಸಮಾಜದ ಏಳಿಗೆಯನ್ನು ಸಾಧಿಸಲು ಹೊರಟಿತು. ಈ ಏಳಿಗೆಯನ್ನು ಸಾಧಿಸಲು ಹಲವು ಮುಖ್ಯ ಅಂಶಗಳನ್ನು ಸತ್ಯ, ಅಹಿಂಸೆ ಮತ್ತು ತಾಳ್ಮೆಯ ಆಧಾರದ ಮೇಲೆ ಇಟ್ಟುಕೊಳ್ಳಲಾಗಿದೆ:

೧. ಭಾರತೀಯ ಸೌಹಾರ್ದ: ಭಿನ್ನ ಭಿನ್ನ ಜಾತಿ, ಮತ, ಧರ್ಮದ ಜನರು ಪರಸ್ಪರ ಸಹೋದರರಂತೆ ಪ್ರೇಮಾದರದಿಂದ ವರ್ತಿಸುವುದು.
೨. ಅಸ್ಪೃಶ್ಯತಾ ನಿವಾರಣೆ.
೩. ಶ್ರೀಮಂತ-ಬಡವ ಎಂಬ ವರ್ಗಭೇಧವನ್ನು ಕಿತ್ತು ಹಾಕುವುದು.
೪. ಮಧ್ಯಪಾನ ನಿರೋಧ.
೫. ಖಾದಿ ಮತ್ತು ಇತರ ಗ್ರಾಮೋದ್ಯೋಗ ಕೈಗಾರಿಕೆ ಹೆಚ್ಚಿಸುವುದು.
೬. ಗ್ರಾಮಸ್ವಚ್ಛತೆ.
೭. ಮೂಲ ಶಿಕ್ಷಣ.
೮. ಸ್ತ್ರೀ-ಪುರುಷರ ಸಮಾನತೆ.
೯. ಆರೋಗ್ಯ ರಕ್ಷಣೆ.
೧೦. ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ.
೧೧. ಪ್ರಾಂತೀಯ ಭಾವನೆಯನ್ನು ಕಿತ್ತೊಗೆಯುವುದು.
೧೨. ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡುವುದು.
೧೩. ಆರ್ಥಿಕ ಸಮಾನತೆಯನ್ನು ಸಾಧಿಸುವುದು.
೧೪. ಕೃಷಿ-ಗೋರಕ್ಷಣೆಯ ಅಭಿವೃದ್ಧಿ ಪಡಿಸುವುದು.
೧೫. ಶ್ರಮ ಜೀವಿಗಳ ಸಂಘಟನೆ ಮಾಡುವುದು.
೧೬. ಆದಿವಾಸಿಗಳು ಮತ್ತು ಇತರ ಗುಡ್ಡಗಾಡು ಜನರ ಏಳಿಗೆ ಮಾಡುವುದು,
೧೭. ಯುವಕರನ್ನು ಸಂಘಟನೆ ಮಾಡುವುದು.
೧೮. ಕುಷ್ಟರೋಗಿಗಳನ್ನು ರಕ್ಷಣೆ ಮಾಡುವುದು.

೧೯. ನಿಸರ್ಗ ಚಿಕಿತ್ಸೆಯಿಂದ ರೋಗ ನಿವಾರಣೆ ಮಾಡಿಕೊಳ್ಳುವುದು.

೨೦. ಅಂಟುರೋಗಗಳು ಹರಡುವಿಕೆ, ಬರಗಾಲ, ಪ್ರವಾಹ ಮೊದಲಾದ ಆಪತ್ತುಗಳೊದಗಿದಾಗ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.

ಸರ್ವೋದಯ ಒಂದು ತಾರಕ ಮಂತ್ರವಾಗಿದೆ. ಇದರ ಗುಣಗಳು ಹೀಗಿವೆ:

೧ ಸರ್ವೋದಯವು ಅಹಿಂಸಾತ್ಮಕ ಸಾಧನಗಳಲ್ಲಿ ವಿಶ್ವಾಸವುಳ್ಳದ್ದಾಗಿದೆ. ಯಾರಮೇಲೂ ಒತ್ತಾಯ ಹಿಂಸೆ ನಡೆಸುವುದಿಲ್ಲ. ಒಬ್ಬ ವ್ಯಕ್ತಿ ಸ್ವಸಂತೋಷದಿಂದ ಆತ್ಮಸಾಕ್ಷಿಯಿಂದ ಪರಿವರ್ತನೆ ಹೊಂದಲು ಅವಕಾಶಗಳನ್ನು ಕೊಡಲಾಗುತ್ತದೆ.

೨. ಇದು ಸಾಧನಗಳ ಪವಿತ್ರತೆಯ ಬಗ್ಗೆ ಬಹಳ ಜಾಗರೂಕವಾಗಿರುತ್ತದೆ. ನಮ್ಮ ಧ್ಯೇಯಗಳು ಎಷ್ಟು ಉದಾತ್ತ ಹಾಗೂ ಪವಿತ್ರವಾಗಿರುವುವೋ ಅಷ್ಟೇ ನಮ್ಮ ಸಾಧನಗಳೂ ಉದಾತ್ತ ಹಾಗೂ ಪವಿತ್ರವಾಗಿರಲೇಬೇಕೆಂದು ಇದು ಹೇಳುತ್ತದೆ. ಸಾಧನಗಳ ಪವಿತ್ರತೆಗೆ ಬಹಳ ಮಹತ್ವದ ಸ್ಥಾನವಿದೆ. ಅನ್ಯಾಯದ ಮಾರ್ಗಗಳಿಂದ, ಅನೈತಿಕ ಮಾರ್ಗಗಳಿಂದ, ಹಿಂಸೆಯ ಮಾರ್ಗಗಳಿಂದ ಸರ್ವೋದಯದ ಗುರಿಯನ್ನು ಸಾಧಿಸಲಾಗುವುದಿಲ್ಲ.

೩. ಸರ್ವೋದಯ ವ್ಯಕ್ತಿಸ್ವಾತಂತ್ರ್ಯದ ಬಗ್ಗೆ ವಿಚಾರಮಾಡುತ್ತದೆ. ವ್ಯಕ್ತಿಯು ರಾಷ್ಟ್ರಕ್ಕಾಗಿ ತ್ಯಾಗಮಾಡಬೇಕೆಂದು ತಿಳಿಸುತ್ತದೆ. ಆದರೆ ಇಂದಿನ ಯುಗದಲ್ಲಿ ವ್ಯಕ್ತಿ ಸ್ವಾತಂತ್ರ್ಯವು ಹತ್ತಿಕ್ಕಲ್ಪಟ್ಟಿದೆ. ರಾಷ್ಟ್ರಕ್ಕಾಗಿ ವ್ಯಕ್ತಿ ಎಂಬ ವಿಚಾರ ಪ್ರಣಾಲಿಯು ಈಗ ಪ್ರಬಲವಾಗಿದೆ. ರಾಷ್ಟ್ರದ ಹಿತಕ್ಕಾಗಿ ವ್ಯಕ್ತಿಯನ್ನು ಬಲಿಕೊಡಲಾಗುತ್ತಿದೆ, ಇದರಿಂದ ಸರ್ವಾಧಿಕಾರಿ ರಾಷ್ಟ್ರಗಳು ಉದಯಿಸಿ ವ್ಯಕ್ತಿಗಳನ್ನು ನಿರ್ಭಯವಾಗಿ ಬಲಿಕೊಟ್ಟಿದ್ದಾರೆ ಹಾಗೂ ಬಲಿಕೊಡುತ್ತಿದ್ದಾರೆ. ಜರ್ಮನಿ, ಜಪಾನ್ ದೇಶಗಳು ಹಿಂದೆ ಉದಾಹರಣೆಯಾಗಿದ್ದವು. ಈಗ ಇರಾನ್ ದೇಶವು ಉದಾಹರಣೆಯಾಗಿದೆ. ಇರಾನಿನಲ್ಲಿ ನಡೆಯುವಂತಹ ವ್ಯಕ್ತಿ ಕಗ್ಗೊಲೆಯನ್ನು ಸರ್ವೋದಯ ಖಂಡಿಸುತ್ತದೆ. ಪ್ರಜಾಪ್ರಭುತ್ವದಲ್ಲಿಯೂ ಕೂಡ ವ್ಯಕ್ತಿಗೆ ಮತಾಧಿಕಾರ ವಿದ್ದರೂ ಬಹುಮತದ ಒಲುಮೆಗೆ ವ್ಯಕ್ತಿ ಸ್ವಾತಂತ್ರ್ಯವು ಬಲಿಯಾಗುತ್ತದೆ. ಆರ್ಥಿಕ ರಂಗದಲ್ಲಿ ಸಮತಾವಾದ ಸಮಾಜಗಳು ತಲೆದೋರಿ ವ್ಯಕ್ತಿ ಸ್ವಾತಂತ್ರ್ಯವನ್ನು ಬಲಿಗೊಂಡಿವೆ. ಅಲ್ಲಿ ವ್ಯಕ್ತಿಯ ನಾಶವೆಂಬುದು ಸರ್ವಸಾಮಾನ್ಯವಾದ ನಿಯಮವಾಗಿದೆ.

೪. ಪ್ರಜಾಪ್ರಭುತ್ವ ರಾಜ್ಯಪದ್ಧತಿಗಳಲ್ಲಿ ಔದ್ಯೋಗೀಕರಣದ ಫಲವಾದ ವ್ಯಕ್ತಿಯು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾನೆ. ಇಂದಿನದೆಲ್ಲ ದೊಡ್ಡ ಪ್ರಮಾಣದ ಉತ್ಪಾದನೆಯ ಯುಗವಾಗಿದೆ. ಈ ಉತ್ಪಾದನೆಯ ಯಾಂತ್ರೀಕರಣವೇ ಸಾಧನೆ. ಇದಕ್ಕೆ ಮಾನವ ಒಂದು ಯಂತ್ರವಾಗಿದ್ದಾನೆ. ಯಂತ್ರದ ಮೊಳೆಯಾಗಿದ್ದಾನೆ. ಸರ್ವೋದಯದ ಪ್ರಕಾರ ಇಲ್ಲಿ ವ್ಯಕ್ತಿಯು ತನ್ನ ಆತ್ಮವನ್ನು ಕಳೆದುಕೊಂಡಂತಾಗಿದೆ. ಹೀಗೆ ತನ್ನ ಆತ್ಮವನ್ನು ಕಳೆದುಕೊಂಡ ನಂತರ ಇಂದಿನ ಮಾನವನಲ್ಲಿ ಆತ್ಮಜಾಗೃತಿಯನ್ನು ಮೂಡಿಸಿ ವ್ಯಕ್ತಿ ಸ್ವಾತಂತ್ರ್ಯವನ್ನು ಒದಗಿಸಿಕೊಡುವ ಒಂದೇಒಂದು ಸಾಮಾಜಿಕ ವ್ಯವಸ್ಥೆ ಎಂದರೆ ಸರ್ವೋದಯವಾಗಿದೆ.

೫. ಉತ್ಪಾದನೆಯ ವಿಕೇಂದ್ರೀಕರಣದಿಂದ ದೊಡ್ಡ ದೊಡ್ಡ ಕಾರ್ಖಾನೆಗಳು ತಲೆದೋರಿವೆ. ಇದರಲ್ಲಿ ದುಡಿಯುವವರೆಲ್ಲ ಶೋಷಣೆಗೆ ಒಳಗಾಗಿದ್ದಾರೆ. ಪಟ್ಟಣಗಳು ತಲೆ ಎತ್ತಿವೆ. ಜೀವನ ಯಾಂತ್ರಿಕವಾಗಿದೆ. ಉತ್ಪಾದಿಸಿದ ವಸ್ತುಗಳನ್ನು ವಿತರಣೆಗೊಳಿಸಲು ಅನಭಿವೃದ್ಧಿ ದೇಶಗಳನ್ನು ವಸಾಹತುಗಳನ್ನಾಗಿ ಆಕ್ರಮಿಸಬೇಕಾಗುತ್ತದೆ. ಸರಕುಗಳಿಗೆ ಪೇಟೆಗಳನ್ನು ದೊರಕಿಸುವುದಕ್ಕಾಗಿ ರಾಷ್ಟ್ರಗಳಲ್ಲಿ ಸ್ಪರ್ಧೆ ನಡೆದು ಜಾಗತಿಕ ಯುದ್ಧವು ತಲೆದೋರುತ್ತದೆ. ಹೀಗಾಗಿ ವಿಕೇಂದ್ರೀಕೃತ ಉತ್ಪಾದನೆಯಿಂದ ಮತ್ತು ಯಾಂತ್ರೀಕರಣದಿಂದ ಇಂದಿನ ಜಗತ್ತಿನಲ್ಲಿಯ ಮುಖ್ಯವಾದ ಸಾಮಾಜಿಕ, ರಾಜಕೀಯ ಆರ್ಥಿಕ ತೊಡಕುಗಳೆಲ್ಲ ಉಂಟಾಗಿದೆ.

೬. ಸರ್ವೋದಯವು ನೈತಿಕ ಮೌಲ್ಯಗಳನ್ನು ಮಾನವೀಯ ಮೌಲ್ಯಗಳನ್ನು ಮನ್ನಿಸುತ್ತದೆ. ಆದುದರಿಂದ ಅದು ಶೋಷಣರಹಿತವಾಗಿದೆ. ಆರ್ಥಿಕ ಹಾಗೂ ರಾಜಕೀಯ ಅಧಿಕಾರದ

ವಿಕೇಂದ್ರೀಕರಣವನ್ನು ಸಾಧಿಸುವುದೇ ಸರ್ವೋದಯದ ಮೊದಲನೆಯ ಕೆಲಸವಾಗಿದೆ. ಇದಕ್ಕಾಗಿ ಸತ್ಯ, ಅಹಿಂಸೆಗಳ ಮಾರ್ಗವನ್ನು ಹಿಡಿದು ಹೊರಟಿದೆ.

೭. ಸರ್ವೋದಯದ ಗುರಿಯು ವಿಶ್ವಮಾನವತೆಯಾಗಿದೆ. ವಿಶ್ವಮಾನವತೆಯು ಆಧ್ಯಾತ್ಮಿಕ ಸಿದ್ಧಿಯಾಗಿದೆ. ಆದುದರಿಂದ ಸರ್ವೋದಯದ ಆದರ್ಶವು ಆಧ್ಯಾತ್ಮಿಕವಾಗಿದೆ. ಹೀಗೆ ಮತ, ಪಂಥ, ಧರ್ಮ, ಜಾತಿ, ಕಾಲಗಳಿಗೆ ಅತೀತನಾದ ವಿಶ್ವಮಾನವನನ್ನು ನಿರ್ಮಿಸುವುದೇ ಸರ್ವೋದಯದ ಮುಖ್ಯ ಗುರಿಯಾಗಿದೆ.

ಸರ್ವೋದಯವು ಈ ಎಲ್ಲಾ ಗುರಿಗಳನ್ನು, ಲಕ್ಷಣಗಳನ್ನು, ಗುಣಗಳನ್ನು ಹೊಂದಿದ್ದರೂ ಇದರ ಫಲಿತಾಂಶದ ಕಡೆಗಮನ ಹರಿಸಿದಾಗ ನಮಗೆ ಶೂನ್ಯವೆಂದು ಗೋಚರಿಸುತ್ತದೆ ಎಂಬುದು ತಿಳಿಯುತ್ತದೆ. ಹಾಗಾದರೆ ಇದು ಕೇವಲ ಕಲ್ಪನೆಯೇ ಅಥವಾ ಪ್ರಾಯೋಗಿಕವೇ ಎಂಬುದನ್ನು ತಿಳಿಯುವುದೇ ಈ ಲೇಖನದ ಉದ್ದೇಶವಾಗಿದೆ. ಎಲ್ಲಾ ದೃಷ್ಟಿಯಲ್ಲೂ, ಸರ್ವೋದಯವನ್ನು ಸಂಕರ್ಷಿಸಿ ನೋಡಿದಾಗ ಗಾಂಧೀಜಿಯವರು ಸರ್ವೋದಯದ ಬಗ್ಗೆ ಕಂಡಿದ್ದ ಕನಸು ಕನಸಾಗಿಯೇ ಉಳಿದು ಇದು ಕೇವಲ ಒಂದು ಕಲ್ಪನೆ ಎಂಬ ದೃಷ್ಟಿ ಕಂಡುಬರುತ್ತದೆ ಸರ್ವೋದಯ ಹಾಕಿಕೊಂಡಿರುವ ಗುರಿಗಳು, ಲಕ್ಷಣಗಳು ಹಾಗೂ ಉದ್ದೇಶಗಳ ರೀತಿಯಲ್ಲಿ ಜನಗಳ ಪುರಸ್ಕಾರ ಸಿಕ್ಕಿದರೆ ಸರ್ವೋದಯವೆಂಬ ಒಂದು ಸಮಾಜ ವಿಶ್ವಮಾನ್ಯತೆಯನ್ನು ಪಡೆದ ರಾಮರಾಜ್ಯವನ್ನು ಈ ದೇಶದಲ್ಲಿ ಸ್ಥಾಪಿಸಬಹುದಿತ್ತು. ಆದರ ಹಲವು ಹಿಂಬಾಲಕರು ಸರ್ವೋದಯ ಸಮಾಜವನ್ನು ಕಟ್ಟಲು ತುಂಬಾ ಶ್ರಮಿಸಿದರು. ಅದು ಕೈಗೆ ಎಟುಕದ ವಸ್ತುವಾದದ್ದರಿಂದ ಇದು ನಮ್ಮ ಕೈಯಲ್ಲಿ ಇನ್ನೂ ಸಾಧ್ಯವಿಲ್ಲವೆಂದು ತಿಳಿದು ಅದರ ಸದಸ್ಯತ್ವದಿಂದ ಕಳಚಿಕೊಂಡರು.

ಈ ಕೆಳಕಂಡ ಕಾರಣಗಳನ್ನು ಗಮನಿಸಿದಾಗ ಸರ್ವೋದಯ ಒಂದು ಕಲ್ಪನೆಯಾಗಿಯೇ ಅಥವಾ ಪ್ರಾಯೋಗಿಕವಾಗಿಯೇ ಉಳಿಯಿತು ಎಂಬುದು ತಿಳಿಯುತ್ತದೆ.

ಆಧುನಿಕ ಯುಗದಲ್ಲಿ ಮುಂದುವರಿದ ರಾಷ್ಟ್ರಗಳು ಹಳೇ ತತ್ವಗಳನ್ನು ಬದಿಗೊತ್ತಿವೆ. ತಮ್ಮದೇ ಆದ ತತ್ವಗಳನ್ನು ರೂಪಿಸಿಕೊಂಡಿವೆ. ಅವು ಸಹ ತಮ್ಮ ರಾಜಕೀಯ ಪಕ್ಷದ ತತ್ವಗಳಾಗಿವೆ. ರಷ್ಯಾ ದೇಶವು ಕಮ್ಯೂನಿಸಮ್ಮನ್ನು, ಚೀನಾದೇಶವು ಮಾವೋನ ಕಮ್ಯುನಿಸಮ್ಮನ್ನು ಅನುಸರಿಸಿ ಹೆಚ್ಚಿನ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಿದವು. ಆದರೂ ಕೂಡ ಚೀನಾದೇಶದಲ್ಲಿ ಈ ದಿನ ಮಾವೋನ ಕಮ್ಯುನಿಸಮ್ಮನ್ನು ಸಹ ಬದಿಗೆ ತಳ್ಳಲಾಗುತ್ತಿದೆ. ಜರ್ಮನಿಯಲ್ಲಿ ನಾಝಿಸಂ, ಇಟಲಿಯಲ್ಲಿ ಫ್ಯಾಸಿಸಂ ತತ್ವಗಳು ಎರಡನೇ ಮಹಾಯುದ್ಧದ ವೇಳೆಗೆ ಪ್ರಗತಿಯನ್ನುಂಟುಮಾಡಿದವು. ಇದನ್ನು ಮನಗಂಡ ಪ್ರಜಾಪ್ರಭುತ್ವ ರಾಷ್ಟ್ರಗಳು ಅದರಲ್ಲೂ ಭಾರತವು ಸಹ ಪೌರ್ವಾತ್ಯರಾಷ್ಟ್ರಗಳ ಹಾದಿಯಲ್ಲಿ ನಡೆಯಲು ಹೊರಟಿದೆ. ವೈಜ್ಞಾನಿಕ ಕ್ಷೇತ್ರವನ್ನು ವಿಶಾಲವಾಗಿ ಬೆಳೆಸುತ್ತಿದೆ. ಈ ಶತಮಾನದ ಕೊನೆಯವರೆಗೆ ವೈಜ್ಞಾನಿಕ ಪ್ರಯೋಗದ ಫಲವಾದ ಅಣುಬಾಂಬಿಗೂ ಮತ್ತು ಗಾಂಧೀಜಿಯವರ ಅಹಿಂಸಾ ಸಾಧನಗಳಿಗೂ ನಡುವೆ ನೇರ ಸ್ಪರ್ಧೆ ನಡೆಯಲಿದೆ. ಇಷ್ಟು ಪ್ರಗತಿಯನ್ನು ಸಾಧಿಸಿದ್ದರೂ ಸಹ ಭಾರತ ಮುಂದುವರಿಯಲು ಸಾಧ್ಯವಾಗುತ್ತಿಲ್ಲ.

ಭಾರತವು ಜಾತ್ಯಾತೀತ ರಾಷ್ಟ್ರವಾದರೂ ಸಹ ಜಾತೀಯತೆಯನ್ನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಸರ್ವೋದಯ ಸಮಾಜವು ಜಾತೀಯತೆಯನ್ನು ಖಂಡಿಸುತ್ತದೆ. ದಿನ ಬೆಳಗಾದರೆ ಸಹಸ್ರಾರು ಜಾತಿಗಳಿಂದ ಕೂಡಿರುವ ಭಾರತದಲ್ಲಿ ಕೋಮುವಾರು ಗಲಾಟೆಗಳು ನಡೆಯುತ್ತಿರುವುದರಿಂದ ಸರ್ವೋದಯಕ್ಕೆ ಮನ್ನಣೆ ದೊರೆಯುತ್ತಿಲ್ಲ.

ಸರ್ವೋದಯವು ರಾಜಕೀಯ ಪಕ್ಷಗಳ ಪೈಪೋಟಿಯ ಮೇಲೆ ರೂಪಿತವಾದ ಪ್ರಜಾಪ್ರಭುತ್ವದಲ್ಲಿ ಬಹುಮತದಿಂದ ಆಳುವುದನ್ನು ಖಂಡಿಸುತ್ತದೆ. ರಾಜಕೀಯ ಪಕ್ಷಗಳು ವಿಭಿನ್ನ ಸಿದ್ಧಾಂತಗಳನ್ನು ಬೋಧಿಸುವುದರಿಂದ ಸಮಾಜದಲ್ಲಿ ಗೊಂದಲವುಂಟಾಗುತ್ತದೆ ಮತ್ತು ನಾಗರೀಕರು ಸಹಜವಾದ ಸ್ವಾತಂತ್ರ್ಯವನ್ನು ಅನುಭವಿಸುವುದಿಲ್ಲವೆಂದು ತಿಳಿಸುತ್ತದೆ. ಇದನ್ನು ವಾಸ್ತವ ಸ್ಥಿತಿಗೆ ಹೋಲಿಸಿ

ನೋಡಿದರೂ ಇಂದು ಅಧಿಕಾರಕ್ಕಾಗಿ ಕಚ್ಚಾಡುತ್ತಿರುವುದನ್ನು ಕಾಣಬಹುದಾಗಿದೆ. ಸರ್ವೋದಯವು ಬಂಡವಾಳಶಾಹಿಗಳ, ಜಮೀನ್ದಾರರ, ಕಾರ್ಮಿಕರ ಮತ್ತು ಕೃಷಿ ಜೀವಿಗಳ ಮಧ್ಯೆ ಅಂತರವನ್ನು ಹೋಗಲಾಡಿಸಲು ಹೊರಟಿತು ಮತ್ತು ಬಂಡವಾಳಶಾಹಿಗಳ ಅತ್ಯಧಿಕ ಸಂಪಾದನೆಯನ್ನು ಖಂಡಿಸಿತು. ಇದರಿಂದ ಬಂಡವಾಳಶಾಹಿಗಳು, ಜಮೀನ್ದಾರರು ಸರ್ವೋದಯಕ್ಕೆ ಪ್ರೋತ್ಸಾಹ ನೀಡಲಿಲ್ಲ.

ಸರ್ವೋದಯವು ಒಂದೇ ಕಸುಬಿಗೆ ಪ್ರಾಧಾನ್ಯತೆ ನೀಡದೆ ವರ್ಷದ ಎಲ್ಲಾ ಕಾಲಗಳಲ್ಲಿಯೂ ಸಂಪಾದನೆ ಬರುವಂತೆ ಮಾಡಲು ಗೃಹಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕೆಂದು ಕೋರಿತು. ಆಹಾರೋತ್ಪಾದನೆಯು ವಿಕೇಂದ್ರೀಕರಣಕ್ಕೆ ಒಪ್ಪಿಗೆ ನೀಡಿತು.

ಸಹಕಾರ ಸಂಘಗಳ ಮೂಲಕ ಆಹಾರಧಾನ್ಯಗಳನ್ನು ಮಾರಾಟ ಮಾಡಬೇಕೆಂದು, ಪಂಚಾಯಿತಿ ರಾಜ್ಯಗಳಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕು ಹಾಗೂ ಜಾತೀಯತೆಯನ್ನು ಹೋಗಲಾಡಿಸಬೇಕು ಎಂದು ತಿಳಿಸಿತು. ಆದರೆ ಇವೆಲ್ಲಾ ಕೇವಲ ಕಲ್ಪನೆಗಳಾಗಿ ಕಂಡುಬಂದವು. ಅನಕ್ಷರಸ್ಥರು, ಸೋಮಾರಿಗಳಾದ ಜನರು ವರ್ಷವೆಲ್ಲವೂ ದುಡಿಯಲು ಇಷ್ಟಪಡಲಿಲ್ಲ. ಹಾಗೂ ಮೇಲಿನ ಹಾಗೂ ಮಧ್ಯಮವರ್ಗದ ಜನಗಳು ವಿಕೇಂದ್ರೀಕರಣಕ್ಕೆ ಒಪ್ಪಿಗೆ ನೀಡಲಿಲ್ಲ. ಮತ್ತು ಇದನ್ನು ಪ್ರಯೋಗಕ್ಕೆ ಅಳವಡಿಸಿಕೊಳ್ಳಲೇ ಇಲ್ಲ.

ಸರ್ವೋದಯವು ಶಾಂತಿ ಮತ್ತು ಅಹಿಂಸೆಗೆ ಪ್ರಧಾನ ಪಾತ್ರವನ್ನು ಕೊಟ್ಟು ಸತ್ಯದಿಂದ ರಾಷ್ಟ್ರದ ಒಗ್ಗಟ್ಟು ಸಾಧ್ಯವೆಂದು ಹೇಳಿ ಬಲಕ್ಕೆ ಹಾಗೂ ಶಕ್ತಿಗೆ ಪ್ರಾಧಾನ್ಯತೆ ಕೊಡಲಿಲ್ಲ. ಮಾನವನು ಜೀವಿಸಲು ಆಹಾರ, ಬಟ್ಟೆ, ಅವಶ್ಯಕವಿರುವಷ್ಟು ಮನೆ ಸಾಕು ಎಂದು ಹೇಳಿತು. ಆದರೆ ಸರ್ವಾಧಿಕಾರದಿಂದ ಪ್ರೇರಿತರಾದ ಹಲವು ಜನರು ಸತ್ಯ ಮತ್ತು ಅಹಿಂಸೆಗೆ ಬೆಲೆ ಕೊಡಲಿಲ್ಲ. ಶ್ರೀಮಂತ ಜನಗಳು ನಿಗದಿಯಾದ ಜೀವನವನ್ನು ಸಾಗಿಸಲು ಒಪ್ಪಲಿಲ್ಲ.

ಸರ್ವೋದಯವು ವಿಜ್ಞಾನ ಮತ್ತು ತಾಂತ್ರಿಕತೆಯ ವಿರುದ್ಧವಾಗಿರಲಿಲ್ಲ. ಮಾನವನು ವಿಜ್ಞಾನದ ಅಧೀನನಾಗಬಾರದು, ವಿಜ್ಞಾನ ಮಾನವನಿಗೆ ಸೇವೆ ಮಾಡಬೇಕೆಂದು ತಿಳಿಸಿತು. ಯುದ್ಧಗಳನ್ನು ಮಾಡುವಾಗ ಅಹಿಂಸಾಮಾರ್ಗವನ್ನು ಅನುಸರಿಸಬೇಕು, ಆಯುಧಗಳನ್ನು ಉಪಯೋಗಿಸಬಾರದು ಎಂದು ಹೇಳಿತು. ವಿಜ್ಞಾನವು ಮಾನವನ ಸಾಮಾಜಿಕ ಜೀವನದ ಮೇಲೆ ಅತ್ಯಂತ ಪ್ರಭಾವ ಬೀರಿರುವ ಈ ದಿನಗಳಲ್ಲಿ, ಆರ್ಥಿಕತೆಯಲ್ಲಿ ಸ್ವಾವಲಂಬಿಗಳಾಗದಿದ್ದರೂ ಚಿಕ್ಕ ಚಿಕ್ಕ ರಾಷ್ಟ್ರಗಳು ಅಣುಬಾಂಬನ್ನು ತಯಾರುಮಾಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಅಹಿಂಸೆ ಮತ್ತು ಸತ್ಯವನ್ನು ಅನುಸರಿಸುವುದಾದರೂ ಹೇಗೆ ? ವಿಜ್ಞಾನದ ಸಹಾಯವನ್ನೂ ಪಡೆಯದಿದ್ದರೆ ಉಳಿಯುವ ರೀತಿ ಯಾವುದು ? ಈ ಮುಂತಾದ ಪ್ರಶ್ನೆಗಳು ಜನರ ಮನಸ್ಸಿನಲ್ಲಿ ಸುಳಿದು ಸರ್ವೋದಯದ ತತ್ವಗಳಿಗೆ ಪ್ರೋತ್ಸಾಹ ಸಿಗಲಿಲ್ಲ.

ಸರ್ವೋದಯವು ಸರಕಾರಿ ನೌಕರರು ಅಥವಾ ಇತರೇ ಜನರು ರಜಾದಿನಗಳಲ್ಲಿ ವಿಶೇಷ ರಜಾ ದಿನಗಳಲ್ಲಿ ಅತ್ಯಧಿಕ ಉತ್ಪಾದನೆಯನ್ನು ಸಂಪಾದಿಸಬೇಕೆಂದು ಹೇಳಿತು. ಆ ದಿನಗಳಲ್ಲಿ ಕಾಲವನ್ನು ಕಳೆಯಬಾರದೆಂದು ಸಹ ತಿಳಿಸಿತು. ಹಬ್ಬ, ಹರಿದಿನಗಳಿಗೆ, ರಾಷ್ಟ್ರನಾಯಕರ ಸ್ಮರಣೆಗೆ, ಇತರ ಕಾರಣಗಳಿಗೆ ರಜಾದಿನಗಳನ್ನು ಕೊಟ್ಟರೆ ಆ ದಿನಗಳನ್ನು ಇಂದು ಮನರಂಜನಾ ದಿನಗಳೆಂದು ತಿಳಿದು ಕಾಲ ಕಳೆಯಲಾಗುತ್ತಿದೆ. ಇದರಿಂದ ರಾಷ್ಟ್ರಕ್ಕೆ ಅತ್ಯಧಿಕ ನಷ್ಟವಾಗುತ್ತಿದೆ. ಆದರೆ B.A.R.C. ಯ ಹೋಮಿ ಜೆ ಬಾಬಾರವರು ವಿಮಾನ ಅಪಘಾತಕ್ಕೀಡಾದಾಗ ಆ ದಿನಗಳಲ್ಲಿ ಸಂಸ್ಥೆಗೆ ರಜಾ ಕೊಟ್ಟಾಗ ಅಲ್ಲಿನ ನೌಕರರೆಲ್ಲರೂ ರಜಾ ತೆಗೆದುಕೊಳ್ಳದೆ ಅವರ ನೆನಪಿಗಾಗಿ ಆ ದಿನ ಉಳಿದ ದಿನಗಳಿಗಿಂತ ಹೆಚ್ಚು ಕಾಲ ಕೆಲಸ ಮಾಡಿದರು. ಇಂತಹದನ್ನು ಮಾತ್ರ ಸರ್ವೋದಯ ಪ್ರೋತ್ಸಾಹಿಸುತ್ತದೆ. ಆದರೆ ಇದಕ್ಕೆ ಬೆಂಬಲವೆಲ್ಲಿದೆ?

ಈ ರೀತಿಯ ಹಲವಾರು ಕಾರಣಗಳಿಂದ ಸರ್ವೋದಯ ತನ್ನ ಗುರಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಕಾರಣಗಳನ್ನು ಕೊಡುತ್ತಾ ಹೋದಂತೆಲ್ಲಾ ಸರ್ವೋದಯ ತನ್ನ ತಿರುಳನ್ನೆ ಕಳೆದುಕೊಂಡಿದೆ ಎಂಬ ರೀತಿಯಲ್ಲಿ ತಿಳಿಯುತ್ತದೆ. ಇದರ ಅಯಶಸ್ಸಿಗೆ ನಾವೇ ಕಾರಣವೆಂದು ಮತ್ತೊಮ್ಮೆ ತಿಳಿಸ

ಬೇಕಾಗಿದೆ. ಇಂದು ಜನತೆ ಸರ್ವೋದಯವೆಂದರೆ ಒಂದು ರಾಜಕೀಯ ಆರ್ಥಿಕ ಚಳುವಳಿಯೆಂದು ತಿಳಿದಿದೆ. ಹಲವು ಜನರು ವೈಯಕ್ತಿಕ ಲಾಭದ ಆಸೆಯಿಂದ ಹಾಗೂ ಅನೇಕ ಮಹತ್ವಾಕಾಂಕ್ಷೆಯಿಂದ ಸರ್ವೋದಯದ ಅನುಯಾಯಿಗಳಾಗಿದ್ದರು. ಆದರೆ ಅವರ ಆಸೆಗಳು ಈಡೇರದಿದ್ದಾಗ ಸರ್ವೋದಯ ವನ್ನು ಬಿಟ್ಟು ಅಧಿಕಾರ ಸಿಗುವ ಕಡೆ ವಲಸೆ ಹೋಗುವಂತೆ ಹೊರಟರು.

ಒಟ್ಟಿನಲ್ಲಿ ಸರ್ವೋದಯದ ಲಕ್ಷಣಗಳು, ಗುರಿಗಳು ಆದರ್ಶವಾದಂತಹವು, ಎಲ್ಲರೂ ಒಪ್ಪಿ ಕೊಳ್ಳುವಂತಹವು. ಇವುಗಳನ್ನು ಯಶಸ್ವಿಯಾಗಿ ಸಾಧಿಸಿದರೆ ಭಾರತವು ಮತ್ತೊಮ್ಮೆ ರಾಮರಾಜ್ಯ (ಸುಖೀರಾಜ್ಯ) ವಾಗುವುದರಲ್ಲಿ ಸಂದೇಹವಿಲ್ಲ. ಅತ್ಯಧಿಕ ಜನಸಂಖ್ಯೆಯುಳ್ಳ, ಬಡತನ ವ್ಯಾಪಿಸಿರುವ, ಜಾತೀಯತೆ ಬೇರೂರಿರುವ, ಅಧಿಕಾರಕ್ಕಾಗಿ ಕಚ್ಚಾಡುವ, ಸುಖಜೀವನವನ್ನು ಬಯಸುವ ಇಂತಹ ಪ್ರಜಾಪ್ರಭುತ್ವ ಸರಕಾರದಲ್ಲಿ ಅದರಲ್ಲೂ ಈ ವೈಜ್ಞಾನಿಕ ಶತಮಾನದಲ್ಲಿ ಸರ್ವೋದಯದ ಪ್ರಯೋಗ ಯಶಸ್ವಿಯಾಗಲಾರದು. ಅದೊಂದು ದೂರದ, ಮಾನವತೆಗೆ ಎಟುಕದ ಆದರ್ಶವೆನಿಸಬಹುದು. ಇನ್ನೂ ಕೆಲವುದಿನಗಳು ಕಳೆದರೆ ಸರ್ವೋದಯವೆಂಬ ಪದ ಜನರ ಬಾಯಿಯಲ್ಲಿ ಬರುವುದು ಅಪರೂಪ ವಾಗಬಹುದು. ಅಂತೂ ಅದು ನಮ್ಮ ಕೈಗೆ ಎಟುಕದ ಒಂದು ವಸ್ತುವಾಗಿದೆ. ನಾನು ಮತ್ತು ಅಧಿಕಾರ ಎಂಬ ಈ ಎರಡು ಪದಗಳು ಹೋಗುವ ತನಕ ಸರ್ವೋದಯವಾಗಲಿ ಇತರ ಕಾರ್ಯಗಳಾಗಿ ಯಶಸ್ವಿಯಾಗಲು ಸಾಧ್ಯವಿಲ್ಲ.

ಅಭ್ಯಸಿತಗ್ರಂಥಗಳು

1. M. K. Gandhi: *India of My Dreams*
2. Ram K. Vepa: *New Technology, A Gandhian Concept*
3. *Planning for Sarvodya*
4. G. R. Pandeswara: *Sarvodaya Samaja*

ಸರ್ವೋದಯ ಮಾನವೀ ಮನದ ಲೋಭ, ಆಕ್ರಮಣ ಆದಿ ಪ್ರವೃತ್ತಿಗಳ ವಿರುದ್ಧ ಇದೆ. ಅಹಿಂಸೆಯ ಆಧಾರದ ಮೇಲೆ ನಿಂತಿದೆ.

ಪರಸ್ಪರರ ಹಿತಗಳಲ್ಲಿ ವಿರೋಧವಿರಲಾರದೆಂಬುದೇ ಸರ್ವೋದಯದ ಮೂಲಭೂತ ವಿಚಾರ. ನಮ್ಮ ಹಿತದಲ್ಲಿ ನಿಮ್ಮ ಹಿತವಿದೆ. ನಿಮ್ಮ ಹಿತದಲ್ಲಿ ನಮ್ಮ ಹಿತವಿದೆ. ನಮ್ಮಿಬ್ಬರ ಹಿತದಲ್ಲಿ ದೇಶದ ಹಿತವಿದೆ. ದೇಶ ಹಿತದಲ್ಲಿಯೇ ನಮ್ಮಿಬ್ಬರದೂ ಹಿತವಿದೆ. ದೇಶ ಹಿತಕ್ಕೂ ವಿಶ್ವಹಿತಕ್ಕೂ ವಿರೋಧ ಇಲ್ಲವೇ ಇಲ್ಲ. ಒಟ್ಟಿಗೆ ಸರ್ವೋದಯವು ಅವಿರೋಧಿಯಾಗಿರುತ್ತದೆ. ಇದೇ ಇದರ ಮೂಲಭೂತ ತತ್ತ್ವ . . . .

ಸರ್ವೋದಯ ಎಂದರೆ ಎಲ್ಲರ ಉದಯ. ಒಬ್ಬರ ಉದಯ ಮತ್ತೊಬ್ಬನ ಅಸ್ತ ಹೀಗಿಲ್ಲ. ಸರ್ವೋದಯ ಶಬ್ದ ಬಹಳ ಚೆಂದ. ಅದನ್ನು ಗಾಂಧೀಜಿಯೇ ಕಟ್ಟಿದರು. ಅದರಲ್ಲಿ 'ಸರ್ವಭೂತ ಹಿತೇರತಾಃ' ಇದರ ಕಲ್ಪನೆ ಇದೆ. . . . .

ಸಮಾಜದ ಪ್ರತಿಯೊಬ್ಬ ಸೇವಕನೂ ಸರ್ವತಂತ್ರ ಸ್ವತಂತ್ರ . . . . ಒಬ್ಬನೇ ಕೆಲಸಮಾಡ ಬಹುದು. ನಾಲ್ವರ ಜೊತೆ ಸೇರಿ ಮಾಡಬಹುದು. ಅಗತ್ಯವಾದರೆ ಸಂಘಟಿತ ಕೆಲಸವನ್ನು ಮಾಡ ಬಹುದು. ಸೇವಕ ಎಂದು ಅವನಿಗೆ ಯಾವ ಹಕ್ಕೂ ಇಲ್ಲ. ಕರ್ತವ್ಯ ಮಾತ್ರ ಗುಡ್ಡದಷ್ಟು ಇದೆ. ಆವನು ಮಾಡಬಾರದುದು ಒಂದೇ. ಸತ್ಯ ಅಹಿಂಸೆಗಳನ್ನು ಬಿಡಬಾರದು.

ಸರ್ವೋದಯದಲ್ಲಿ ಅಧಿಕಾರ ಮೋಹದ ಅದೂರದರ್ಶಿತ್ವದ ರಾಜಕೀಯ ಇಲ್ಲ. ಅಂಥ ರಾಜಕೀಯ ಸರ್ವೋದಯ ಕಾರ್ಯ ಅಲ್ಲವೇ ಅಲ್ಲ. ಅದು ಸ್ವಾರ್ಥ ಅಥವಾ ಸ್ವಶ್ರೇಯಾರ್ಥ . . . .

(' ವಿನೋಬಾ ವಿಚಾರಾಮೃತ ' (ಸಂ. ಕೆ. ನಾರಾಯಣಭಟ್ಟ) ಪುಸ್ತಕದಿಂದ ಉದ್ಧೃತ)

ಮೂಲ : ಶ್ರೀ ಪಿ. ವಿ. ಶರ್ಮ
ಅನುವಾದ : ಎನ್. ಎಸ್. ಶಾರದಾ ಪ್ರಸಾದ್

"ತುಳಸೀ" ಎಂಬ ಪದದ ಬಗ್ಗೆ*

"ತುಳಸೀ" ಎಂಬ ಪದವು ವೈದಿಕ ಸಂಹಿತೆಗಳು ಮತ್ತು ಬ್ರಾಹ್ಮಣಗಳಲ್ಲಾಗಲೀ ಇಲ್ಲವೇ 'ಚರಕ ಸಂಹಿತಾ', 'ಸುಶ್ರುತಸಂಹಿತಾ' ಮತ್ತು 'ಅಷ್ಟಾಂಗಹೃದಯ'ದಂಥ ಆಯುರ್ವೇದದ ಪ್ರಾಚೀನ ಕೃತಿಗಳಲ್ಲಾಗಲೀ ಕಂಡುಬರುವುದಿಲ್ಲ. ಆದರೂ ಸುರಸಾ ಅಥವಾ ಸುರಸ ಎಂಬುದನ್ನು ತುಳಸೀ ಎಂಬುದಾಗಿ ಅರ್ಥೈಸಲಾಗುವುದು. ಸುರಸಾ ಹಾಗೂ ಇತರ ಸಸ್ಯಔಷಧಗಳನ್ನು ಒಳಗೊಂಡಿರುವ ಸುರಸಾದಿ ಗಣವು 'ಸುಶ್ರುತಸಂಹಿತೆ'ಯಲ್ಲಿದೆ. ವ್ಯಾಖ್ಯಾಕಾರರು ಇದನ್ನು ತುಳಸಿ ಎಂದು ಅರ್ಥೈಸಿರುವರು. ಶ್ಲೋಕ ೩೨ ಅನ್ನು (ಅಷ್ಟಾಂಗಹೃದಯ. ಸೂ. ೧೫) ವಿವರಿಸುವಾಗ ಅರುಣದತ್ತನು (ಕ್ರಿ. ಶ. ೧೨ನೇ ಶತಮಾನ) "ಸುರಸಯುಗ" ಎಂದರೆ ಕೃಷ್ಣ ಹಾಗೂ ಶ್ವೇತ ಎಂಬ ತುಳಸಿಯ ಎರಡು ಬಗೆಗಳು ಎಂದಿರುವನು; ಡಲ್ಲಣನು ಸಹ (ಕ್ರಿ. ಶ. ೧೨ನೇ ಶತಮಾನ) ಸುರಸಾ ಎಂಬ (ಸುಶ್ರುತ, ಸೂ. ೩೮.೧೮) ಪದವನ್ನು ಅರ್ಥೈಸುವಾಗ ಇದನ್ನೇ ಹೇಳಿರುವನು. ಚಕ್ರಪಾಣಿ (ಕ್ರಿ. ಶ. ೧೧ನೇ ಶತಮಾನ) ಇದನ್ನು ತುಳಸೀ ಎಂದೇ ಅರ್ಥೈಸಿರುವನು. ಆಯುರ್ವೇದ ನಿಘಂಟುಗಳ ಪೈಕಿ ಮಾಧವನ (ಕ್ರಿ. ಶ. ೯ನೇ ಶತಮಾನ) 'ಪರ್ಯಾಯರತ್ನಮಾಲಾ'ದಲ್ಲಿ ಸುರಸಾಕ್ಕೆ ಸಮಾನಾರ್ಥಕವಾಗಿ ತುಳಸೀ ಎಂಬುದು ಮೊತ್ತಮೊದಲ ಬಾರಿಗೆ ಕಂಡುಬರುವುದು. ಅದೇರೀತಿ, 'ಧನ್ವಂತರಿ ನಿಘಂಟಿ'ನಲ್ಲಿ (ಕ್ರಿ. ಶ. ೧೦ನೇ ಶತಮಾನ) ಪ್ರಧಾನ ಶೀರ್ಷಿಕೆ ಸುರಸಾ ಎಂಬುದಾಗಿದ್ದು ತುಳಸೀ ಎಂಬುದು ಸಮಾನಾರ್ಥಕ ಪದಗಳ ಪೈಕಿ ಕಂಡುಬರುತ್ತದೆ. 'ಸೋಢಲ ನಿಘಂಟಿ'ನಲ್ಲಿ (ಕ್ರಿ. ಶ. ೧೨ನೇ ಶತಮಾನ) ತುಳಸಿ ಎಂಬ ಪದವನ್ನು ಉಲ್ಲೇಖಿಸಲಾಗಿದೆಯಾದರೂ, ಗುಣಲಕ್ಷಣಗಳನ್ನು ಸುರಸಾ ಮತ್ತು ಸುಮುಖಾದ ಹೆಸರಿನಲ್ಲಿ ಉಲ್ಲೇಖಿಲಾಗಿದೆ. ಬೋಪದೇವನ 'ಹೃದಯದೀಪಕ'ದಲ್ಲಿ (ಕ್ರಿ. ಶ. ೧೩ನೇ ಶತಮಾನ) ತುಳಸಿ ಎಂಬುದನ್ನು ಸುರಸಾಕ್ಕೆ ಸಮಾನಾರ್ಥಕ ಪದವಾಗಿ ನೀಡಲಾಗಿದೆ. 'ಮದನಪಾಲ ನಿಘಂಟು' ಅಥವಾ 'ಮದನ ವಿನೋದ' (ಕ್ರಿ. ಶ. ೧೩ನೇ ಶತಮಾನ)ದಲ್ಲಿ ತುಳಸೀ ಎಂಬುದು ಸುರಸಾಕ್ಕಿಂತ ಪ್ರಾಧಾನ್ಯಪಡೆಯಿತು ಮತ್ತು ಸಸ್ಯದ ಪ್ರಮುಖ ಹೆಸರಾಯಿತು; ಸುರಸಾ ಎಂಬುದು ಅದರ ಸಮಾನಾರ್ಥಕ ಪದಗಳಲ್ಲಿ ಒಂದಾಗಿ ಪರಿಣಮಿಸಿತು.1 ಇತರ ಪ್ರಕರಣಗಳಲ್ಲಿನಂತೆ ಇಲ್ಲಿಯೂ ಭಾವಮಿಶ್ರನು (ಕ್ರಿ. ಶ. ೧೬ನೇ ಶತಮಾನ) ಮದನಪಾಲನನ್ನು ಅನುಸರಿಸಿದನು. ಕಾಲಕ್ರಮದಲ್ಲಿ ಸುರಸಾ ಎಂಬುದು ನಿರ್ಗುಂಡೀ,

---

* ABORI. Vol, LIX, 1973, pp 232–233ರಲ್ಲಿ ಪ್ರಕಟಗೊಂಡಿರುವ ಶ್ರೀ ಪಿ. ವಿ. ಶರ್ಮರವರ On the word 'Tulasi' ಎಂಬ ಲೇಖನದ ಅನುವಾದ. ಈ ಲೇಖನ ಅನುವಾದಿಸಿ ಪ್ರಕಟಿಸಲು ಅನುಮತಿ ನೀಡಿದ ABORI ನ (6–4–1981) ಸಂಪಾದಕ ವರ್ಗಕ್ಕೆ ಅನುವಾದಕನ ಕೃತಜ್ಞತೆಗಳು.

೧. ತುಲಸೀ ಸುರಸಾ ಗೌರೀ ಭೂತಘ್ನೀ ಬಹುಮಂಜರೀ (ಕರ್ಪೂರಾದಿವರ್ಗಃ)

ರಾಸ್ನಾ ಇತ್ಯಾದಿ ಅನೇಕ ಸಸ್ಯಗಳಿಗೆ ಸಮಾನಾರ್ಥಕವಾಗಿರುವ ಸಾಧ್ಯತೆಯಿದ್ದು, ಹಾಗಾಗಿ ಅದು ತನ್ನ ಪ್ರಾಮುಖ್ಯ ಕಳೆದುಕೊಂಡಿರಬೇಕು: ತತ್ಪರಿಣಾಮದಲ್ಲಿ ಹೆಚ್ಚು ಸಾಮಾನ್ಯವಾದ ತುಳಸೀ ಎಂಬ ಹೆಸರಿನಿಂದ ಸ್ಥಾನಪಲ್ಲಟಗೊಂಡಿರಬೇಕು.

ನಿಘಂಟುಗಳ ಪೈಕಿ 'ಅಮರಕೋಶ'ದಲ್ಲಿ ತುಳಸೀ ಬಗ್ಗೆ ಉಲ್ಲೇಖವಿಲ್ಲ. ಸುರಸಾ ಎಂಬ ಪದವಿರುವುದಾದರೂ ಅದು ತುಲಸೀಗಾಗಿ ಅಲ್ಲ; ಆದರೆ ಕುಠೇರಕ ಮತ್ತು ಅರ್ಜಕದಂಥ ತುಲಸೀ ಕುಟುಂಬದ ಇತರ ಸಸ್ಯಗಳಿರುವುದಾದರೂ ಅದು ನಾಕುಲೀ ಅಥವಾ ರಾಸ್ನಾಕ್ಕಾಗಿ ಇದೆ. ಆವೇಳೆಗೆ ಸುರಸಾ ಎಂಬುದು ನಾಕುಲೀಯ ಸಮಾನಾರ್ಥಕವಾಗಿ ಸುಪರಿಚಿತವಾಗಿತ್ತೆ ವಿನಾ ತುಲಸೀಗೆ ಅಲ್ಲ ಎಂಬುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತದೆ. ಹಾಗಾದರೂ ಈ ದೇಶದಲ್ಲಿ ಇಷ್ಟೊಂದು ಸಾಮಾನ್ಯವಾಗಿದ್ದ ತುಲಸೀಯನ್ನು ಅಮರಸಿಂಹನು ಏಕೆ ಕೈಬಿಟ್ಟನು ಎಂಬುದು ಕುತೂಹಲಕಾರಿ ಅಂಶವಾಗಿದೆ. ತುಲಸೀ ವೈಷ್ಣವಧರ್ಮದ ಸಂಕೇತವಾಗಿ ಕ್ರಮೇಣ ಪರಿಣಮಿಸಿದ್ದುದರಿಂದ ಬೌದ್ಧಧರ್ಮೀಯನಾಗಿದ್ದ ಅಮರಸಿಂಹನು ತನ್ನ ಕೃತಿಯಲ್ಲಿ ಸೇರಿಸಲು ಇಷ್ಟಪಡಲಿಲ್ಲ ಎಂಬ ಯಾವುದೋ ಧಾರ್ಮಿಕ ಅಂಶವೂ ಇರಬಹುದಾಗಿದೆ; ಆದರೆ ಅಮರಸಿಂಹನು ತನ್ನ ಕೃತಿಯಲ್ಲಿ ವೇದಕಾಲದ ಹಾಗೂ ಅನಂತರದ ಅನೇಕ ದೇವ–ದೇವತೆಗಳನ್ನು ಉಲ್ಲೇಖಿಸಿರುವನು ಎಂಬ ಅಂಶವನ್ನು ಗಮನಿಸಿದಾಗ ಇದು ಅಸಂಭವವಾಗಿ ತೋರುತ್ತದೆ. ಅಷ್ಟೇ ಅಲ್ಲದೆ, ಅದು 'ಅಮರಕೋಶ'ದ ಕಾಲದ ಬಗ್ಗೆ ಹೊಸ ಬೆಳಕನ್ನು ಬೀರುತ್ತದೆ. ಅದು ಪ್ರಾಚೀನ ಕೃತಿಯಾಗಿದ್ದು, ವಾಗ್ಭಟನ (ಕ್ರಿ. ಶ. ೭ನೇ ಶತಮಾನ) ಸಮಕಾಲಿಕವಾದುದಾಗಿದ್ದರೂ ಅದು ಸುರಸಾವನ್ನು ನಾಕುಲೀ ಅಥವಾ ರಾಸ್ನಾದ ಸಮಾನಾರ್ಥಕವಾಗಿ ಉಲ್ಲೇಖಿಸುತ್ತಿರಲಿಲ್ಲ. 'ಅಮರಕೋಶ'ದ ವನೌಷಧಿವರ್ಗವು 'ಧನ್ವಂತರಿ ನಿಘಂಟು'ನ್ನು ಆಧರಿಸಿದೆ ಎಂದು ಕೆಲವು ವಿದ್ವಾಂಸರು ಹೇಳುವರಾದರೂ ಸುರಸಾ ಎಂಬುದು 'ಧನ್ವಂತರಿ ನಿಘಂಟಿ'ನಲ್ಲಿ ರಾಸ್ನಾ ಅಥವಾ ನಾಕುಲೀಯ ಸಮಾನಾರ್ಥಕಗಳಲ್ಲಿ ಕಂಡುಬರದಿರುವ ಕಾರಣ ಇದು ಸಂದೇಹಮಯವಾಗಿ ತೋರುತ್ತದೆ. 'ತ್ರಿಕಾಂಡಶೇಷ'ದಲ್ಲಿ ಸಹ (ಕ್ರಿ. ಶ. ೧೧ನೇ ಶತಮಾನ) ಸುರಸಾ ಆಗಲೀ ತುಳಸೀ ಆಗಲೀ ಕಂಡುಬರುವುದಿಲ್ಲ; ಮತ್ತೆ 'ಮೇದಿನಿಕೋಶ'ದಲ್ಲಿ ಸುರಸಾವು ರಾಸ್ನಾ ಮತ್ತು ನಾಗಮಾತಾಗೆ ಸಮಾನಾರ್ಥಕವಾಗಿದೆಯಾದರೆ ಸುರಸಾ ಪರ್ಣಾಸ(ಶ)ಕ್ಕೆ ಸಮಾನಾರ್ಥಕವಾಗಿದೆ. ಹೇಮಚಂದ್ರನು (ಕ್ರಿ. ಶ. ೧೨ನೇ ಶತ.) ತನ್ನ 'ನಿಘಂಟುಶೇಷ'ದಲ್ಲಿ ಸುರಸಾವು ತುಲಸಿಯು[1] ಸಮಾನಾರ್ಥಕಗಳ ಪೈಕಿ ಒಂದು ಎಂದು ಸ್ಪಷ್ಟವಾಗಿ ಉಲ್ಲೇಖಿಸುವನಾದರೂ ಅದು ಶೆಫಾಲಿಕಾವನ್ನೂ ಸೂಚಿಸುತ್ತದೆ. (ಶ್ಲೋಕ ೧೮೬). 'ವೈಜಯಂತೀ ಕೋಶ'ದಲ್ಲಿ ತುಲಸೀಗೆ[2] ಶ್ವೇತಸುರಸಾ ಎಂದಿರುವುದಾದರೆ ಅದೇ 'ನಿಘಂಟುಶೇಷ'ದಲ್ಲಿ ಶ್ವೇತ ನಿರ್ಗುಂಡೀಗೆ ಸಮಾನಾರ್ಥಕವಾಗಿದೆ.

ವೈದ್ಯೇತರ ಕೃತಿಗಳ ಪೈಕಿ ಸುರಸಾ ಪದವು 'ವಿಷ್ಣುಧರ್ಮಸೂತ್ರ' (೯೭.೧೭)ದಲ್ಲಿ ಕಂಡುಬರುವುದಾದರೆ, ತುಲಸೀ ಎಂಬುದು 'ಮಾರ್ಕಂಡೇಯ' ಪುರಾಣ ಹಾಗೂ 'ಅಥರ್ವಪರಿಶಿಷ್ಟ'—ಇವುಗಳಲ್ಲಿ ಕಂಡುಬರುತ್ತದೆ. 'ಶ್ರೀಮದ್ಭಾಗವತ'ದಲ್ಲಿ ತುಲಸೀಯು ಮಾಹಾತ್ಮ್ಯವನ್ನು ವಿವರಿಸುವ ಪೀಠಿಕಾ ಭಾಗದಲ್ಲಿ ಕಂಡುಬರುವುದೇ ವಿನಾ ವಾಸ್ತವವಾಗಿ ಗ್ರಂಥಭಾಗದಲ್ಲಿ ಕಂಡುಬರುವುದಿಲ್ಲ. ಪ್ರಾಚೀನ ಮುನಿತ್ರಯರು (ಪಾಣಿನಿ, ಕಾತ್ಯಾಯನ ಮತ್ತು ಪತಂಜಲಿ) ಸುರಸಾವನ್ನಾಗಲೀ ತುಲಸೀಯನ್ನಾಗಲೀ ಉಲ್ಲೇಖಿಸಿಲ್ಲ. ಕ್ಲಾಸಿಕಲ್ ಯುಗದಲ್ಲಿ ಈ ಎರಡು ಪದಗಳಲ್ಲಿ ಯಾವುದೇ ಆಗಲೀ ಕಂಡುಬರುವುದಿಲ್ಲ. ಇದಕ್ಕೆ ಅಪವಾದವೆಂದರೆ ಬಾಣನ 'ಹರ್ಷಚರಿತೆ'ಯಲ್ಲಿ ಸುರಸಾ ಎಂಬುದು ಕಂಡುಬರುತ್ತಿದ್ದು ಇದು ಬಹುಮಟ್ಟಿಗೆ ತುಲಸೀಗೆ ಅನ್ವಯವಾಗಬಹುದು.[3]

---

೧. ತುಲಸ್ಯಾಂ ಸುರಸಾ ಪೀತಾ ರಾಕ್ಷಸೀ ಬಹುಮಂಜರೀ
ಗ್ರಾಮ್ಯಾ ಗೌರೀ ಶಕ್ರಪತ್ನೀ ಭೂತಘ್ನೀ ದೇವದುಂದುಭಿಃ ॥ ೨೨೩ ॥

೨. ಸುರಾಂಧಾ ಶ್ವೇತಸುರಸಾ ಭಾರತೀ ತುಲಸೀ ಶಿವಾ। (೩.೩.೧.೧೯.)

೩. ಉರುಬೂಕವಚಾವಷ್ಟಕಸುರಸಸೂರಣಶಿಗ್ರುಂಥಿಪರ್ಣಗವೇಧುಕಾಗರ್ಮದಗುಲ್ಮಗಹನಗೃಹವಾಟಿಕೈಃ (ಪು. ೪೧೦, ಅಧ್ಯಾಯ ೮, ವಿಂಧ್ಯಾಟವೀವರ್ಣನ)

ಪ್ರಾಚೀನ ಕಾಲದಲ್ಲಿ ಸುರಸಾ (ಅಥವಾ ಸುರಸ) ಎಂಬುದು ತುಲಸೀಗೆ ಪ್ರಚಲಿತವಾಗಿದ್ದು, ಮಧ್ಯಯುಗದಲ್ಲಿ ಮಾತ್ರವೇ—ಎಂದರೆ ಪ್ರಾಯಃ ಕ್ರಿ. ಶ. ೯–೧೦ನೇ ಶತಮಾನದಲ್ಲಿ ('ಪರ್ಯಾಯ ರತ್ನಮಾಲಾ' ಮತ್ತು 'ಧನ್ವಂತರೀ ನಿಘಂಟಿ'ನ ಕಾಲ)—ತುಲಸೀ ಪದ ಬಳಕೆಗೆ ಬಂದಂತೆ ಕಾಣುತ್ತದೆ; ಆದರೆ ಅದು ಪ್ರಾಮುಖ್ಯಕ್ಕೆ ಬಂದದ್ದು ಕ್ರಿ. ಶ. ೧೨ ರಿಂದ ೧೫ನೇ ಶತಮಾನಗಳ ನಡುವಣ ಅವಧಿಯಲ್ಲಿ ಮಾತ್ರವೇ.

ಭಾಷಾಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ ಸುರಸಾ ಎಂಬ ಪದವು ಕಾಲಕ್ರಮದಲ್ಲಿ ಸುರಸೀ ಎಂದಾಗಿ ಅಂತಿಮವಾಗಿ ತುಲಸೀ ಎಂದು ಪರಿವರ್ತನೆಗೊಂಡಿತು. ಹೇಮಚಂದ್ರನ 'ದೇಶೀನಾಮ ಮಾಲಾ'ದಲ್ಲಿ ಸುಲಸ ಮಂಜರೀ ಎಂಬುದು ತುಲಸೀಗೆ ಸಮಾನಾರ್ಥಕವಾಗಿದೆ; ಹಾಗಾಗಿ ಕಾಲಕ್ರಮ ದಲ್ಲಿ ಸುಲಸೀ ಎಂಬುದು ತುಲಸೀ ಎಂಬುದಾಗಿರುವುದು ಅಸಂಭವವಲ್ಲ.

ಸುರಸಾ—ಸುರಸೀ—ಸುಲಸೀ—ಚುಲಸೀ—ತುಲಸೀ

ತುಳಸಿಗಿಡ : ತುಂಬೆ, ಕಾಮಕಸ್ತೂರಿ, ಪಚ್ಚೆತೆನೆ ಇವುಗಳ ಗುಂಪಾದ ಲ್ಯಾಮಿಯೇಸೀ ಕುಟುಂಬಕ್ಕೆ ಸೇರಿದ ಒಂದು ಮೂಲಿಕೆ ಸಸ್ಯ (ಸೇಕ್ರೆಡ್ ಬೇಸಿಲ್). ಇದರಲ್ಲಿ ಹಲವಾರು ಬಗೆಗಳಿವೆ. ಉದಾಹರಣೆಗೆ ರಾಮ ತುಳಸಿ, ಕೃಷ್ಣ ತುಳಸಿ, ಶ್ರೀ ತುಳಸಿ ಮುಂತಾದುವು. ಇವೆಲ್ಲವೂ ವೈಜ್ಞಾನಿಕವಾಗಿ ಒಂದೇ ಪ್ರಭೇದಕ್ಕೆ ಸೇರಿದವು. ಶಾಸ್ತ್ರೀಯನಾಮ ಆಸಿಮಮ್ ಸ್ಯಾಂಕ್ಟಮ್. ಆದರೆ ಇವುಗಳ ಕಾಂಡ ಹಾಗೂ ಎಲೆಗಳ ಬಣ್ಣದಲ್ಲಿ ವ್ಯತ್ಯಾಸ ಇರುವುದರಿಂದ ಇವು ಬೇರೆ ಬೇರೆ ಎಂದು ಪರಿಗಣಿಸಲು ಅವಕಾಶವಾಗಿದೆ. ಶ್ರೀ ತುಳಸಿಯ ಎಲೆಯ ಬಣ್ಣ ತಿಳಿಹಸಿರಾದರೆ ಕೃಷ್ಣ ತುಳಸಿಯ ಎಲೆ ನೀಲಿಗೆಂಪು ಬಣ್ಣದ್ದು. ಭಾರತಾದ್ಯಂತ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ತುಳಸಿ ಪ್ರಭೇದಗಳು ಕಾಣಸಿಗುತ್ತವೆ. . . . .

ತುಳಸಿ ಗಿಡ ಒಳ್ಳೆಯ ಔಷಧಿಯೆಂದು ಹೆಸರಾಗಿದೆ. ನೆಗಡಿ ಶೀತಕ್ಕೆ ಇದರ ರಸ ಒಳ್ಳೆಯ ಮದ್ದು. ಶ್ವಾಸಕೋಶ ಬಾಧೆಗಳಲ್ಲಿ, ಚರ್ಮರೋಗಗಳಲ್ಲಿ ಇದರ ರಸವನ್ನು ಉಪಯೋಗಿಸುವುದುಂಟು. ತುಳಸಿಯ ಎಲೆಗಳಲ್ಲಿರುವ ರಸ ಗಾಳಿಯಲ್ಲಿ ವ್ಯಾಪಿಸಿ ಸೊಳ್ಳೆಗಳನ್ನು ದೂರವಿರಿಸುತ್ತದೆ ಎಂದು ಹೇಳಲಾಗಿದೆ . . . .

(ಕನ್ನಡ ವಿಶ್ವಕೋಶ, ಸಂಪುಟ ಒಂಬತ್ತರಲ್ಲಿನ ಎಚ್. ಎಸ್. ಚಾಮಯ್ಯನವರ ಲೇಖನದಿಂದ
(ಪು. ೩೫೨) ಉದ್ಧೃತ)

ಪ್ರಧಾನ್ ಗುರುದತ್ತ

'ಮಹಾತ್ಮ ಗಾಂಧಿ-ಅಂತಿಮಹಂತ'—ಭಾಷಾಂತರದ ದೃಷ್ಟಿಯಲ್ಲಿ

ರಾಯಲ್ ಆಕಾರದ ೭೮೦ ಪುಟಗಳವರೆಗೆ ವಿಸ್ತರಿಸಿಕೊಂಡಿರುವ ' Mahatma Gandhi–The Last Phase ' ಗಾಂಧೀಜಿಯವರ ಖಾಸಗಿ ಕಾರ್ಯದರ್ಶಿಯಾಗಿದ್ದ ಪ್ಯಾರೇಲಾಲ್ ಅವರ ಉದ್ವ ಕೃತಿ. ಒಂದು ದೃಷ್ಟಿಯಲ್ಲಿ, ಒಂದು ವಿಶೇಷ ಅರ್ಥದಲ್ಲಿ, ಇದು ಮಹಾತ್ಮ ಗಾಂಧೀಜಿಯವರ ಆತ್ಮ ಕಥೆಯ ಮುಂದಿನ ಭಾಗ. ರಾಜೇಂದ್ರಪ್ರಸಾದರು ಹೇಳಿರುವಂತೆ, " ತಮ್ಮ ಜೀವನದ ಉದ್ದಕ್ಕೂ ಅವರು ನಡೆಸಿದ ಪ್ರಯೋಗಗಳ ಪರಿಣಾಮಗಳನ್ನು ಅವುಗಳ ಅತ್ಯಂತ ತೀವ್ರ ಹಾಗೂ ಅಂತಿಮ ಪರೀಕ್ಷೆಗೆ ಒಳಪಡಿಸಿದ ಅವರ ಜೀವನದ ಕೊನೆಯ ವರ್ಷಗಳ ಕಥೆಯನ್ನು "[1] ಒಳಗೊಂಡಿರುವ ಪುಸ್ತಕ ಇದು. ಬೃಹತ್ತು-ಮಹತ್ತುಗಳೆರಡೂ ಏಕೀಭವಿಸಿರುವ ಒಂದು ಅಪೂರ್ವಕೃತಿ. ರಾಜೇಂದ್ರಪ್ರಸಾದರು ಮುಂದುವರಿದು ಹೇಳಿರುವಂತೆ, " ಈ ಪುಟಗಳಲ್ಲಿ ಅಡಕವಾಗಿರುವುದನ್ನು ಸಂಗ್ರಹವಾಗಿ ಹೇಳಲು ಪ್ರಯತ್ನಿಸುವುದು ಸಾಧ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ ".[2] ಹೀಗಾಗಿ, ಭಾಷಾಂತರದ ದೃಷ್ಟಿಯಿಂದ ಮಾತ್ರ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ.

ಈ ಕೃತಿಯ ರಚನೆಗೆ ಪ್ಯಾರೇಲಾಲರು ಆಶ್ರಯಿಸಿದ ಆಕರಗಳು ಯಾವುವು ಎಂಬುದು ಭಾಷಾಂತರದ ದೃಷ್ಟಿಯಿಂದ ಮುಖ್ಯವಾದ ಸಂಗತಿಯಾಗುತ್ತದೆ. ಏಕೆಂದರೆ ಇಲ್ಲಿಯ ವಸ್ತು ಎಷ್ಟು ವೈವಿಧ್ಯಮಯವಾಗಿದೆ ಎಂಬುದು ಇದರಿಂದ ನಮಗೆ ಅರಿವಾಗುತ್ತದೆ. ಈ ಬಗ್ಗೆ ಪ್ಯಾರೇಲಾಲರು ಹೀಗೆ ಹೇಳಿದ್ದಾರೆ: " ಈ ಪುಸ್ತಕವನ್ನು ಬರೆಯುವುದರಲ್ಲಿ, ನಾನು ಮೊದಲನೆಯದಾಗಿ ಗಾಂಧೀಜಿಯವರ ಕಛೇರಿಯ ಕಡತಗಳು, ' ಹರಿಜನ ' ಪತ್ರಿಕೆ ಮತ್ತು ' ಯಂಗ್ ಇಂಡಿಯಾ 'ದಲ್ಲಿನ ಅವರ ಸ್ವಂತ ಲೇಖನಗಳು, ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಭೇಟಿ ಮತ್ತು ಹೇಳಿಕೆಗಳು, ಅವರ ಪತ್ರವ್ಯವಹಾರ, ಮತ್ತು ನಾನು ಬಹಳ ಎಚ್ಚರಿಕೆಯಿಂದ ಕೊಡಿಟ್ಟಿದ್ದ, ಅವರು ಮೌನವ್ರತವನ್ನು ಆಚರಿಸುತ್ತಿದ್ದಾಗ ಬಿಡಿಕಾಗದದ ಮೇಲೆ ಬರೆಯುತ್ತಿದ್ದ ಬರವಣಿಗೆ ಮತ್ತು ಸೂಚನೆಗಳು—ಇವುಗಳನ್ನು ಉಪಯೋಗಿಸಿಕೊಂಡಿದ್ದೇನೆ."[3] ಅಷ್ಟೇ ಅಲ್ಲ, ಮುಂದುವರಿದು ಅವರು ಹೀಗೆ ಹೇಳಿದ್ದಾರೆ: " ಇದರ ಜತೆಗೆ ನನ್ನ ಟಿಪ್ಪಣಿ ಪುಸ್ತಕ, ದಿನಚರಿ ಪುಸ್ತಕ, ಅವರ ಜತೆಯಲ್ಲಿ ಕೆಲಸಮಾಡುತ್ತಿದ್ದ ಇನ್ನೂ ಕೆಲವರ ಟಿಪ್ಪಣಿ ಪುಸ್ತಕ, ದಿನಚರಿ ಪುಸ್ತಕ, ಮತ್ತು ನಾನು ಅವರಿಂದ ಅಥವಾ ಅವರೊಡನಿದ್ದ ಇತರರಿಂದ ಪ್ರತ್ಯಕ್ಷನಾಗಿ ತಿಳಿದ ವಿಷಯ—ಇವುಗಳಿದ್ದುವು......ನನ್ನ ಗೈರುಹಾಜರಿಯನ್ನು ತುಂಬುವುದಕ್ಕಾಗಿ ಮುಖ್ಯವಾಗಿ ಅವರು ನನಗೋಸ್ಕರ ಪ್ರಾರಂಭಮಾಡಿದ್ದ ಅವರದೇ ದಿನಚರಿಯನ್ನು ಕಡೆಯದಾದರೂ ಕಡಿಮೆ ಇಲ್ಲದ ಆಧಾರವಾಗಿ ಬಳಸಿದ್ದೇನೆ."[4]

ಹೀಗೆ ತಾವು ಸಂಗ್ರಹಿಸಿದ ಸಾಮಗ್ರಿಯನ್ನು ಬಳಸುವ ಸಂದರ್ಭದಲ್ಲಿ ತಾವು ವಹಿಸಿದ ಸ್ವಾತಂತ್ರ್ಯವೇನು, ನೀಡಿದ ಸಮರ್ಥನೆಯೇನು ಎಂಬುದನ್ನೂ ಪ್ಯಾರೇಲಾಲರು ವಿವರಿಸಿದ್ದಾರೆ: " ಗಾಂಧೀಜಿ

ಯವರ ಭಾಷಣಗಳಿಂದ ಮತ್ತು ಸಂದರ್ಶನ ಕಾಲದಲ್ಲಿ ನಡೆದ ಬಾಯಿಮಾತಿನ ಹೇಳಿಕೆಗಳಿಂದ ಉಲ್ಲೇಖಿಸುವಾಗ, ನನ್ನಿಂದ ಅಥವಾ ಗಾಂಧೀಜಿಯವರ ಸಿಬ್ಬಂದಿಯ ಬೇರೊಬ್ಬರಿಂದ ಆತುರದಲ್ಲಿ ಸಿದ್ಧವಾದ, ಪ್ರಕಟಿತ ರೂಪವು ಅಸಮರ್ಪಕ ಅಥವಾ ಸಮತೂಕರಹಿತ ಎನಿಸಿದಾಗ, ಮೂಲ ಟಿಪ್ಪಣಿ ಪುಸ್ತಕಗಳ ಸಹಾಯದಿಂದ ಪ್ರಕಟಿತ ರೂಪದ ಭಾಷೆಯನ್ನು ವಿಶದೀಕರಿಸುವ ಇಲ್ಲವೇ ಪರಿಷ್ಕರಿಸುವ ಸ್ವಾತಂತ್ರ್ಯವನ್ನು ನಾನು ವಹಿಸಿದ್ದೇನೆ. ನಿಷ್ಕೃಷ್ಟತೆಯನ್ನು ಭದ್ರಪಡಿಸುವುದಕ್ಕಾಗಿ ಎಲ್ಲೆಲ್ಲಿ ಸಾಧ್ಯವೊ ಅಲ್ಲಲ್ಲಿ ನಾಟಕದ ಪಾತ್ರಧಾರಿಗಳು ಅಥವಾ ಇನ್ನಾವುದೇ ನಂಬಲರ್ಹವಾದ ಮೂಲಗಳೊಡನೆ ಸಮಾಲೋಚಿಸಿ, ವರದಿಮಾಡಲ್ಪಟ್ಟ ವಿಷಯಗಳನ್ನು ತಾಳೆನೋಡುವುದಕ್ಕೆ ಸರ್ವಪ್ರಯತ್ನಗಳನ್ನೂ ಮಾಡಿದ್ದೇನೆ."[5] ಎಂದೂ, " 'ಬ್ರಹ್ಮಚರ್ಯ'ವನ್ನು ಕುರಿತ ಅಧ್ಯಾಯದಲ್ಲಿ," ಆ ಸೂಕ್ಷ್ಮ ಕ್ಲಿಷ್ಟ ವಿಷಯವನ್ನು ಪುಸ್ತಕ ಸಂದರ್ಭದಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಟ್ಟಿಗೆ ಬಹಳ ದೀರ್ಘವಾಗಿ ಆಲೋಚನೆ ಮಾಡಿ ನಿರೂಪಿಸಿದ್ದೇನೆ. ದೇಹದಂಡನೆ ಮಾಡಿ ಸಾಧಿಸುವ ಜೀವನದ ಭವ್ಯತೆಯನ್ನೂ ತುಲನಾತ್ಮಕವಾಗಿ ವಿಮರ್ಶಿಸುವ ಸಲುವಾಗಿ ಬ್ರಹ್ಮಚರ್ಯವನ್ನು ಕುರಿತ ನಿರೂಪಣೆಯಲ್ಲಿ ದೇಹದಂಡನೆಯ ತಂತ್ರಗಳ ಬಗ್ಗೆಗೆ ಒಂದು ಸ್ಥೂಲ ವಿವರಣೆಯನ್ನೂ ಕೊಟ್ಟಿದ್ದೇನೆ"[6] ಎಂದೂ ಹೇಳಿದ್ದಾರೆ.

ಈ ಪ್ರಾಮಾಣಿಕತೆ, ಶ್ರದ್ಧೆ, ಎಚ್ಚರ, ವಸ್ತುನಿಷ್ಠತೆ, ಮತ್ತು ತನ್ಮಯತೆಗಳಿಂದಾಗಿ ಈ ಗ್ರಂಥ ಒಂದು ಅಪೂರ್ವ ಸ್ವರೂಪವನ್ನು ಪಡೆಯಿತು. ಇಷ್ಟಾಗಿಯೂ " ಈ ಪುಸ್ತಕ ವ್ಯಕ್ತಿಗಳ ಮತ್ತು ಘಟನೆಗಳ ಮೇಲೆ ಕೊಟ್ಟ ತೀರ್ಪಲ್ಲ. ಪ್ರೇಮದ ತತ್ತ್ವ ಹೇಗೆ ಇಂದಿನ ಪ್ರಪಂಚದ ಸಮಸ್ಯೆಗಳನ್ನು, ಬಗೆಹರಿಸುವಲ್ಲಿ ಕೆಲಸ ಮಾಡಬಲ್ಲದೆಂಬುದನ್ನು ತೋರಿಸುವ ಗಾಂಧೀಜಿಯವರ ಮಹಾ ಪ್ರಯೋಗದ ಹಿನ್ನೆಲೆಯಲ್ಲಿ, ಕೆಲವು ಘಟನೆಗಳನ್ನೂ, ಆ ಘಟನೆಗಳನ್ನು ಸೃಷ್ಟಿಸಿದವರ ಮತ್ತು ತನ್ಮೂಲಕ ಸ್ವತಃ ಸೃಷ್ಟಿಗೊಂಡವರ ಕಾರ್ಯಚಟುವಟಿಕೆಗಳನ್ನೂ ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ಪ್ರಯತ್ನ ಈ ಪುಸ್ತಕ " ಎಂದೂ ಪ್ಯಾರೇಲಾಲರು ಸ್ಪಷ್ಟಪಡಿಸಿದ್ದಾರೆ.

ಈ ಮಾತುಗಳನ್ನು ಇಲ್ಲಿ ಉದ್ಧರಿಸುವ ಅಗತ್ಯ ಉಂಟಾದುದು ಇದು ಎಂಥ ಅಪೂರ್ವವೂ, ಐತಿಹಾಸಿಕವೂ ಆದ ದಾಖಲೆ ಎಂಬುದನ್ನು ಹಾಗೂ ಇದರ ಭಾಷಾಂತರದಲ್ಲಿ ಭಾಷಾಂತರಕಾರ ಎದುರಿಸಬೇಕಾಗಿ ಬರುವ ಶೈಲಿಗತ ಹಾಗೂ ವಿಷಯಗತ ಸಮಸ್ಯೆಗಳು ಎಷ್ಟು ಬಗೆಯಾಗಿ ಇರಬಲ್ಲವು ಹಾಗೂ ಭಾಷಾಂತರಕಾರ ಹೇಗೆ ಮೈಯೆಲ್ಲ ಕಣ್ಣಾಗಿ ಇರಬೇಕಾದುದು ಅಗತ್ಯ ಎಂಬುದನ್ನು ಸೂಚಿಸುವ ಸಲುವಾಗಿ.

* * * *

ಭಾಷಾಂತರದ ಪರಿಶೀಲನೆಗೆ ನೇರವಾಗಿ ಸಂಬಂಧಿಸಿದ ಈ ಭಾಗವನ್ನು ಪ್ರಾರಂಭಿಸುವ ಮೊದಲು ಪ್ಯಾರೇಲಾಲರ ಇನ್ನೊಂದು ಹೇಳಿಕೆಯನ್ನೂ, ನಾನು ಉದ್ಧರಿಸಬಯಸುತ್ತೇನೆ. ಆ ಹೇಳಿಕೆ ಹೀಗಿದೆ: " ಈ ಸಾಹಿತ್ಯಕ್ಕೆ ಕೈ ಹಾಕಿದಾಗ ನಾನು ಎದುರಿಸಬೇಕಾದ ಕೆಲಸದ ಬೃಹತ್ಪ್ರಮಾಣ, ಕಷ್ಟಾಧಿಕ್ಯ, ಅಗಾಧತೆ, ಅಪಾಯ—ಇವುಗಳ ಅರಿವಿರಲಿಲ್ಲವೆಂದು ನಾನು ಒಪ್ಪಿಕೊಳ್ಳಬೇಕು. ಇದನ್ನು ನಾನು ಮೊದಲೇ ತಿಳಿದಿದ್ದರೆ ಹಿಂದುಮುಂದು ನೋಡುತ್ತಿದ್ದೆ. ಅಥವಾ ಬೇರೆ ದಾರಿಯನ್ನು ಹಿಡಿಯುತ್ತಿದ್ದೆ."[7] ಇಂಥ ಬೃಹತ್ ಗ್ರಂಥವೊಂದರ ಅನುವಾದಕ್ಕೆ ಕೈಹಾಕಿದ ಯಾವನೇ ಅನುವಾದಕನನ್ನು ಬೆಚ್ಚಿ ಬೀಳಿಸುವ ಸಂಗತಿಗಳೆಂದರೆ ಅದರ ಬೃಹತ್ಪ್ರಮಾಣ, ಕಷ್ಟಾಧಿಕ್ಯ, ಅಗಾಧತೆ, ಅಪಾಯ. ಹೀಗಾಗಿ, ಎಂಥ ಸಮರ್ಥ ಅನುವಾದಕನೇ ಆದರೂ ಹಿಂದೆಮುಂದೆ ನೋಡುವಂತಾಗುತ್ತದೆ; ಅಷ್ಟೇ ಅಲ್ಲ, ಬೇರೆ ದಾರಿಯನ್ನೇ ಹಿಡಿಯುವಂತಾಗುತ್ತದೆ. ಏಕೆಂದರೆ ಇದು ಯಾಂತ್ರಿಕವಾಗಿ ಮುಗಿಸಿ ಬಿಸಾಡುವಂಥ ಕೃತಿಯಲ್ಲ. ಕುವೆಂಪು ಅವರೆಂದಿರುವಂತೆ, " ಇದು ಬರಿಯ ಕಾಗದದ ಕಟ್ಟಲ್ಲ. ಇದೊಂದು ಚಿನ್ಮಯ ಶಕ್ತಿ. ಮಾರ್ಗ ನಿರ್ದೇಶಕ ದೀಪಸ್ತಂಭ. ಅಮೃತದ ಖನಿ. ಇಂಥ ಕೃತಿಗಳು ಭಾವಪ್ರಯೋಜನದಲ್ಲೆ ಪರ್ಯವಸಾನಗೊಳ್ಳದೆ ಭವಪ್ರಯೋಜನವನ್ನೂ ಸಾಧಿಸಬಲ್ಲುವು; ವ್ಯಕ್ತಿ ನಿರಾಶಾ ಕಬಂಧ ಬಾಹುವಿಗೆ ಸೆರೆಸಿಕ್ಕಿ ದಿಙ್ಮೂಢನಾದಾಗ ಅವನ ಹೃದಯ ವೇದಿಕೆಯಲ್ಲಿ ಆಶಾಗ್ನಿಯನ್ನು ಊದಿ ಹೊತ್ತಿಸಿ, ಭರವಸೆಯನ್ನು ಬಿತ್ತಿ, ದೈತ್ಯದಹನಕ್ಕೆ ಸಹಾಯಕವಾಗಬಲ್ಲವು; ಸ್ಫೂರ್ತಿಪ್ರದಾನ ಮಾಡಬಲ್ಲವು."[8]

ಇಂಥ ಕೃತಿಯೊಂದರ ಅನುವಾದ ಅನೇಕಾರ್ಥಗಳಲ್ಲಿ ಒಂದು ತಪಸ್ಸೇ ಆಗುತ್ತದೆ. ಈ ತಪಸ್ಸು ಯಾವ ಬಗೆಯದು ಎಂಬುದನ್ನು ಪ್ರೊ॥ ಡಾ. ಹಾ. ಮಾ. ನಾಯಕ ಅವರು ಬೇರೊಂದು ಸಂದರ್ಭದಲ್ಲಿ ಹಾಗೂ ಅನನ್ಯ ರೀತಿಯಲ್ಲಿ ನಿರೂಪಿಸಿದ್ದಾರೆ. ಅವರ ಆ ನಿರೂಪಣೆ ಹೀಗೆ ಸಾಗುತ್ತದೆ: " ಗಾಂಧೀಜಿಯವರನ್ನು ಕುರಿತು ಪ್ಯಾರೇಲಾಲ್ ಬರೆದ ' ಕೊನೆಯ ಹಂತ 'ಎಂಬ ಮಹಾ ಸಂಪುಟಗಳನ್ನು ಕನ್ನಡಕ್ಕೆ ತರಬೇಕೆಂದು ಒಂದು ಶುಭ ಮುಹೂರ್ತದಲ್ಲಿ ಹೊಳೆಯುತ್ತದೆ. ಸರಿ. ತಮ್ಮ ಬಂಧುಗಳ ಅಂಗಡಿಯಲ್ಲಿ ಕುಳಿತು ಆರಾಮವಾಗಿ ಸಿಗರೇಟ್ ಎಳೆಯುತ್ತಾ ಮಿತ್ರರೊಡನೆ ಸಲ್ಲಾಪದಲ್ಲಿ ತೊಡಗುವ ದೈನಂದಿನ ಪ್ರಿಯಕಾರ್ಯದಿಂದ ಅವರು ದೂರಾಗಿ ಬಿಡುತ್ತಾರೆ, ಸಂಜೆಯ ವೇಳೆ ಕ್ಲಬ್ಬಿನಲ್ಲಿ ಅವರ ಸ್ನೇಹಿತರೆಲ್ಲ ' ಗೌಡರೆಲ್ಲಿ? ' ಎಂದು ಹುಡುಕುತ್ತಿರುತ್ತಾರೆ; ರಾಜಕೀಯ ಉಭಯಕುಶಲೋಪರಿಗಳಿಗೂ ಅವರು ಸಿಕ್ಕುವುದಿಲ್ಲ. ಒಂದುಸಮನೆ ಮನೆಯಲ್ಲಿ ಪಟ್ಟಾಗಿ ಕುಳಿತು ಪ್ಯಾರೆಲಾಲರ ಗ್ರಂಥವನ್ನು ಕನ್ನಡಿಸಿ ಬಿಡುತ್ತಾರೆ. ಹಸ್ತಪ್ರತಿಗಳ ಕಟ್ಟನ್ನು ಹಿಡಿದು ಮೈಸೂರಿಗೂ ಮಂಡ್ಯಕ್ಕೂ ಓಡಾಡುತ್ತಾರೆ. ಕಾಗದ ಬರೆಯುತ್ತಾರೆ; ಹೇಳಿಕಳಿಸುತ್ತಾರೆ; ಟೆಲಿಫೋನ್ ಎತ್ತಿಕೊಳ್ಳುತ್ತಾರೆ. ಗಾಂಧೀ ಭವನದವರು ಮೂಲ ಲೇಖಕರ ಒಪ್ಪಿಗೆ ಪಡೆಯುವುದು ತಡವಾಗಬಹುದು; ಶಂಕರಗೌಡರ ಅನುವಾದ ಕಾರ್ಯ ವಿಳಂಬಗೊಳ್ಳುವುದಿಲ್ಲ." 9

ನಿಯೋಜಿತ ಭಾಷಾಂತರದಲ್ಲಿ ಈ ಬಗೆಯ ಅರ್ಪಣ ಮನೋಭಾವ ಕಂಡುಬರಬಾರದೆಂಬ ನಿಯಮವೇನೂ ಇಲ್ಲವಾದರೂ, ಇಲ್ಲಿ ಅದರ ತೀವ್ರತೆ ಕಂಡುಬಂದಿರುವುದಕ್ಕೆ ಇದು ನಿಯೋಜಿತ ಭಾಷಾಂತರವಾಗದೆ ಶ್ರೀಯುತರು ತಮ್ಮ ಮೇಲೆ ತಾವೇ ಪ್ರೀತಿಯಿಂದ ಹೊರಿಸಿಕೊಂಡ ಹೊಣೆಯಾಗಿರುವುದೂ—' ಸ್ವಾಂತಃಸುಖಾಯ ' ತೊಡಗಿದ ಸಾಹಸವಾಗಿರುವುದೂ—ಕಾರಣವಾಗಿದೆಯೆಂದು ಹೇಳುವುದು ಸರ್ವಥಾ ಅನುಚಿತವೇನೂ ಆಗಲಾರದು. ಅವರೇ ಈ ಮಾತನ್ನು ಸ್ಪಷ್ಟಪಡಿಸಿದ್ದಾರೆ: " ಬೃಹತ್ತು ಮಹತ್ತುಗಳನ್ನೊಳಗೊಂಡ ಈ ಇಂಗ್ಲಿಷ್ ಕೃತಿಯ ಕನ್ನಡ ಭಾಷಾನುವಾದ ನಮ್ಮ ನಾಡಿನ ಸಾಹಿತಿಗಳ ಸಾಹಸಕ್ಕೆ ಆದುವರೆಗೆ ಸಿಕ್ಕದೇಹೋಗಿದ್ದುದು ಒಂದು ವಿಷಾದಕರ ಸಂಗತಿಯೆಂದು ನನಗನಿಸಿತು. ಸಾಹಿತಿಯಲ್ಲದಿದ್ದರೂ ನಾನೇ ಏಕೆ ಈ ಕೃತಿಯನ್ನು ಭಾಷಾಂತರಿಸಬಾರದು ಎಂಬ ಭಾವನೆ ಮೂಡಿತು. ದಿನೇ ದಿನೇ ಭಾವನೆ(ಯೇನೋ) ಉತ್ಕಟವಾಯಿತು."10

ಗಾಂಧೀಜಿಯವರ ತತ್ತ್ವ-ಆದರ್ಶಗಳಿಗೆ ಸ್ವತಃ ತಮ್ಮ ಬಾಳನ್ನು ನಿವೇದಿಸಿಕೊಂಡಿದ್ದು ನಾಡಿನ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿದ್ದ ಅವರ ಚೇತನದಲ್ಲಿ ಅಧ್ಯಯನ ಚೋದಿತವಾದ ಇಂಥ ಉತ್ಕಟಾಭೀಪ್ಸೆ ಮೂಡಿದ್ದರಿಂದ ಇಂಥ ಕೃತಿಯ ಭಾಷಾಂತರಕ್ಕೆ ಅಗತ್ಯವಾದ ಅರ್ಹತೆಯನ್ನು ಅವರು ತಾವಾಗಿಯೇ ಗಳಿಸಿದಂತಾಗಿತ್ತು. ಪು.ತಿ.ನ ಅವರ ಮಾತನ್ನು ಬಳಸಿಕೊಂಡು ಹೇಳಬಹುದಾದರೆ, ' ನಿಮಜ್ಜನ ಚಾತುರ್ಯ ' ಅಂದರೆ ಕೃತಿಯಲ್ಲಿ ಮುಳುಗಿ ಮಗ್ನವಾಗಬಲ್ಲ ಮನೋಧರ್ಮ ಹಾಗೂ ' ಲಘಿಮಾ ಕೌಶಲ ' ಅಂದರೆ ಅಲ್ಲಿಂದ ಮೇಲೆದ್ದು ಬಂದು ಅದನ್ನು ತಮ್ಮ ಭಾಷೆಯಲ್ಲಿ ಒಡಮೂಡಿಸಬಲ್ಲ ಜಾಣ್ಮೆ ಅವರಲ್ಲಿತ್ತು. ಇದರ ಪರಿಣಾಮವಾಗಿ, ಕುವೆಂಪು ಅವರೆಂದಿರುವಂತೆ " ಆದರ್ಶ ಭಾಷಾಂತರಕಾರನಿಗಿರಬೇಕಾದ ಎಲ್ಲ ಅಧಿಕಾರ ಅರ್ಹತೆಗಳೂ ಶ್ರೀ ಶಂಕರಗೌಡರಿಗಿವೆಯೆಂಬುದಕ್ಕೆ ಈ ಕೃತಿ ಸಮ್ಯಕ್ ಸಾಕ್ಷಿಯಾಗಿದೆ. ಮೂಲಗ್ರಂಥದ ಶಕ್ತಿ, ಸೌಂದರ್ಯಗಳಿಗೆ ಹಾನಿಗ್ಲಾನಿಗಳೊದಗದಂತೆ, ಅದರಲ್ಲಿ ಮೈವೆತ್ತಿರುವ ಭಾವಾನುಭವಗಳಿಗೆ ಧಕ್ಕೆ ತಟ್ಟದಂತೆ, ಅದರ ಸೂಕ್ಷ್ಮತೆ-ಮಾರ್ಮಿಕತೆಗಳಿಗೆ ಅಪೋಹ ಉಂಟಾಗದಂತೆ ಯಶಸ್ವಿಯಾಗಿ ಭಾಷಾಂತರವನ್ನು ನಿರ್ವಹಿಸಿದ್ದಾರೆ."11 ಎಂಬ ಅನುಭವ ಈ ಭಾಷಾಂತರದ ಯಾವನೇ ಓದುಗನಿಗೂ ಆಗದೆ ಇರದು.

ಈ ಮೊದಲೇ ನಾನು ಸೂಚಿಸಿರುವಂತೆ ಇಲ್ಲಿಯು ಒಂದು ಸಮಸ್ಯೆ ಶೈಲಿಗತವಾದುದು. ಸಮಸ್ಯೆಯ ಈ ಸ್ವರೂಪವನ್ನು ಕುವೆಂಪು ಹೀಗೆ ನಿರೂಪಿಸಿದ್ದಾರೆ: " ಮೂಲ ಕೃತಿಯ ಶೈಲಿಯಲ್ಲಿ ಏಕ ರೂಪತೆಯಿಲ್ಲ. ಅದರಲ್ಲಿ ಕೊಂಡಿಯಂತೆ ಪ್ಯಾರೇಲಾಲರ ಭಾಷೆ ಮಾತ್ರವಲ್ಲದೆ, ಇನ್ನೂ ಹಲವರ ಭಾಷಾ ವೈವಿಧ್ಯವಿದೆ. ಉದಾಹರಣೆಗೆ, ಲೌಕಿಕ ವ್ಯವಹಾರ ನಿಷ್ಠವಾದ ಸರ್ಕಾರಿ ಭಾಷೆಯ ಬಿಗಿ ಒಂದು ಕಡೆಯಿದ್ದರೆ, ಗಾಂಧೀಜಿಯ ಅನನುಕರಣೀಯವಾದ ಸರಳ ಭಾಷೆ ಮತ್ತೊಂದು ಕಡೆ ಇದೆ (ಆ ಸರಳತೆ ಭಾಷಾಂತರ

ಕಾರನಿಗೆ ವರವೇನೂ ಅಲ್ಲ; ತದ್ವಿರುದ್ಧವಾಗಿ, ಅವನ ಭಾಷಾಂತರ ಸಾಮರ್ಥ್ಯಕ್ಕೆ ಕಠಿಣ ಓರೆಗಲ್ಲಾಗುತ್ತದೆ."[12] ಈ ಸಮಸ್ಯೆಯೊಡನೆ ಶ್ರೀಯುತರು ಹೇಗೆ ಸೆಣೆಸಿದ್ದಾರೆ ಎಂಬುದಕ್ಕೆ ನಿದರ್ಶನವಾಗಿ ಈ ಕೆಲವು ಪ್ರಸಂಗಗಳನ್ನು ಗಮನಿಸಬಹುದು:

(ಅ) ನಿರೂಪಣಾತ್ಮಕ ಸ್ವರೂಪದ ಒಂದು ವರ್ಣನೆ ಕನ್ನಡದಲ್ಲಿ ಹೀಗೆ ಮೂಡಿದೆ: "ಕತ್ತಲೆ ಕೋಣೆಯ ದೀರ್ಘಾವಧಿ ಬಂದಿಯಾಗಿದ್ದ ಒಬ್ಬ ವೈದ್ಯರನ್ನು ಅನಿರೀಕ್ಷಿತವಾಗಿ ಹಗಲಿನ ಬೆಳಕಿಗೆ ಬಿಟ್ಟಾಗ ಅವರು ನೆಮ್ಮದಿಯಿಲ್ಲದೆ ಕಣ್ಣು ಕಣ್ಣು ಬಿಟ್ಟು, ತನ್ನ ಕತ್ತಲೆಯ ಕೋಣೆಗೆ ವಾಪಸಾಗಲು ಬಯಸಿದ ಕತೆಯನ್ನು ತನ್ನ ಎಂದೆಂದಿಗೂ ಉಳಿಯುವ ಕತೆಗಳಲ್ಲೊಂದರಲ್ಲಿ ಒಬ್ಬ ಆಂಗ್ಲ ಕಾದಂಬರಿಕಾರನು ಚಿತ್ರಿಸಿದ್ದನು. ಸುಮಾರು ಎರಡು ಶತಮಾನಗಳ ದಾಸ್ಯದ ನಂತರ ಸ್ವಾತಂತ್ರ್ಯ ಬಂದಾಗ ಭಾರತವು ವಾಸ್ತವಿಕತೆಯನ್ನು ಜಯಪ್ರದವಾಗಿ ಎದುರಿಸುವುದೇ ಅಥವಾ ಧೈರ್ಯವು ಕುಗ್ಗಿ ತನ್ನ ದಾಸ್ಯದ ನಿಶ್ಚಿಂತತೆ ಮತ್ತು ಭದ್ರತೆಗೆ ಹಿಂದಿರುಗ ಬಯಸುವುದೇ? ಜನರು ಸ್ವಾತಂತ್ರ್ಯದ ಬೆಲೆಯನ್ನು ತೆರಲು ಸಿದ್ಧರಾಗಿರುವರೆ ಮತ್ತು ಸ್ವಾತಂತ್ರ್ಯವು ಕೋರುವ ಮತ್ತು ಆಜ್ಞಾಪಿಸುವ ಅವಶ್ಯಕ ತ್ಯಾಗಗಳನ್ನು ಮಾಡುವರೆ ಅಥವಾ ವಿದೇಶೀ ಆಳಿಕೆಗಾರರು ಅವರಿಗೆ ಅಭ್ಯಾಸಮಾಡಿ ಕೊಟ್ಟಿದ್ದ ವಿನಾಯಿತಿ ಮತ್ತು ಸಾಂಪ್ರದಾಯಿಕ ಹಕ್ಕುಗಳಿಗೆ ಅಂಟಿಕೊಳ್ಳುವರೆ? "[13]

ಇದರ ಮೂಲವನ್ನು ಈಗ ನೋಡಿ:

"An English novelist in one of his immortal stories has depicted a doctor, who when suddenly brought into broad daylight after his long confinement in a dark dungeon, blinks uncomfortably and wants to go back into the unlighted gloom of his cell. Would India have the courage to face up to the reality when overtaken by independence after nearly two centuries of subjection, or would her courage fail her and she would want to go back to the ease and security of her servitude? Would the people be ready to pay the price of freedom and make the necessary sacrifices that freedom demands and commands or would they want to cling to the privileges and perquisites to which the alien rulers had accustomed them?"[14]

ಅಥವಾ ಗಾಂಧೀಜಿಯವರ ಹೃದಯವೇ ಸ್ಪಂದಿಸುವ ಇಂಥ ನೇರವೂ ಸರಳವೂ ಆದ, ಚಿಕ್ಕ ಚೊಕ್ಕ ವಾಕ್ಯಗಳಿಂದ ಕೂಡಿದ ಹೇಳಿಕೆಯನ್ನು ತೆಗೆದುಕೊಳ್ಳಿ:

(ಆ) "I am surprised that Shri Jayaprakash Narayan said yesterday that it would be dangerous to participate in the proposed Constituent Assembly and they should, therefore, reject the Working Committee's resolution. I was not prepared to hear such defeatist language from the lips of a tried fighter like Jayaprakash....A Satyagrahi knows no defeat. x x x

A Satyagrahi lays down his life, but never gives up. That is the meaning of "Do or Die." x x x This is no time for dalliance or ease....The constituent assembly is going to be no bed of roses for you but a bed of thorns. You may not shirk it.[15]

ಇದು ಕನ್ನಡದಲ್ಲಿ ಹೇಗೆ ಮೈದಳೆಯುತ್ತದೆ ಎಂಬುದನ್ನು ನೋಡಿ:

> "ಸೂಚಿತವಾಗಿರುವ ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸುವುದು ಅಪಾಯಕಾರಿಯಾದುದರಿಂದ ಕಾರ್ಯನಿರ್ವಾಹಕ ಸಮಿತಿಯು ನಿರ್ಣಯವನ್ನು ತಿರಸ್ಕರಿಸಬೇಕೆಂದು ಜಯಪ್ರಕಾಶ್ ನಾರಾಯಣ್‌ರವರು ಹೇಳಿದುದು ನನಗೆ ಆಶ್ಚರ್ಯವನ್ನುಂಟುಮಾಡಿದೆ. ಜಯಪ್ರಕಾಶ್‌ರವರಂಥ ನುರಿತ ಹೋರಾಟಗಾರರ ಬಾಯಿಂದ ಅಂಥ ಹತಾಶಾಭಾಷೆಯನ್ನು ಕೇಳಲು ನಾನು ತಯಾರಿರಲಿಲ್ಲ...ಸತ್ಯಾಗ್ರಹಿಯಾದವನು ಸೋಲೆಂಬುದನ್ನರಿಯ. + +
>
> ಸತ್ಯಾಗ್ರಹಿಯಾದವನು ಪ್ರಾಣವನ್ನಾದರೂ ತೆತ್ತಾನೆಯೇ ಹೊರತು ತನ್ನ ಪ್ರಯತ್ನವನ್ನು ಬಿಡುವುದಿಲ್ಲ. ಅದೇ "ಮಾಡು ಇಲ್ಲವೇ ಮಡಿ" ಎಂಬುದರ ಅರ್ಥ. + +
>
> ಇದು ಆಲಸ್ಯದ, ಆರಾಮದ ಕಾಲವಲ್ಲ...ರಾಜ್ಯಾಂಗ ರಚನಾಸಭೆ ಹೂವಿನ ಸುಪ್ಪತ್ತಿಗೆಯಲ್ಲ, ಮುಳ್ಳಿನ ಹಾಸಿಗೆ. ನೀವು ಅದರಿಂದ ಹಿಂಜರಿಯಬೇಕಾಗಿಲ್ಲ."[16]

ಅಂತೆಯೇ, ನೋವಾಖಲಿಯ ನರಕದ ವರ್ಣನೆಯನ್ನೊಳಗೊಂಡಿರುವ ಕುಮಾರಿ ಮ್ಯೂರಿಯಲ್ ಲೆಸ್ಟರ್ ಅವರ ವರದಿಯ ಒಂದು ಭಾಗವನ್ನೂ ಅದರ ಅನುವಾದವನ್ನೂ ಪರಿಶೀಲಿಸಬಹುದು. ಮೂಲ ಹೀಗಿದೆ:

(ಇ) "The *worst* of all was the *plight* of the women. Several of them had to watch their husbands being murdered and then forcibly converted and married to some of those responsible for their death. These women had a *dead look*. It was not despair, *nothing so active as that*. It was utter blankness...."[17]

> ಇದರ ಕನ್ನಡ ಅನುವಾದದಲ್ಲಿ ಕನ್ನಡದ ಕರುಳೇ ಕಲಕಿ ಹೋಗಿರುವುದನ್ನು ಕಾಣಬಹುದು: "ಎಲ್ಲದಕ್ಕಿಂತಲೂ ಘೋರವಾದದ್ದು ಹೆಂಗಸರ ಗೋಳು. ಅವರಲ್ಲನೇಕರು ತಮ್ಮ ಗಂಡಂದಿರು ತಮ್ಮೆದುರೇ ಕೊಲೆಯಾದುದನ್ನು ನೋಡಿ, ಅನಂತರ ಬಲವಂತ ಮತಾಂತರಕ್ಕೆ ಗುರಿಯಾಗಿ, ಯಾರು ತಮ್ಮ ಗಂಡಂದಿರ ಸಾವಿಗೆ ಕಾರಣರಾಗಿದ್ದರೋ ಅವರನ್ನೇ ಮದುವೆಯಾಗಬೇಕಾಗಿತ್ತು. ಈ ಹೆಂಗಸರ ಮುಖದ ಮೇಲೆ ಪ್ರೇತಕಳೆ. ಅದು ಹತಾಶೆಯಾಗಿರಲಿಲ್ಲ, ಏಕೆಂದರೆ ಹತಾಶೆಯಲ್ಲಿಯೂ ಒಂದು ಚೇತನವಿರುತ್ತದೆ. ಅದು ಸಂಪೂರ್ಣ ಶೂನ್ಯತೆ..."[18]

ಇದೇ ರೀತಿ, ಸಂಭಾಷಣೆಯ ಜೀವಂತಿಕೆ ಕನ್ನಡದಲ್ಲೂ ಹೇಗೆ ಉಳಿದುಕೊಂಡು ಬಂದಿದೆ ಎಂಬುದಕ್ಕೆ ಸಾಕ್ಷಿಯಾಗಿ ಈ ಪ್ರಸಂಗವನ್ನು ನೋಡಬಹುದು:

(ಈ) ಗಾಂಧೀಜಿ:" ...ಸಹಸ್ರಾರು ಹಿಂದು-ಮುಸ್ಲಿಂ ಹೆಂಗಸರು ನನ್ನ ಹತ್ತಿರ ಬರುತ್ತಾರೆ. ಅವರು ನನಗೆ ಸ್ವಂತ ತಾಯಂದಿರಂತೆ, ಸೋದರಿಯರಂತೆ, ಹೆಣ್ಣುಮಕ್ಕಳಂತೆ ಇರುತ್ತಾರೆ. ಆದರೆ, ಅವರಲ್ಲಿ ಯಾರೊಬ್ಬರ ಜೊತೆಯಲ್ಲಾದರೂ ಒಂದೇ ಹಾಸಿಗೆಯಲ್ಲಿ ಮಲಗುವ ಸಂದರ್ಭ ಒದಗಿ ಬಂದರೆ, ನಾನು ಎಂಥ ಬ್ರಹ್ಮಚಾರಿ ಎಂದು ಹೇಳಿಕೊಳ್ಳುತ್ತೇನೆಯೋ ಅಂಥ ಬ್ರಹ್ಮಚಾರಿಯೇ ಆಗಿದ್ದರೆ, ಹಾಗೆ ಒಂದೇ ಹಾಸಿಗೆಯಲ್ಲಿ ಮಲಗಿಕೊಳ್ಳಲು ಹಿಂಜರಿಯಲಾಗದು. ಆ ಪರೀಕ್ಷೆಗೆ ನಾನು ಹಿಂಜರಿದರೆ ನಾನು ಹೇಡಿಯೆಂದು, ಮೋಸಗಾರನೆಂದು ಭಾವಿಸಿಕೊಳ್ಳುತ್ತೇನೆ."

ಬಾಪಾ: "ನಿಮ್ಮ ಉದಾಹರಣೆಯನ್ನು ಅನುಸರಿಸಿದರೆ?"

ಗಾಂಧೀಜಿ: "ನನ್ನ ಉದಾಹರಣೆಯನ್ನು ಕುರುಡಾಗಿ, ಅನುಕರಿಸಿದರೆ ಅಥವಾ ನೀತಿ ನಿಷ್ಠೆಯಿಲ್ಲದೆ ಶೋಷಣೆಗೆ ಗುರಿಮಾಡಿದರೆ ಸಮಾಜ ಅದನ್ನು ಸಹಿಸುವುದಿಲ್ಲ, ಸಹಿಸಬಾರದು. ಆದರೆ ಶುದ್ಧ, ಪ್ರಾಮಾಣಿಕ, ಸತ್ಯಸಂಧ ಪ್ರಯತ್ನವಿದ್ದರೆ, ಸಮಾಜ ಅದನ್ನು ಸ್ವಾಗತಿಸಬೇಕು.

ಬಾಪಾ: "ನಿಮ್ಮಲ್ಲಿ ಯಾವ ನೀಚತನವನ್ನೂ ನಾನು ಊಹಿಸುವವನಲ್ಲ. ಹೇಗೂ ಮನು ನಿಮ್ಮ ಮಾಂಸದ ಮಾಂಸವೇ ಆಗಿ ಮೂಳೆಯ ಮೂಳೆಯೇ ಆಗಿ ನಿಮ್ಮ ಮೊಮ್ಮಗಳ ಸ್ಥಾನದಲ್ಲಿದ್ದಾಳೆ. ಮೊದಮೊದಲು ನನಗೆ ಮಾನಸಿಕ ಅಭ್ಯಂತರಗಳಿದ್ದುವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ....ನೀವು ಮಾಡಲು ಪ್ರಯತ್ನಿಸುತ್ತಿರುವುದರ ಅರ್ಥದ ಆಳವಾದ ಅರಿವು ಇಂದಿನ ನಮ್ಮ ಮಾತುಗಳಿಂದ ನನಗುಂಟಾಯಿತು."[19]

ಇದರ ಮೂಲ ಹೀಗಿದೆ :

"Gandhiji....Thousands of Hindu and Muslim women come to me. They are to me like my own mothers, sisters and daughters. But, if an occasion should arise requiring me to share the bed with any of them, I must not hesitate, if I am the Brahmachari that I claim to be. If I shrink from the test, I write myself down as a coward and a fraud."

Bapa : "What if your example is copied ?

Gandhiji : "If there is blind imitation or unscrupulous exploitation of my example, society will not and should not tolerate it. But if there is sincere, bonafide, honest endeavour society should welcome it...."

Bapa : "I for one cannot imagine anything base in you. After all Manu is in place of a grand–daughter to you–flesh of your flesh and bone of your bone. I confess, I had my mental reservations in the beginning....only after our talk today have I been able to have a deeper understanding of the meaning of what you are trying to do."[20]

ಇವುಗಳಲ್ಲಿ ಯಾವೊಂದು ಪ್ರಸಂಗವನ್ನೂ ಉದ್ದೇಶಪೂರ್ವಕವಾಗಿ ನಾನು ಆಯ್ದಿಲ್ಲ; ಅಷ್ಟೇ ಅಲ್ಲ, ಯಾದೃಚ್ಛಿಕವಾಗಿ ಕೈ ಇರಿಸಿದ ಪುಟಗಳಲ್ಲಿ ಕಣ್ಣಿಗೆ ಬಿದ್ದ ಭಾಗಗಳು ಇವು. ಇವುಗಳನ್ನು ನೋಡಿದಾಗ "ಅನುವಾದದಲ್ಲಿ ಮೂಲಕೃತಿಯ ವಾಚ್ಯಾರ್ಥ ಭಾವಾರ್ಥಗಳಿಗೆ ಚ್ಯುತಿ ಬಾರದಂತೆ ಅಪಾರ ಶ್ರದ್ಧೆ ವಹಿಸಿದ್ದೇನೆ"[21] ಎಂಬ ಅನುವಾದಕರ ಅರಿಕೆಯ ಮಾತು ಪೂರ್ಣವಾಗಿ ಮನವರಿಕೆಯಾಗುವುದು ಮಾತ್ರವಲ್ಲ, ಕುವೆಂಪು ಅವರೆಂದಿರುವಂತೆ "ಶ್ರೀ ಶಂಕರಗೌಡರ ಲೇಖನಿ ಎಲ್ಲರ ಭಾಷೆಯೊಡನೆ ಸ್ಪರ್ಧಿಸಿ, ಸೆಣಸಿ ಗೆದ್ದಿದೆ"[22] ಎಂದೂ ಅನಿಸುತ್ತದೆ. ಕನ್ನಡದ ಜಾಯಮಾನಕ್ಕೆ ಅನುಗುಣವಾದ ನುಡಿಗಟ್ಟನ್ನು ಬಳಸುವಲ್ಲಿ, ವಾಕ್ಯರಚನೆಯನ್ನು ಅಳವಡಿಸಿಕೊಳ್ಳುವಲ್ಲಿ ಅನುವಾದಕರು ಒಂದು ಮಾದರಿಯನ್ನೂ

ಮುಂದುವರಿಸಿದ್ದಾರೆ ಎಂದೂ ಅನ್ನಿಸುತ್ತದೆ. ಕುವೆಂಪು ಅವರ ಮಾತನ್ನೇ ಮುಂದುವರಿಸುವುದಾದರೆ, "ಗೌಡರ ಅನುವಾದದಲ್ಲಿ ಜಾಳೂ ಇಲ್ಲ, ಜಳ್ಳೂ ಇಲ್ಲ; ಎಲ್ಲವೂ ಗಟ್ಟಿ."23

ಈ ನಿದರ್ಶನಗಳಲ್ಲಿಯೇ ಅನುವಾದಕನನ್ನು ಸುಲಭವಾಗಿ ಹಳ್ಳಕ್ಕೆ ಕೆಡವಿಬಿಡಬಹುದಾಗಿರುವಂಥ ಸಂದರ್ಭಗಳು ಇವೆ: ಉದಾಹರಣೆಗೆ, "nothing so active as that" ಎಂಬ ಪದಪುಂಜ. ಇದನ್ನು ಗೌಡರು ಮಾಡಿರುವಂತೆ," ಏಕೆಂದರೆ, ಹತಾಶೆಯಲ್ಲಿಯೂ ಒಂದು ಚೇತನವಿರುತ್ತದೆ" ಎಂದು ಮಾಡದೆ, ಮಕ್ಕೀ-ಕಾ-ಮಕ್ಕಿಯಾಗಿ ಶಬ್ದಾನುವಾದವನ್ನೇನಾದರೂ ಇರಿಸಿದ್ದರೆ, ಇಡೀ ಪ್ರಸಂಗದ ಕರುಣೆಯು ಕೂಗೇ ಸತ್ತುಹೋಗುತ್ತಿತ್ತು. ಮೂಡಿದ ಭಾವವನ್ನು ಅವರು ಎಷ್ಟು ಸಮರ್ಥವಾಗಿ ಸೆರೆಹಿಡಿಯಬಲ್ಲರು ಎಂಬುದಕ್ಕೆ ಈ ಕೃತಿಯಲ್ಲಿ ಇಂಥ ನೂರಾರು ನಿದರ್ಶನಗಳು ಸಿಗುತ್ತವೆ. ಇಂಥ ಸಂದರ್ಭಗಳಲ್ಲಿ ಅನುವಾದಕ ಸುಲಭವಾಗಿ ಬಲಿಯಾಗಿ ಬಿಡುವುದು ವಿಸ್ತರಣೆ ಮತ್ತು ಪ್ರಕ್ಷೇಪಗಳಿಗೆ. ಆದರೆ. ಗೌಡರು "ಅಕ್ಷಮ ಭಾಷಾಂತರಕಾರರ ಕೈಯಲ್ಲಿ ಮೂಲ ಅನಗತ್ಯವಾಗಿ ವಿಸ್ತೃತವಾಗುತ್ತದೆ" ಎಂಬ ರಹಸ್ಯವನ್ನು ಅರಿತಿರುವವರಂತೆ ನಿಷ್ಠಾಪೂರ್ವಕವಾಗಿ ಅನುವಾದ ಕಾರ್ಯವನ್ನು ವಹಿಸಿದ್ದಾರೆ. ಪ್ರತಿಭಾನದಿಂದ ಮಾರ್ಗವನ್ನು ಕಂಡುಕೊಂಡಿದ್ದಾರೆ. ಪದಗಳ ಆಯ್ಕೆಯಲ್ಲಿ ಅವರು ತೋರಿರುವ ಜಾಣ್ಮೆ—ಉದಾಹರಣೆಗೆ, 'worst'. 'plight.' 'dead look' ಇವುಗಳಿಗೆ ಪರ್ಯಾಯವಾಗಿ ಅವರು ಆಯ್ದಿರುವ 'ಘೋರ,' 'ಗೋಳು.' 'ಪ್ರೇತಕಳೆ' ಎಂಬ ಶಬ್ದಗಳಿಗಿಂತ ಹೆಚ್ಚು ಉಚಿತವಾದ ಶಬ್ದಗಳನ್ನು ಸೂಚಿಸುವುದು ಕಷ್ಟ, ಬಹುಶಃ ಅಸಾಧ್ಯ—ಇದಕ್ಕೆ ಸಾಕ್ಷಿ ನುಡಿಯುತ್ತದೆ.

ತಮ್ಮ ಅನುವಾದಕಾರ್ಯದಲ್ಲಿ ಎದುರಾದ ಇಂಥ ಸಮಸ್ಯೆಗಳಲ್ಲಿ ಕೆಲವನ್ನು ಅವರು ತಮ್ಮ ಅರಿಕೆಯಲ್ಲಿ ಉಲ್ಲೇಖಿಸಿದ್ದಾರೆ. ಅಂಥ ಒಂದು ಸಮಸ್ಯೆ ಈ ಕೃತಿಯಲ್ಲಿ ಅಲ್ಲಲ್ಲಿ ಬರುವ ಪದ್ಯಗಳಿಗೆ ಸಂಬಂಧಿಸಿದ್ದು. ಅದರ ಬಗ್ಗೆ ಅವರು ವಿನಯಪೂರ್ಣವಾಗಿ ಹೀಗೆಂದಿದ್ದಾರೆ: "ಈ ಅನುವಾದ ಕಾರ್ಯದಲ್ಲಿ ನಾನು ಕೆಲವು ಅಡಚಣೆಗಳನ್ನು ಎದುರಿಸಬೇಕಾಗಿ ಬಂತು. ಅಂಥವುಗಳಲ್ಲಿ ಪ್ರಧಾನವಾಗಿದ್ದುದು ಮೂಲ ಕೃತಿಯಲ್ಲಿ ಉಲ್ಲೇಖಿಸಿರುವ ಆಂಗ್ಲಕವನಗಳು. ನಾನು ಗದ್ಯರಚನೆಯಲ್ಲಿ ಕೈಯಾಡಿಸಿರುವುದುಂಟು. ಆದರೆ, ಪದ್ಯರಚನೆಯಲ್ಲಿ ನನಗೆ ಪರಿಶ್ರಮವಿಲ್ಲ. ಮೊದಲು ಅವುಗಳ ಭಾವವನ್ನು ಗದ್ಯರೂಪದಲ್ಲೇ ಕೊಟ್ಟರಾಯಿತು ಎಂದುಕೊಂಡೆ. ಆದರೆ ಹಾಗೆ ಮಾಡಿದರೆ ಯಥಾವತ್ತಾದ ಅನುವಾದವಾಗದೆ ಹೋಗಬಹುದೆಂಬ ಶಂಕೆಯುಂಟಾಯಿತು. ಆದುದರಿಂದ ಆ ಆಂಗ್ಲ ಕವನಗಳನ್ನು ಪದ್ಯರೂಪದಲ್ಲಿಯೇ ಅನುವಾದ ಮಾಡಬೇಕೆಂದು ನಿರ್ಧರಿಸಿ ನನ್ನ ಅಲ್ಪಮತಿಗೆ ಸಾಧ್ಯವಾದಷ್ಟು ಮಟ್ಟಿಗೆ ಅವುಗಳನ್ನು ಮುಕ್ತ ಛಂದಸ್ಸು ಅಥವಾ ಸರಳ ರಗಳೆಯಲ್ಲಿ ಅನುವಾದ ಮಾಡಿದ್ದೇನೆ."24 ಅವರು ಅನುವಾದ ಮಾಡಬೇಕಾಗಿ ಬಂದಂಥ ರಚನೆಗಳಾದರೂ ಯಾರವು? ರವೀಂದ್ರನಾಥ ಠಾಕೂರರಂಥ ಮಹಾಕವಿಯವು; 'ಭಗವದ್ಗೀತೆ'ಯಂಥ ಲೋಕೋತ್ತರ ಕೃತಿಯವು. ಇಂಥ ಎರಡು ನಿದರ್ಶನಗಳನ್ನು ಮಾತ್ರ ಇಲ್ಲಿ ಉದಾಹರಿಸುತ್ತೇನೆ. ಮೊದಲನೆಯದು ರವೀಂದ್ರರ ವಿಖ್ಯಾತ ಕವನಗಳಲ್ಲೊಂದು. ಅದು ಹೀಗಿದೆ:

"Walk alone
If they answer not thy call, walk alone ;
If they are afraid and cower mutely facing the wall,
O thou of evil luck,
Open thy mind and speak out alone,
If they turn away and desert you when crossing the wildness,
O thou of evil luck,
Trample the throns under thy tread,

and along the blood-lined track travel alone.
If they do not hold up the light
When the night is trobled with storm,
O thou of evil luck,
With the thunder-flame of pain ignite thine own heart.
and let it burn alone. ''[25]

ಇದನ್ನು ಗೌಡರು ಹೀಗೆ ಕನ್ನಡಿಸುತ್ತಾರೆ:

"ಒಂಟಿಯಾಗಿ ನಡೆ.
ನಿನ್ನ ಕರೆಗೆ ಅವರು ಓಗೊಡದಿರೆ ಒಂಟಿಯಾಗಿ ನಡೆ.
ಅವರು ಹೆದರಿ ಸೊಲ್ಲುಡುಗಿ ಮೌನದಿಂ ಗೋಡೆಗೆ ಮುಖ ತಿರುವಿಸಿರೆ,
ಓ ನಿರ್ಭಾಗ್ಯನೆ,
ನಿನ್ನ ಮನದೆರೆದು ಒಂಟಿಯಾಗಿ ನುಡಿ.
ನಿರ್ಜನ ಪ್ರದೇಶವನು ದಾಟುವಾಗ
ಓಡಿಹೋದವರು ನಿನ್ನ ಕೈ ಬಿಡೆ,
ಓ ನಿರ್ಭಾಗ್ಯನೆ,
ನಿನ್ನ ಪಾದದಡಿ ಮುಳ್ಳುಗಳನು ತುಳಿದು
ರಕ್ತ ಲೇಪಿತ ಹಾದಿಯಲಿ ಒಂಟಿಯಾಗೆ ನಡೆ,
ಬಿರುಗಾಳಿ ಇರುಳನು ಕಲಕಿರುವಾಗ,
ಅವರು ಬೆಳಕನು ಚೆಲ್ಲದಿರೆ,
ಓ ನಿರ್ಭಾಗ್ಯನೆ,
ಸಿಡಿಲು ಜ್ವಾಲೆಯ ನೋವಿನಲಿ
ನಿನ್ನ ಹೃದಯವನು ಪ್ರಜ್ವಲಿಸು:
ಅದು ಒಂಟಿಯಾಗಿ ಬೆಳಗಲಿ."[26]

ಇದು ಸತ್ಯವಷ್ಟೇ ಅಲ್ಲ, ಸ್ಪೃಹಣೀಯವೂ ಆಗಿದೆ ಎಂಬುದಕ್ಕೆ ಬೇರೆ ಸಾಕ್ಷಿ ಬೇಕಿಲ್ಲ.

ಈ ಬಗೆಯ ಪ್ರಸಂಗಕ್ಕಿಂತ ಭಿನ್ನವಾದ ಸಮಸ್ಯೆ ಎದುರಾಗುವುದು ' ಭಗವದ್ಗೀತೆ 'ಯಂಥ ಕೃತಿಗಳಿಂದ ಉದ್ಧರಣಗಳು ಕಾಣಿಸಿಕೊಂಡಾಗ. ಉದಾಹರಣೆಗೆ ' ಭಗವದ್ಗೀತೆ 'ಯ ಈ ಇಂಗ್ಲಿಷ್ ಉದ್ಧರಣ (Edwin Arnold ಅವರ ' The Song Celestial 'ನಿಂದ): ಹೀಗೆ ಓದುತ್ತದೆ.

" The mind
That gives itself to follow shows of sense
Seeth its helm of wisdom rent away,
And like a ship in waves of whirlwind, drives
To wreck and death. Only with him, great prince !
whose senses are not swayed by things of sense·
only with him who holds his mastery,
shows wisdom perfect. What is midnight gloom

To unenlightened souls shines wakeful day
Is known. for night, thick night of ignorance,
To his true-seeing eyes. Such is the Saint !

And like the ocean, day by day receiving
Floods from all lands, which never overflows ;
Its boundary line not leaping, and not leaving,
Fed by the rivers, but unswelled by those ;
So is the perfect one ! to his soul's ocean
The world of sense pours streams of witchery
They leave him as they find without commotion,

Taking their tribute, but remaining sea.
yea ! whoso, shaking off the yoke of flesh
Lives lord, not servant, of his lusts ; set free
From pride, from passion, from the sin of " Self, "
Toucheth tranquility ! O Prithas Son !
That is the state of Brahma ! There rests no dread
when that last step is reached ! Live where he will,
Die when he may, such passeth from all ‘ plaining ’
To blest Nirvana, with the Gods, attaining." [27]

ಔಚಿತ್ಯವನ್ನರಿತ ಅವರ ಅನುವಾದ ಪ್ರಜ್ಞೆ ಈ ಭಾಗವನ್ನು ಯಥಾವತ್ತಾಗಿ ಈ ದ್ವಿತೀಯ ಮೂಲದಿಂದ ಭಾಷಾಂತರಿಸಿಕೊಳ್ಳದೆ, ನೇರವಾಗಿ ಮೂಲವನ್ನೇ ಅರಸಿ ಭಾಷಾಂತರಿಸಿಕೊಳ್ಳುತ್ತದೆ. ಇಲ್ಲವಾದಲ್ಲಿ ಇದು ಇಷ್ಟು ಒಪ್ಪ, ಓರಣ, ಸಂಗ್ರಹ ಗುಣಗಳಿಂದ ಮೆರೆಯಲು ಸಾಧ್ಯವಾಗುತ್ತಿರಲಿಲ್ಲ. ಆ ಅನುವಾದ ಹೀಗಿದೆ:

" ಚಂಚಲೇಂದ್ರಿಯಗಳನನುಸರಿಸುವಾ ಮನಂ
ಬಿರುಗಾಳಿ ನಾವೆಯಂ ಸೆಳೆದೊಯ್ವಂತೆ
ಮಾನವನ ಪ್ರಜ್ಞೆಯಂ ಸೆಳೆದೊಯ್ವುದು.
ಅದ್ದರಿಂ, ಮಹಾಬಾಹುವೇ,
ತನ್ನಿಂದ್ರಿಯಂಗಳಂ ಐಂದ್ರಿಕ ವಸ್ತುಗಳಿಂ ನಿಗ್ರಹಿಸಿದಾತಂಗೆ
ಪ್ರಜ್ಞಾ ಸಮತೂಕವಿಹುದು.
ಆವುದು ಸರ್ವಭೂತಂಗಳಿಗೆ ರಾತ್ರಿಯೋ
ಅದು ಮುನಿಗೆ ಜಾಗ್ರತ್ ಸಮಯಂ
ಆವಾಗ ಸರ್ವಭೂತಂಗಳ್ ಜಾಗ್ರತವಿಹವೋ
ಆಗ ಮುನಿಗೆ ರಾತ್ರಿ.
ಎಲ್ಲ ಕಡೆಯಿಂ ನೀರು ಸಾಗರಮಂ ಸೇರ್ದೊಡಂ
ಅದು ತುಂಬಿ ಮೀರೆ ಮೀರದಚಲಮಿರುವಂತೆ
ಎಲ್ಲ ಬಯಕೆಗಳ್ ಮುತ್ತಿದೊಡಂ
ನಿಷ್ಕಾಮಿಯಾಗಿರುವಾತಂ ಶಾಂತಿಯಂ ಪಡೆವಂ.

ಆವಂ ಎಲ್ಲ ಕಾಮವಿಮುಕ್ತಿಯಿಂ ನಿಃಸ್ಪೃಹನಿಹನೋ
ಆವಂ ಅಹಂಕಾರ ಮಮಕಾರ ರಹಿತನೋ
ಆತನೇ ಶಾಂತಿಯಂ ಪಡೆಯುವಾತಂ.
ಓ ಪಾರ್ಥನೆ, ಇದೇ ಬ್ರಾಹ್ಮೀ ಸ್ಥಿತಿ.
ಈ ಸ್ಥಿತಿಗೇರಿದಾ ಮಾನವಂ ಭ್ರಾಂತಿಗೊಳಗಾಗದಿರುವನ್.
ಈ ಸ್ಥಿತಿಯಲಿರುವಾತಂ ಮರಣ ಘಳಿಗೆಯೊಳುಂ
ಬ್ರಹ್ಮ ನಿರ್ವಾಣಮುಂ ಪಡೆಯುವಂ."28

ಇದನ್ನು ನೋಡಿದಾಗ, ಸಹಜವಾಗಿಯೇ ನಮ್ಮ ಮನಸ್ಸು

"ಇಂದ್ರಿಯಾಣಾಂ ಹಿ ಚರತಾಂ ಯನ್ಮನೋಽನುವಿಧೀಯತೇ।
ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥
ತಸ್ಮಾದಸ್ಯ ಮಹಾಬಾಹೋ ನಿಗೃಹೀತಾನಿ ಸರ್ವಶಃ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥
ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥

ಆಪೂರ್ಯಮಾಣಮಚಲಪ್ರತಿಷ್ಠಂ
ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
ತದ್ವತ್ಕಾಮಾಯಂ ಪ್ರವಿಶಂತಿ ಸರ್ವೇ
ಸ ಶಾಂತಿಮಾಪ್ನೋತಿ ನ ಕಾಮಕಾಮೀ ।

ವಿಹಾಯ ಕಾಮಾನ್ ಯಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ ।
ನಿರ್ಮಮೋ ನಿರಹಂಕಾರಃ ಸಶಾಂತಿ ಮಧಿಗಚ್ಛತಿ ॥
ಏಷಾ ಬ್ರಾಹ್ಮೀ ಸ್ಥಿತಿಃ ಪಾರ್ಥ ನೈನಾಂ ಪ್ರಾಪ್ಯ ವಿಮುಹ್ಯತಿ ।
ಸ್ಥಿತ್ವಾಽ ಸ್ಯಾಮಂತಕಾಲೇಽ ಪಿ ಬ್ರಹ್ಮ ನಿರ್ವಾಣ ಮೃಚ್ಛತಿ ॥ "29

ಎಂಬ 'ಭಗವದ್ಗೀತೆ'ಯ ಎರಡನೆಯ ಅಧ್ಯಾಯದ ಈ ಕೊನೆಯ ಶ್ಲೋಕಗಳನ್ನು ಸಹಜವಾಗಿಯೇ ನೆನೆಯುತ್ತದೆ.

ಇವನ್ನೆಲ್ಲ ಗಮನಿಸಿದಾಗ ಈ ಭಾಷಾಂತರ ಮೂಲಕ್ಕೆ ತುಂಬ ವಿಧೇಯಕವಾಗಿದೆ; ಕನ್ನಡದಲ್ಲಿಯೇ ಮೂಲತಃ ರಚಿತವಾಗಿರುವಂಥ ಕೃತಿಯೆಂಬ ಭಾವನೆಯನ್ನುಂಟುಮಾಡುತ್ತದೆ; ಭಾಷಾಂತರದ ಓದುಗ ಆನಂದಕ್ಕೆ ಭಾಗಿಯಾಗುವಂಥ ಅದೃಷ್ಟ ಇದರಲ್ಲಿ ಲಭ್ಯವಾಗುತ್ತದೆ; ಗುಣಗಾತ್ರಗಳ ದೃಷ್ಟಿಯಿಂದ ಮೂಲಕ್ಕೆ ತುಂಬ ಸಂವಾದಿಯಾಗಿದೆ—ಕುವೆಂಪು ಅವರ ಮಾತನ್ನೂ ಬಳಸಿಕೊಂಡು ಹೇಳುವುದಾದರೆ, "ಅನುರೂಪತಾ ತತ್ತ್ವವನ್ನು ಈ ಭಾಷಾಂತರ ನಿಷ್ಠಾಪೂರ್ವಕವಾಗಿ, ಪ್ರಾಮಾಣಿಕವಾಗಿ ಪಾಲಿಸಿದೆ. ಯಾವುದೇ ಭಾಗವನ್ನು ತೆಗೆದುಕೊಂಡು ನೋಡಿದರೂ ಮೂಲಪುಸ್ತಕದ ಒಂದು ಪುಟ ಸಾಮಾನ್ಯವಾಗಿ ಭಾಷಾಂತರದಲ್ಲೂ ಒಂದು ಪುಟದಷ್ಟೇ ಆಗಿರುವುದನ್ನು ಗಮನಿಸಬಹುದು."30—ಹೀಗಾಗಿ, ಭಾಷಾಂತರದ ತತ್ತ್ವಗಳ ಒರೆಗಲ್ಲಿನಲ್ಲಿ ಚೊಕ್ಕ ಚಿನ್ನವಾಗಿ ಹೊರಬರುತ್ತದೆ. ವಿಧೇಯತಾತತ್ತ್ವ, ಮೂಲಾಭಾಸತ್ವ, ಆನಂದತತ್ತ್ವ ಹಾಗೂ ಅನುರೂಪತಾ ತತ್ತ್ವಗಳ ಪಾಲನೆಗೆ ಒಂದು ಮಾದರಿಯನ್ನೇ ಒದಗಿಸುತ್ತದೆ ಎಂಬುದರಲ್ಲಿ ಯಾರಿಗೂ ಅನುಮಾನ ಉಂಟಾಗುವುದಿಲ್ಲ. ಹಾಗೂ ಇಂಥ ಭಾಷಾಂತರವನ್ನು ನೀಡಿದ್ದಕ್ಕಾಗಿ ಅನುವಾದಕರನ್ನು ಅಭಿನಂದಿಸುವುದು ಈ ಕಾರಣಕ್ಕಾಗಿ ಓದುಗರ ಕರ್ತವ್ಯವೂ ಆಗುತ್ತದೆ.

ಇಷ್ಟೆಲ್ಲ ಗುಣಗಳಿಂದ ವಿಭೂಷಿತವಾಗಿರುವ ಈ ಅನುವಾದ ಆದರ್ಶ ಅನುವಾದವಾಗಬಹುದಾಗಿದ್ದ ಅವಕಾಶವನ್ನು ಸ್ವಲ್ಪದರಲ್ಲಿ ಕಳೆದುಕೊಂಡು ಬಿಟ್ಟಿದೆ. ಹಾಗೆ ನೋಡಿದರೆ, ಡರೋತಿ ಎಲ್.

ಸೇಯರ್ಸ್ ಹೇಳಿರುವಂತೆ," "ಯಾವ ಭಾಷಾಂತರವೂ ಕೊನೆಯದಲ್ಲ; ಯಾವ ಭಾಷಾಂತರವೂ ಪರಿಪೂರ್ಣವಾದುದಲ್ಲ." 'ಮಹಾತ್ಮ ಗಾಂಧೀ—ಅಂತಿಮ ಹಂತ'ದ ಭಾಷಾಂತರವೂ ಈ ಹೇಳಿಕೆಗೆ ಅಪವಾದವೆನ್ನಿಸುವುದಿಲ್ಲ.

ಈ ಕಾರಣದಿಂದಾಗಿ, ಈ ಅನುವಾದದ ಕೆಲವೊಂದು ದೌರ್ಬಲ್ಯಗಳನ್ನು ಅಥವಾ ಅರೆಕೊರೆಗಳನ್ನು ಸೂಚಿಸುವುದು ಅಪ್ರಕೃತವಾಗಲಾರದೆಂದು ನಾನು ಭಾವಿಸಿದ್ದೇನೆ.

ಮೊದಲಿಗೆ ನಾವು ಗಮನಿಸಬೇಕಾದ ಸಂಗತಿಯೆಂದರೆ, ಈ ಕೃತಿಯ ಅನುವಾದಕರು ವೃತ್ತಿಶೀಲ ಅನುವಾದಕರಲ್ಲ. ಹೀಗೆಂದ ಮಾತ್ರಕ್ಕೆ ವೃತ್ತಿಶೀಲ ಅನುವಾದಕರು ಮಾತ್ರವೇ ಯಥಾರ್ಥ ಭಾಷಾಂತರವನ್ನು ಕೊಡಬಲ್ಲರು ಹಾಗೂ ಕೊಡುತ್ತಾರೆ ಎಂಬುದು ನನ್ನ ಅಭಿಪ್ರಾಯವಲ್ಲ. ಅವರ ಅತಿವಿಧೇಯತೆಯಿಂದ ಭಾಷಾಂತರಗಳು ಓದಲಾಗದಂಥ ಪೆಡಸುರಚನೆಗಳಾಗಿರುವುದಕ್ಕೆ ನಮ್ಮ ಭಾಷಾಂತರ ಸಾಹಿತ್ಯ ಅನೇಕ ನಿದರ್ಶನಗಳನ್ನು ಒದಗಿಸಿದೆ. ಶ್ರೀ ಶಂಕರಗೌಡರ ಅನುವಾದ ಈ ಅಪಾಯದಿಂದ ಸಂಪೂರ್ಣವಾಗಿ ದೂರವಾಗಿದೆ ಎಂಬುದನ್ನು ನಾನಾಗಲೇ ನಿದರ್ಶಿಸಿದ್ದೇನೆ. ನಾನು ಹೇಳ ಹೊರಟಿರುವುದು ಇಷ್ಟು. ಶ್ರೀ ಗೌಡರು ಭಾವದ ಎಳೆಯನ್ನು ಹಿಡಿದು ಸಾಗುವಂಥ ಸಹೃದಯ ಮನೋಧರ್ಮದವರು. ಹೀಗಾಗಿ ಕೆಲವು ಸಂದರ್ಭಗಳಲ್ಲಿ ಅವರು ಬಳಸಿರುವ ಪರ್ಯಾಯಗಳು ಯಥಾರ್ಥವೆಂದು ಹೇಳಲು ಆಗುವಂತಿಲ್ಲ. ಉದಾಹರಣೆಗೆ ಈ ವಾಕ್ಯವನ್ನು ಗಮನಿಸಿ: "" Its *conclusions* and *inferences* are unwarranted.[31] ಈ ವಾಕ್ಯದಲ್ಲಿ ಬಂದಿರುವ '' conclusion '' ಮತ್ತು '' inference ' ಶಬ್ದಗಳಿಗೆ ಕ್ರಮಶಃ 'ಸಿದ್ಧಾಂತ' ಮತ್ತು 'ತರ್ಕ' ಎಂಬ ಶಬ್ದಗಳನ್ನು ಪರ್ಯಾಯವಾಗಿ ಬಳಸಿ, "ಅದರ ಸಿದ್ಧಾಂತ ಮತ್ತು ತರ್ಕ ಸಮರ್ಥಿಸಲಾಗದವುಗಳಾಗಿವೆ'[32] ಎಂದು ಭಾಷಾಂತರಿಸಿರುವುದು ಸಾಧುವಲ್ಲ. ಈ ಸಂದರ್ಭದಲ್ಲಿ 'ತೀರ್ಮಾನ' ಮತ್ತು 'ಅನುಮಾನ' ಶಬ್ದಗಳು ಹೆಚ್ಚು ಅರ್ಥಪೂರ್ಣವಾಗುತ್ತಿದ್ದುವು.

ಅಂತೆಯೇ, ಈ ವಾಕ್ಯವನ್ನು ಗಮನಿಸಿ: '*English Translation* of an original certificate of "converson" that was given to Gandhiji on his arrival in Noakhali ran : Golam Rahman, father's name Abdur Rahman. The said person has accepted holy Islam on 15-10-46. His former name was Satyendra Kumar Majumdar [33] ಇದನ್ನು ಅನುವಾದಿಸುವಾಗ ಉತ್ತರಾರ್ಧವನ್ನು ಅದೇ ರೀತಿಯಲ್ಲಿ ಉಳಿಸಿಕೊಂಡು, ಪೂರ್ವಾರ್ಧವನ್ನು ಮಾತ್ರ ಭಾಷಾಂತರಿಸುವುದು ಅಗತ್ಯವಾಗುತ್ತದೆ. ಅಲ್ಲಿರುವ ಹೇಳಿಕೆಯ ಸ್ವರೂಪದಿಂದಾಗಿ. ಆದರೆ, ಹಾಗೆ ಮಾಡದೆ, ಗಾಂಧೀಜಿ ನೌಖಾಲಿಗೆ ಬಂದಾಗ ಅವರಿಗೆ ಕೊಟ್ಟ 'ಮತಾಂತರ'ದ ಒಂದು ಮೂಲ ಪ್ರಮಾಣಪತ್ರದ ಆಂಗ್ಲ ಭಾಷಾಂತರ ಈ ರೀತಿ ಇತ್ತು: "ಗುಲಾಮ್ ರಹಮಾನ್, ತಂದೆಯ ಹೆಸರು ಅಬ್ದುಲ್ ರಹಮಾನ್, ಈ ವ್ಯಕ್ತಿ ೧೫–೧೦–೧೯೪೬ ರಂದು ಪವಿತ್ರ ಇಸ್ಲಾಂ ಮತವನ್ನು ಸ್ವೀಕರಿಸಿದ್ದಾನೆ. ಅವನ ಮೊದಲ ಹೆಸರು, ಸತ್ಯೇಂದ್ರಕುಮಾರ್ ಮಜುಮ್‌ದಾರ್."[34] ಎಂದು ಮೊದಲಾಗಿ ಭಾಷಾಂತರಿಸುವುದು. ಸ್ವಾಭಾವಿಕ ತರ್ಕಕ್ಕೆ ವಿರುದ್ಧವಾಗುತ್ತದೆ. ಕನ್ನಡ ಓದುಗನ ದೃಷ್ಟಿಯಿಂದ ಈ ಭಾಗದ ಭಾಷಾಂತರವನ್ನು ಕೊಡುವುದು ಅನಿವಾರ್ಯವೆಂದು ಹೇಳುವುದಾದರೆ, ಮೊದಲು ಮೂಲವನ್ನು ಯಥಾವತ್ತಾಗಿ ಇಂಗ್ಲಿಷ್‌ನಲ್ಲಿ ಕೊಟ್ಟು ಈ ಅನುವಾದವನ್ನು ಕಂಸಗಳಲ್ಲಿ ಅಳವಡಿಸುವುದು ಅಗತ್ಯವಾಗುತ್ತದೆ.

ಇದೇ ರೀತಿ, ಮೂಲದಲ್ಲಿ ಕೆಲವು ಭಾಗಗಳು ಅನುವಾದಿಸದೆ ಬಿಟ್ಟು ಬಿಟ್ಟಿರುವುದೂ ಉಂಟು. ಉದಾಹರಣೆಗೆ. "This was like 'Alice in Wonder-land' logic"[35] ಇದನ್ನು "ಈ ವಾದ ವಿಚಿತ್ರವಾಗಿತ್ತು"[36] ಎಂದು ಸಂಕ್ಷೇಪಿಸಲಾಗಿದೆ. ಈ ಸಂಕ್ಷೇಪಣವನ್ನು ಒಂದು ದೃಷ್ಟಿಯಲ್ಲಿ ಸಮರ್ಥಿಸಬಹುದಾದರೂ, ಇನ್ನೊಂದು ದೃಷ್ಟಿಯಿಂದ ಹಾಗೆ ಮಾಡುವುದು ಉಚಿತವೆನ್ನಿಸದು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಅನುವಾದಕರ ಈ ಔಚಿತ್ಯದೃಷ್ಟಿ ಪುಸ್ತಕದ

ಉದ್ದಕ್ಕೂ ಸರಿಯಾಗಿ ಕಾರ್ಯಶೀಲವಾಗಿಲ್ಲ. ಗಾಂಧೀಜಿಯವರ ಚೀಲದಲ್ಲಿದ್ದ ಪುಸ್ತಕಗಳ ಒಂದು ಪಟ್ಟಿ 'ಬರಿಗಾಲಿನ ಯಾತ್ರಿಕ' ಅಧ್ಯಾಯದ ಎರಡನೆಯ ಪ್ರಕರಣದಲ್ಲಿ ಬರುತ್ತದೆ.[37] ಅಲ್ಲಿ ಬರುವ The Sayings of Mohammad; 'Glances at Islam', The Book of Daily Thoughts and Prayer', Practice & Precepts of Jesus' ನಂಥ ಆಂಗ್ಲ ಪುಸ್ತಕಗಳ ಜೊತೆಗೆ 'ಸುಖಮಣಿ ಸಾಹೇಬ್' ಎಂಬ ಸಿಖ್ಖರ ಪವಿತ್ರಗ್ರಂಥ, 'ಶ್ರೀರಾಮ ಚರಿತ ಮಾನಸ', 'ಆಶ್ರಮ ಭಜನಾವಲೀ', 'ಭಗವದ್ಗೀತೆ'ಯಂಥ ಇತರ ಗ್ರಂಥಗಳ ಹೆಸರೂ ಕಾಣಿಸಿ ಕೊಳ್ಳುತ್ತವೆ. ಇಲ್ಲೆಲ್ಲ ಇಂಗ್ಲಿಷ್ ಶೀರ್ಷಿಕೆಗಳನ್ನು ಭಾಷಾಂತರಿಸಿಬಿಡಲಾಗಿದೆ. ಇದರಿಂದ ಈ ಎಲ್ಲ ಗ್ರಂಥಗಳು ಯಾವ ಯಾವ ಭಾಷೆಯಲ್ಲಿವೆ ಎಂಬ ಬಗೆಗೆ ಗೊಂದಲ ಉಂಟಾಗುವಂತಾಗಿದೆ. ಹೋಗಲಿ, ಈ ಮೊದಲೇ ಕನ್ನಡದಲ್ಲಿಯೂ ಪ್ರಕಟವಾಗಿದ್ದ ಜವಾಹರಲಾಲ ನೆಹರೂ, ಅವರ 'Discovery of India''ದ ಶೀರ್ಷಿಕೆಯನ್ನು 'ಭಾರತ ಪರಿಚಯ' ಎಂದು ಭಾಷಾಂತರಿಸುವುದಕ್ಕೆ ಬದಲಾಗಿ ಕನಿಷ್ಠ ಪಕ್ಷ ಕನ್ನಡದಲ್ಲಿ ಅದು ಪಡೆದಿದ್ದ 'ಭಾರತ ದರ್ಶನ' (ಅನು: ಎಸ್. ವಿ. ಕೃಷ್ಣಮೂರ್ತಿರಾವ್) ಎಂದಾದರೂ ಇರಿಸಿಕೊಳ್ಳಬಹುದಾಗಿತ್ತು. ಹೀಗಾಗಿ, ಪುಸ್ತಕಗಳ ಶೀರ್ಷಿಕೆಗಳ ಲೋಪನ ಅಥವಾ ಅನುವಾದಕ್ಕೆ ಸಾಮಾನ್ಯ ಸಮರ್ಥನೆಯನ್ನು ಒದಗಿಸುವುದು ಕಷ್ಟವಾಗುತ್ತದೆ.

ಇದೇ ರೀತಿ, ಅಡಿಟಿಪ್ಪಣಿಗಳ ಭಾಷಾಂತರದ ಸಂದರ್ಭದಲ್ಲಿಯೂ ಒಂದು ದೊಡ್ಡ ಲೋಪಕ್ಕೆ ಅವಕಾಶ ದೊರೆತಿದೆ. ೨೩ನೆಯ ಅಧ್ಯಾಯದ '(ಬ್ರಹ್ಮಚರ್ಯ)' ೫೧ನೆಯ ಅಡಿಟಿಪ್ಪಣಿಯನ್ನು ಹೀಗೆ ಕಾಣಿಸಲಾಗಿದೆ: "೫೧. 'ದಿ ಲಿವಿಂಗ್ ಬ್ರೇನ್,' ಲಂಡನ್, ೧೯೫೩, ಪು. ೧೭, ೧೯ ಮತ್ತು ೪೬." [38] ಆದರೆ, ಮೂಲದ ಅವತರಣಿಕೆ, "W. Grey Walter, the well-known neurologist in his treatise *The Living Brain* has thrown interesting light on the physiological basis of the evolution of higher faculties ಎಂದು ಆರಂಭಗೊಂಡು ೩೫ ಪಂಕ್ತಿಗಳವರೆಗೆ ವಿಸ್ತರಿಸಿಕೊಂಡು, ಈ ವಿಷಯದ ಬಗೆಗಿನ ಮೂರು ಮುಖ ಗಳನ್ನು ನಿರೂಪಿಸುತ್ತದೆ. ಈ ಇಡೀ ಅವತರಣಿಕೆ ಇಲ್ಲಿ ಮಾಯವಾಗಿದೆ.

ಇತ್ತ, ಅದೇ ಅಧ್ಯಾಯದ ೭೮ನೆಯ ಅಡಿಟಿಪ್ಪಣಿ 'The Basic Writings of Sigmund Freud' ನಿಂದ ಆಯ್ದ ಒಂದು ಉದ್ಧರಣವನ್ನೂ ಇದಕ್ಕೆ ಸಂವಾದಿಯಾಗಿರುವಂಥ ಗೆರಾಲ್ಡ್ ಹರ್ಡ್, ಸರ್ ಜಾನ್ ಉಡ್‌ರೋಫ್, ರೋಮೇನ್ ರೋಲಾ ಹಾಗೂ ಶ್ರೀ ರಾಮಕೃಷ್ಣರ ಗ್ರಂಥದ ಉಲ್ಲೇಖಗಳನ್ನು ಹೊಂದಿರುವ ಎರಡನೆಯ ಕಂಡಿಕೆಯನ್ನು ಒಳಗೊಂಡಿದೆ. ಆದರೆ, ಕನ್ನಡ ಅನುವಾದದಲ್ಲಿ ೪೦ ಪಂಕ್ತಿಗಳವರೆಗೆ ಹರಡಿಕೊಂಡಿರುವ ಐದು ಕಂಡಿಕೆಗಳಿವೆ.[40] ಇವು ಎಲ್ಲಿಂದಲೋ. ಬಂದು ಸೇರಿಕೊಂಡಿವೆ. ಒಂದಂತೂ ಖಂಡಿತ. ಇದು ೫೧ನೆಯ ಅಡಿಟಿಪ್ಪಣಿಗೆ ಸಂಬಂಧಿಸಿದ್ದಂತೂ ಅಲ್ಲ,

ಅಂತೆಯೇ ಅವಧಾರಣೆ ಅಥವಾ ಒತ್ತು ಬದಲಾಗಿರುವ ಸಂದರ್ಭಗಳೂ ಇವೆ. ಉದಾಹರಣೆಗೆ "In a letter to Sir Tej Bahadur Sapru I wrote"[41] : ಎಂಬುದು "ಸರ್ ತೇಜ್ ಬಹದೂರ್ ಸಪ್ರು ಅವರಿಗೆ ನಾನು ಒಂದು ಕಾಗದ ಬರೆದೆ"[42] ಎಂದಾಗಿದೆ.

ನಮ್ಮಲ್ಲಿ ಉಚ್ಚಾರಣ ಕೋಶಗಳು ಇಲ್ಲದಿರುವುದರಿಂದಾಗಿ, ಅಂಕಿತನಾಮಗಳ ಉಚ್ಚಾರಣೆ ತುಂಬ ಯಾದೃಚ್ಛಿಕವಾಗಿ ಪರಿಣಮಿಸಿದೆ. ಅನೇಕವೇಳೆ ಇಂಗ್ಲಿಷ್ ಅಕ್ಷರ ಜೋಡಣೆಯು ನಮ್ಮ ಇಚ್ಛೆಯ ಉಚ್ಚಾರಣೆಗೆ ಅನುಗುಣವಾಗಿ ಅವನ್ನು ಉಚ್ಚರಿಸುತ್ತ ಬಂದಿದ್ದೇವೆ. ಹೀಗಾಗಿ, ಇಂಥ ಗ್ರಂಥಗಳಲ್ಲಿ ವ್ಯಕ್ತಿನಾಮಗಳು ಹಾಗೂ ಸ್ಥಳನಾಮಗಳು ಕಾಣಿಸಿಕೊಳ್ಳುವ ರೂಪ ಕೆಲವು ಸಂದರ್ಭಗಳಲ್ಲಿ ಕಿರಿಕಿರಿ ಯನ್ನೂ ಉಂಟುಮಾಡಬಹುದು. ಉದಾಹರಣೆ:

i) Roman Roland ರೊಮೇನ್ ರೋಲ್ಯಾಂಡ್ ('ರೊಮೇನ್ ರೋಲಾ'ಗೆ ಬದಲು) [43]
ii) Noakhali ನೌಖಾಲಿ ('ನೋವಾಖಲೀ'ಗೆ ಬದಲು)[44]

iii) Sarwar — ಸರ್ವಾರ (' ಸರ್‌ವರ್ 'ಗೆ ಬದಲು)[45]

iv) Sandwip — ಸ್ಯಾಂಡ್‌ವಿಪ್ (' ಸನ್ ದ್ವೀಪ ' (ಜಯದ್ವೀಪ ಎಂಬ ಅರ್ಥದಲ್ಲಿ) ಕ್ಕೆ ಬದಲು)[46]

ಹೀಗೆ ಉಚ್ಚಾರಣ ವ್ಯತ್ಯಾಸವಾಗಿರುವುದರ ಜೊತೆಗೆ, ಒಂದು ಕಡೆಯಲ್ಲಿ ಹೆಸರೇ ಬದಲಾಗಿ ಬಿಟ್ಟಿರುವುದೂ ಉಂಟು (ಇದು ಅಚ್ಚಿನ ತಪ್ಪಾಗಿರುವ ಸಂಭವವನ್ನೂ ತಳ್ಳಿಹಾಕಲಾಗುವುದಿಲ್ಲ). " One of Ghulam Sarwards men "[47] ಎಂಬುದು " ಗುಲಾಮ್ ಸರ್ದಾರರ ಕಡೆಯ ನೋರ್ವನು " ಎಂದು ಕಾಣಿಸಿಕೊಂಡಿದೆ, ೧೧ನೆಯ ಅಧ್ಯಾಯದ ೧೫ನೆಯ ಅಡಿಟಿಪ್ಪಣಿಯಲ್ಲಿ.

ಇದರ ಜೊತೆಗೆ, ಮೂಲ ಲೇಖಕರು, ' ಕೃತಜ್ಞತೆಗಳು ' ಶೀರ್ಷಿಕೆಯ ಅಂಗವಾಗಿ, ತಮ್ಮ ಗ್ರಂಥದಲ್ಲಿ ಅನಿವಾರ್ಯವಾಗಿ ಉಳಿದುಹೋದ ತಪ್ಪುಗಳಿಗಾಗಿ ವಿಷಾದಿಸಿ ಅವುಗಳಿಗೆ ಪ್ರತಿಯಾಗಿ ಸೂಚಿಸಿರುವ ತಿದ್ದುಪಡಿಗಳನ್ನು ಮೂಲಗ್ರಂಥದಲ್ಲಿ ಅವಳಡಿಸಿಕೊಂಡು, ಸರಿಯಾದ ಮಾಹಿತಿಯನ್ನು ಕೊಡಬಹುದಾಗಿದ್ದ ಸಂದರ್ಭವನ್ನೂ, ಅನುವಾದಕರು ಬಳಸಿಕೊಂಡಿಲ್ಲ. ಹೀಗಾಗಿ, ಮೂಲಗ್ರಂಥದಲ್ಲಿ ಉಳಿದು ಹೋಗಿದ್ದ ತಪ್ಪುಗಳು ಕನ್ನಡ ಆವೃತ್ತಿಯಲ್ಲೂ ಉಳಿದುಹೋಗಿವೆ. " ಅಸಂಬದ್ಧವೆಂದು ತಿಳಿದಿರುವ ಸಂದರ್ಭದಲ್ಲಿಯೂ ಕರ್ತವ್ಯಬದ್ಧನಾಗಿ ಭಾಷಾಂತರ ಸಾರ ವಿಧೇಯನಾಗಿರಬೇಕು " ಎಂದು ಭಾಷಾಂತರ ತಜ್ಞನೊಬ್ಬ ಘೋಷಿಸಿದ್ದರೂ, ಮೂಲ ಲೇಖಕನೇ ಸೂಚಿಸಿರುವ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳುವುದು ಅಸಾಧ್ಯವೇನೂ ಅಲ್ಲ. ಇದಕ್ಕಾಗಿ ಭಾಷಾಂತರದ ಓದುಗರು ಈ ಭಾಗವನ್ನು ಓದುವ ಮುಂಚೆ ' ಕೃತಜ್ಞತೆಗಳು ' ಭಾಗವನ್ನು ಓದಲೇಬೇಕೆಂದು ವಾದಿಸುವುದು ಸಾಧುವಾಗಲಾರದು. ಹೇಗೂ ಇದು ಭಾಷಾಂತರಕಾರನ ವಿವೇಚನೆಗೆ ಬಿಟ್ಟಿರುವ ವಿಚಾರವೆಂಬುದರಲ್ಲಿ ಅನುಮಾನವಿಲ್ಲ.

ನಾನು ನನ್ನ ಈ ಪ್ರಬಂಧದ ಕೊನೆಯ ಭಾಗದಲ್ಲಿ ತೋರಿಸಿರುವ ಅರೆಕೊರೆಗಳು ತೀರ ಗಂಭೀರ ಸ್ವರೂಪದವಲ್ಲವೆಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಭಾಷಾಂತರದ ಒಟ್ಟಾರೆ ಯಶಸ್ಸನ್ನು ಗಮನಿಸಿದಾಗ, ಅನುವಾದಕರು ತೋರಿರುವ ಮುತುವರ್ಜಿಯ ಅನುಭವ ಅನುವಾದದ ಓದುಗನಿಗೆ ಹೆಜ್ಜೆ ಹೆಜ್ಜೆಗೂ, ಪುಟಪುಟದಲ್ಲೂ ಆಗುವಾಗ, ಈ ಸಣ್ಣ ಅರೆ ಕೊರೆಗಳು ಕೃತಿಯ ಉಪಾದೇಯತೆಗೆ ಯಾವ ರೀತಿಯಲ್ಲೂ ಭಂಗವನ್ನು ತರುವಂಥವಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸಂಸ್ಕೃತ ಲಾಕ್ಷಣಿಕನೊಬ್ಬನ ಮಾತುಗಳನ್ನು ಬಳಸಿಕೊಂಡು ಹೇಳಬಹುದಾದರೆ, ಈ ಅರೆಕೊರೆಗಳು " ರತ್ನದಲ್ಲಿರುವ ಗೀರುಪಾರುಗಳ ಹಾಗೆ. ಅವು ಇದ್ದ ಮಾತ್ರಕ್ಕೆ ರತ್ನದ ರತ್ನತ್ವ ಧ್ವಂಸವಾಗುವುದಿಲ್ಲ."[49] ಇಂಥ ಒಂದು ಅನುವಾದ ರತ್ನವನ್ನು ಅದು ಮೊದಲ ಪ್ರಯತ್ನದಲ್ಲೇ ನೀಡಿರುವುದಕ್ಕಾಗಿ ಸ್ತುತ್ಯರ್ಹರಾಗಿದ್ದಾರೆ. ಒಟ್ಟಿನಲ್ಲಿ, ಕುವೆಂಪು ಅವರೆಂದಿರುವಂತೆ " ಗೌಡರು ಒಂದು ಶ್ರೇಷ್ಠವಾದ ಭಾಷಾಂತರವನ್ನು ಸೃಜಿಸಿ ಕೃತಾರ್ಥರಾಗಿದ್ದಾರೆ. ಅಭಿನಂದನಾರ್ಹರಾಗಿದ್ದಾರೆ."[50] ಅಷ್ಟೇ ಅಲ್ಲ, " ಅವರ ಇತರ ಎಲ್ಲ ಸಾಧನೆಗಳಿಗಿಂತ ಮಿಗಿಲಾಗಿ ಈ ಕೃತಿ ಅವರ ಹೆಸರನ್ನು ನಾಡಿನಲ್ಲಿ, ಜನಮನದಲ್ಲಿ ಚಿರಸ್ಥಾಯಿಗೊಳಿಸುತ್ತದೆ. ಈ ಗ್ರಂಥದಿಂದ ಅವರು ಧನ್ಯರಾಗಿದ್ದಾರೆ; ಕನ್ನಡಿಗರನ್ನೂ ಧನ್ಯರನ್ನಾಗಿ ಮಾಡಿದ್ದಾರೆ. ಕನ್ನಡಕ್ಕೆ ಇದೊಂದು ಅದ್ಭುತವಾದ ಕೊಡುಗೆ; ಕನ್ನಡದಲ್ಲಿ ಬಂದಿರುವ ಗಾಂಧೀಸಾಹಿತ್ಯಕ್ಕೆ ಭೂಷಣಪ್ರಾಯವಾದುದು "[51] ಎಂಬ ಅವರ ಪ್ರಶಂಸೆಯೊಂದಿಗೆ ದನಿಗೂಡಿಸಲು ಯಾರೂ ಹಿಂದೆಗೆಯಬೇಕಾಗಿಲ್ಲ.

ಅಡಿಟಿಪ್ಪಣಿಗಳು

೧. *Mahatma Gandhi–The Last Phase* : (*Vol. I*) Pyarelal, Navajivan Publishing House, Ahmedabad, 1956. ರಾಜೇಂದ್ರ ಪ್ರಸಾದ್ ಅವರ ಮುನ್ನುಡಿ. ಮೂಲ ಹೇಳಿಕೆ ಹೀಗಿದೆ : "The present book covers the story of the years of his life in which the

results of all the experiments that he carried out throughout his career were put to their severest and final test." (p. vii) ಅನುವಾದ ಲೇಖಕನದು.

೨. 'ಮಹಾತ್ಮ ಗಾಂಧಿ: ಅಂತಿಮ ಹಂತ' (ಸಂ. ೧): ಪ್ಯಾರೇಲಾಲ್; ಅನು: ಕೆ. ವಿ. ಶಂಕರಗೌಡ; ಪ್ರ: ಗಾಂಧೀ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೬, ೧೯೭೮. ಪೀಠಿಕೆ, ಪು. xvii.

೩. ಅದೇ, ಪು. xxvii

೪. ಅಲ್ಲೇ, ಪು. xxviii xxix

೫–೬. ಅಲ್ಲೇ, ಪು. xxix xxiv

೭. ಅದೇ, ಪು. xxvii

೮. ಅದೇ. ಪು. ix-x

೯. 'ಕಬ್ಬಿನಹಾಲು', ಮೈಸೂರು–೧೨, ೧೯೭೫, ಪು. ೨೦.

೧೦. 'ಅಂತಿಮಹಂತ', ಪೂರ್ವೋಕ್ತ; ಪು. xiii

೧೧. ಅದೇ. ಪು. x

೧೨. ಅಲ್ಲೇ.

೧೩. ಅದೇ. ಪು. ೧೯೬

೧೪. *The Last Phase*; *op.cit*, 188

೧೫. ಅದೇ. ಪು. ೨೪೪.

೧೬. 'ಅಂತಿಮ ಹಂತ', ಪೂರ್ವೋಕ್ತ; ಪು. ೨೫೬.

೧೭. *The Last Phase*; *op. cit.*, p. 296

೧೮. 'ಅಂತಿಮ ಹಂತ,' ಪೂರ್ವೋಕ್ತ, ಪು. ೩೧೯.

೧೯. ಅದೇ. ಪು. ೬೧೩.

೨೦. *The Last Phase*; *op. cit.*, *pp.* 586–7

೨೧. 'ಅಂತಿಮ ಹಂತ', ಪೂರ್ವೋಕ್ತ; ಪು. xiii

೨೨. ಅದೇ. ಪು. x

೨೩. ಅಲ್ಲೇ.

೨೪. ಅದೇ. ಪು. xiii

೨೫. *The Last Phase*; *op. cit.*, pp. 495–6

೨೬. 'ಅಂತಿಮ ಹಂತ,' ಪೂರ್ವೋಕ್ತ; ಪು. ೫೧೮.

೨೭. *The Last Phase*; *op. cit.*, p. 342

೨೮. 'ಅಂತಿಮ ಹಂತ,' ಪೂರ್ವೋಕ್ತ; ಪು. ೩೫೬.

೨೯. 'ಭಗವದ್ಗೀತೆ,' ಅಧ್ಯಾಯ ೨, ಶ್ಲೋಕಗಳು: ೬೭–೭೨.

೩೦. 'ಅಂತಿಮ ಹಂತ,' ಪೂರ್ವೋಕ್ತ ; ಪು. x

೩೧. *The Last Phase*: *op. cit.*, p. 93

೩೨. 'ಅಂತಿಮ ಹಂತ,' ಪೂರ್ವೋಕ್ತ, ಪು. ೯೭.

೩೩. *The Last Phase*: *op. cit.*, p. 721–2

೩೪. 'ಅಂತಿಮ ಹಂತ,' ಪೂರ್ವೋಕ್ತ, ಪು. ೭೫೭.

೩೫. *The Last Phase*: *op. cit.*, p. 93

೩೬. 'ಅಂತಿಮ ಹಂತ,' ಪೂರ್ವೋಕ್ತ, ಪು. ೯೭.

೩೭. *The Last Phase*: *op. cit.*, p. 495
೩೮. ‘ಅಂತಿಮ ಹಂತ,’ ಪೂರ್ವೋಕ್ತ; ಪು. ೭೬೮.
೩೯. *The Last Phase*: *op. cit.*, p. 732–3
೪೦. ‘ಅಂತಿಮ ಹಂತ’, ಪೂರ್ವೋಕ್ತ, ಪು. ೭೬೯–೭೦.
೪೧. *The Last Phase*: *op. cit.*, p. 86
೪೨. /ಅಂತಿಮ ಹಂತ. ಪೂರ್ವೋಕ್ತ, ಪು. ೮೯.
೪೩. ಅದೇ, ಪು. ೭೬೮, ೭೭೦ ಇತ್ಯಾದಿ.
೪೪. ಅದೇ, ಪು. ೫೧೬–೨೮, ೭೫೭ ಇತ್ಯಾದಿ.
೪೫. ಅದೇ, ಪು. ೫೨೯, ೫೩೦, ಇತ್ಯಾದಿ.
೪೬. ಅದೇ, ಪು. ೭೫೭, ಇತ್ಯಾದಿ.
೪೭. *The Last Phase*: *op. cit.*, p. 721
೪೮. ‘ಅಂತಿಮ ಹಂತ,’ ಪೂರ್ವೋಕ್ತ, ಪು. ೭೫೭.
೪೯. ‘ಭಾರತೀಯ ಕಾವ್ಯ ಮೀಮಾಂಸೆ’: ತೀ.ನಂ. ಶ್ರೀಕಂಠಯ್ಯ; ಪ್ರ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬; ೧೯೫೩. ತಿದ್ದಿದ ಎರಡನೆಯ ಆವೃತ್ತಿ; ಪು. ೧೫೦ ರಿಂದ ಉದ್ಧೃತ.
೫೦. ‘ಅಂತಿಮ ಹಂತ,’ ಪೂರ್ವೋಕ್ತ, ಪು. x
೫೧. ಅಲ್ಲೇ.

ಗಾಂಧೀಜಿ ತಮ್ಮ ಆತ್ಮಚರಿತ್ರೆಯನ್ನು ಯಾವುದೋ ಘಟ್ಟದವರೆಗೆ ಭಾಗಶಃ ಬರೆದಿದ್ದಾರಷ್ಟೆ. ಅದನ್ನು ಪೂರ್ಣಗೊಳಿಸುವಂತಿದೆ ಪ್ಯಾರೇಲಾಲರ ಈ ಕೃತಿ. ಇದು ಜೀವನ ಚರಿತ್ರೆಯೂ ಹೌದು, ಆತ್ಮಚರಿತ್ರೆಯೂ ಹೌದು, ಗಾಂಧೀಜಿಯ ಪುಣ್ಯಾತ್ಮದ ಅನಾವರಣ ಇಲ್ಲಿದೆ. ಬಾಹ್ಯ ಘಟನೆಗಳಿಂದ ಈ ಹೊತ್ತಗೆ ಇಡಿಕಿರದಿದ್ದರೂ, ಅವೆಲ್ಲ ಗಾಂಧೀಜಿಯ ಅಂತರಂಗದ ಮೇಲೆ ಬೆಳಕು ಬೀರಿ ಸಾರ್ಥಕ್ಯಗೊಳ್ಳುತ್ತವೆ. ಗಾಂಧೀಜಿಯ ದೈವಶ್ರದ್ಧೆ, ಸತ್ಯಾನುಸಂಧಾನ, ಅಹಿಂಸಾನುಷ್ಠಾನ, ಪರಿಪೂರ್ಣತಾ ಅಭೀಪ್ಸೆ ಮುಂತಾದವು ಇಲ್ಲಿ ಅತ್ಯಂತ ಸಮುಜ್ವಲವಾಗಿ ಆವಿಷ್ಕೃತವಾಗಿವೆ. ಪರಿಪೂರ್ಣತೆ ದೊಡ್ಡ ದೊಡ್ಡ ವಿಷಯಗಳಿಂದ ಮಾತ್ರ ಸಿದ್ಧಿಸತಕ್ಕದ್ದು ಎಂದಲ್ಲ; ಸಣ್ಣ ಸಣ್ಣ ಸಂಗತಿಗಳೂ ಅದನ್ನು ರೂಪಿಸುತ್ತವೆ. ಗಾಂಧೀಜಿಯ ದೃಷ್ಟಿಯಲ್ಲಿ ಯಾವುದೂ ಅಲ್ಪವಲ್ಲ ; ಅವರು ನಿಜವಾದ ಸಮದರ್ಶಿ, ಅವರ ಶಿಸ್ತು ಅಚ್ಚುಕಟ್ಟು ಸರ್ವವ್ಯಾಪಕ. ಅವರ ಜೀವನ ಪರಿಧಿಯೊಳಕ್ಕೆ ಬಂದು ಎಲ್ಲರೂ, ಎಲ್ಲವೂ ಗಾಂಧೀತನದ ದೀಕ್ಷೆಗೆ ಒಳಗು. ಹೀಗಾಗಿ ಪ್ರತ್ಯಂಶದಲ್ಲೂ ಅವರ ಎತ್ತರ ಕಾಣಬರುತ್ತದೆ. ಪ್ರತಿ ಬಿಂದುವಿನಲ್ಲೂ ಅವರ ವ್ಯಕ್ತಿತ್ವದ ಸಿಂಧುವನ್ನು ಸಂದರ್ಶಿಸುತ್ತೇವೆ.

(ಮಹಾತ್ಮ ಗಾಂಧಿ : ಅಂತಿಮ ಹಂತ ಗ್ರಂಥದಲ್ಲಿ ಕುವೆಂಪುರವರ 'ಹಾರೈಕೆ' (ಪು. ix)ಯಿಂದ ಉದ್ಧೃತ)

ಕೆ.ಸ. ೨೩೨೮೧ ಎಂಯುಪಿಎಂ—೫೦೦ + ೨೫ ಪ್ರತಿಗಳು—೨೫—೫—೮೨

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬